32 ಕೋಟಿ ರೂಪಾಯಿಗಳಷ್ಟು ಹಣ ನಷ್ಟ ಆಗಿರುವುದರ ಬಗ್ಗೆ ನಾನು ಕೂಡ ಸೂಚನೆಯನ್ನು ಕಳುಹಿಸಿದ್ದೇನೆ. ದಯಮಾಡಿ ಇವತ್ತು ಸಾಧ್ಯವಿಲ್ಲದಿದ್ದರೂ ಕೂಡ ಮುಂದೆ ಸಭೆ ನಡೆಯುವಂತಹ ಎರಡು ದಿವಸಗಳಲ್ಲಿ ಒಂದು ದಿವಸ ಇದನ್ನು ತಮ್ಮ ಕಾರ್ಯಕಲಾಪಗಳ ಪಟ್ಟಿಯಲ್ಲಿ ಹಾಕಿ ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

68ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿಚರ್ಚೆ

ವಿಷಯ :– ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡುವುದು.

† ಶ್ರೀ ಬಿ. ಎಸ್. ಯಡಿಯೂರಪ್ಪ :– (ಶಿಕಾರಿಪುರ) ಸನ್ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರವು ಈ ದೇಶದ ರೈತರ ಸಾಲ ಮನ್ನಾ ಮಾಡುವಂಥ ಒಂದು ಯೋಜನೆಯನ್ನು ಏನು ಜಾರಿಗೆ ತಂದಿದೆ ? ಇದರಿಂದ ನಮ್ಮ ರಾಜ್ಯದ ರೈತರುಗಳಿಗೆ ಅನುಕೂಲವಾಗುವುದಿಲ್ಲ. ರೈತ ಎಂದರೆ ಈ ಕೆಳಕಂಡ ಸಮೂಹದಲ್ಲಿ ಸೇರುತ್ತಾನೆ. ಕೃಷಿ ಕಾರ್ಮಿಕರು ಇದರಲ್ಲಿ ಸೇರುತ್ತಾರೆ, ನೇಕಾರ ಇದರಲ್ಲಿ ಸೇರುತ್ತಾನೆ, ಮೀನುಗಾರ ಇದರಲ್ಲಿ ಸೇರುತ್ತಾನೆ. ಹೀಗಾಗಿ ಈ ರೈತ ಸಮೂಹದಲ್ಲಿ ಗ್ರಾಮೀಣ ಪ್ರದೇಶದ ಜನತೆಗೆ ಸಂಬಂಧಪಟ್ಟಂತೆ ಅತ್ಯಂತ ಪ್ರಮುಖವಾದ ವಿಷಯದ ಬಗ್ಗೆ ಚರ್ಚೆಯಾಗಬೇಕು. ಕರ್ನಾಟಕ ರಾಜ್ಯದಲ್ಲಿ ಒಂದು ವಿಶೇಷವಾದಂಥ ಪರಿಸ್ಥಿತಿ ಇತ್ತು. 1983 ಮತ್ತು 1987 ರಲ್ಲಿ ಇಂಟರೆಸ್ಟ್ ಸಬ್ಸಿಡಿ ಸ್ಕೀಮ್‌ನ್ನು ಅವತ್ತಿನ ಸರ್ಕಾರ ತಂದಿತು.

(ಮಾನ್ಯ ಸದಸ್ಯರಾದ ಬ್ಲೇಸಿಯಸ್ ಡಿಸೌಜರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರುವ ಹಾಗೆ, ಸುಸ್ತಿದಾರರು ಶೇಕಡ 5 ಜನ ನಮ್ಮ ರೈತರು ಇಲ್ಲ, ಮತ್ತೆ ಆ ಸಮಯದಲ್ಲಿ ರೈತ ಸಾಲ ಕೊಡುವಂಥ ಸ್ಥಿತಿಯಲ್ಲಿ ಇಲ್ಲದೇ ಇದ್ದಂಥ ಸಂದರ್ಭದಲ್ಲೂ ಸಹಾ ಈ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವಂಥ ಸಂದರ್ಭದಲ್ಲಿ ರೈತನನ್ನು ಹೇಗಾದರೂ ಋಣಮುಕ್ತನನ್ನಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ಎಲ್ಲಾ ಸಹಕಾರ ಸಂಘಗಳಲ್ಲಿ ರೈತನ ಹತ್ತಿರ ದುಡ್ಡು ಇಲ್ಲದಿದ್ದರೂ ಸಹಾ ಬುಕ್ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು ರಿನ್ಯೂ ಮಾಡಿದ ಪರಿಣಾಮ, ಇಡೀ ದೇಶದಲ್ಲಿ ಕೇಂದ್ರ ಸರ್ಕಾರದ ಈ ಯೋಜನೆಯಿಂದ ಆ ರೈತ ಸಮೂಹಕ್ಕೆ ಆಯಾ ರಾಜ್ಯದಲ್ಲಿ ಅನುಕೂಲವಾದರೂ, ಕರ್ನಾಟಕ ರಾಜ್ಯದಲ್ಲಿ ಇರುವಂಥ ರೈತನಿಗೆ ಇದರಿಂದ ಅನುಕೂಲವಾಗುವುದಿಲ್ಲ. ಅದಕ್ಕೆ, ಅನುಕೂಲವಾಗುವಂತೆ ರೈತರ ಸಾಲ ಮನ್ನಾ ಮಾಡಬೇಕೆಂದು ಒಂದು ಹೊಸ ಯೋಜನೆಯನ್ನು ನಮ್ಮ ರಾಜ್ಯ ಸರ್ಕಾರ ಮಾಡಬೇಕೆಂದು ಇವತ್ತಲ್ಲ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲರು ಅಧಿಕಾರ ವಹಿಸಿಕೊಂಡ ಮೊದಲ ದಿವಸವೇ ಇಲ್ಲಿ ಧರಣಿ ಕುಳಿತು ಹೋರಾಟ ಮಾಡಿದೆವು. ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೆ ತರುವುದಕ್ಕೆ ಮುಂಚೆ, ನಮ್ಮ ರಾಜ್ಯದಲ್ಲಿರುವಂಥ ರೈತನ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ನಮಗೆ ಅನುಕೂಲ ಕರವಾದಂಥ ರೈತರ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತರುವಂತೆ ಪ್ರಯತ್ನ ಮಾಡಿ ಎಂದು ಹೇಳಿ ಇಲ್ಲಿ ಧರಣಿ ಕುಳಿತು ಕಣ್ಣೀರು ಹಾಕಿದೆವು. ಅವತ್ತು ರೈತರ ಸಾಲ ವಸೂಲಾತಿಗೆ ತಡೆ ಆಜ್ಞೆಯನ್ನು ಸನ್ಮಾನ್ಯ ವೀರೇಂದ್ರ ಪಾಟೀಲರು ಕೊಟ್ಟಿದ್ದಂಥದ್ದು ನಮಗೆಲ್ಲಾ ಗೊತ್ತಿರುವಂಥ ಸಂಗತಿ. ಕೊನೆಗೂ ನಾವು ಅತ್ತು ಕರೆದು ಈ ಸದನ ಪ್ರಾರಂಭವಾದಾಗ ಇಲ್ಲಿ ಧರಣಿ ಕುಳಿತು ರಾಜ್ಯದ ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಸರ್ಕಾರ ಸರಿಯಾದಂಥ ನಿಲುವನ್ನು ತೆಗೆದುಕೊಳ್ಳಬೇಕು ಎನ್ನುವುದಕ್ಕೋಸ್ಕರ ಅನಿವಾರ್ಯವಾಗಿ ನಾನು ಧರಣಿ ಕುಳಿತುಕೊಳ್ಳುವಂಥ ಪರಿಸ್ಥಿತಿ ಒದಗಿ ಬಂತು. ಸನ್ಮಾನ್ಯ ಅಧ್ಯಕ್ಷರೇ, ಯಾರು ಅಧ್ಯಕ್ಷರಿದ್ದಾರೋ ಅವರೂ ಸಹಾ ರೈತರ ಮಕ್ಕಳಿದ್ದಾರೆ. ಈಗಿರುವಂಥ ಮಾನ್ಯ ಮುಖ್ಯಮಂತ್ರಿಗಳೂ ಸಹಾ ರೈತರ ಒಂದು ಕುಟುಂಬದ ಹಿನ್ನೆಲೆಯಿಂದ ಬಂದಿರತಕ್ಕವರಾಗಿದ್ದಾರೆ. ನಾನು ದೈವೀಕವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಈ ರೈತನ ಶಾಪ ಯಾರು ಯಾರಿಗೆ ತಟ್ಟಿದೆಯೋ ಅವರ್‍ಯಾರೂ ಉಳಿಯಲಿಲ್ಲ. ಸನ್ಮಾನ್ಯ ಮುಖ್ಯ-ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ನಾನು ಅನೇಕ ವರ್ಷಗಳಿಂದ ರೈತರ ಪರವಾಗಿ ಹೋರಾಟ ಮಾಡಿಕೊಂಡು ಬಂದಿರುವವನು. ಗೇಣಿದಾರರ ಸಮಸ್ಯೆ ಕಾಲದಿಂದ ರೈತರ ಪರವಾಗಿ ಹೋರಾಟ ಮಾಡಿದ್ದೇನೆ. ತಾವು ಕೃಷಿ ಸಚಿವರಾಗಿದ್ದಂಥ ಸಂದರ್ಭದಲ್ಲಿ ಅನೇಕ ಕಡೆ ತಾವು ಮಾತನಾಡಿದಂಥ ಸಂದರ್ಭದಲ್ಲಿ ಇದರ ಬಗ್ಗೆ ಹೇಳಿದ್ದೀರಿ. ಈ ಸದನದ ಒಳಗೂ ಸಹಾ ತಾವು ಕೃಷಿ ಸಚಿವರಾಗುವುದಕ್ಕಿಂತ ಮುಂಚೆ, ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ರೈತನ ಸಾಲ ಮನ್ನಾ ಮಾಡುವಂಥ ವಿಚಾರದಲ್ಲಿ ಅನುಕೂಲಕರವಾದಂಥ ಯೋಜನೆಯನ್ನು ತರಬೇಕೆಂದು ನಾವು ಕೇಳಿದಾಗ, ತಾವು ಇಲ್ಲೇ ಈ ಸದನದಲ್ಲೇ ಇದರ ಬಗ್ಗೆ ಸರಿಯಾದ ಯೋಜನೆ ಮಾಡಬೇಕು, ಈ ರಾಜ್ಯದ ರೈತನ ಪರಿಸ್ಥಿತಿ ಸರಿಯಿಲ್ಲವೆಂದು ಹೇಳಿದ್ದೀರಿ. ಇದರ ಜೊತೆಗೆ ನೀವು ರೈತರ ಪರವಾಗಿ ಮಾತನಾಡಿರುವಂಥ 15–20 ಪ್ರೆಸ್ ಕಟಿಂಗ್ಸ್ ಸಹಾ ನನ್ನ ಹತ್ತಿರ ಇದೆ. ಈ ರಾಜ್ಯದಲ್ಲಿ ರೈತನು ಬರಗಾಲಕ್ಕೆ ತುತ್ತಾಗಿ ಕಷ್ಟಪಡುತ್ತಿದ್ದಾನೆ, ಅವನನ್ನು ಋಣಮುಕ್ತನನ್ನಾಗಿ ಮಾಡುವಂಥ ಅಗತ್ಯ ಇದೆ ಎನ್ನುವ ಮಾತನ್ನು ನೀವು ಅನೇಕ ಬಾರಿ ಹೇಳಿದ್ದೀರಿ. ಅದು ಅಷ್ಟಕ್ಕೇ ನಿಲ್ಲಲಿಲ್ಲ. ತಾವು ಬಿಜಾಪುರದಲ್ಲಿ ಕೊಟ್ಟ

ಪತ್ರಿಕಾ ಹೇಳಿಕೆ ಪ್ರಕಾರ, ಪ್ರಧಾನಿಯವರನ್ನು ಅಂದರೆ ಸನ್ಮಾನ್ಯ ಚಂದ್ರಶೇಖರ್‌ರವರನ್ನು ತಾವು ಡೆಲ್ಲಿಯಲ್ಲಿ ಭೇಟಿ ಮಾಡಿದಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಪರಿಸ್ಥಿತಿ ಬೇರೆ ರೀತಿ ಇದೆ, ರಾಜ್ಯದಲ್ಲಿ ರೈತನು ಅನೇಕ ವರ್ಷಗಳ ಕಾಲ ಬರಗಾಲಕ್ಕೆ ತುತ್ತಾಗಿದ್ದಾನೆ; ನೀವು ತಂದಿರುವಂಥ ರೈತರ ಸಾಲ ಮನ್ನಾ ಯೋಜನೆಯಿಂದ ನಮ್ಮ ಕರ್ನಾಟಕ ರಾಜ್ಯದ ರೈತರಿಗೆ ಅನುಕೂಲವಾಗುವುದಿಲ್ಲ; ಅಲ್ಲಿ ಏನು ಕಂಡೀಷನ್ಸ್ ಇವೆ ಅಂದರೆ, ಅವನ ಬೆಳೆ 8 ಆಣೆಗಿಂತ ಕಡಿಮೆಯಾಗಿರಬೇಕು, ದಿನಾಂಕ 2–10–89ಕ್ಕೆ ಅವನು ಡಿಫಾಲ್ಟರ್ ಆಗಿರಬೇಕು, ಈ ರೀತಿ ಕಂಡೀಷನ್ಸ್ ಇರುವುದರಿಂದ ನಮ್ಮ ರಾಜ್ಯದ ರೈತನಿಗೆ ಅನುಕೂಲವಾಗುವುದಿಲ್ಲ. ಈ ಕಂಡೀಷನ್ಸ್‌ನನ್ನು

12–10 ಪಿ. ಎಂ.

ತೆಗೆದು ಹಾಕಿ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಮನವಿಯನ್ನು ಸಹ ತಾವು ಮಾಡಿದ್ದೀರಿ. ನಾನು ಇಲ್ಲಿ ಧರಣಿ ಕುಳಿತಂಥಾದ್ದು ಈ ವಿಷಯವನ್ನು ಪ್ರಸ್ತಾಪ ಮಾಡಿರತಕ್ಕಂಥಾದ್ದು ಏಕೆಂದರೆ ನೀವು ಏನು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಆ ಸಂದರ್ಭದಲ್ಲಿ ಇಡೀ ನಮ್ಮ ರಾಜ್ಯದ ರೈತರ ಪ್ರತಿನಿಧಿಗಳಾಗಿ ನಾವು ಇದ್ದೇವೆ, ನಿಮ್ಮ ಕೈಯನ್ನು ಬಲಪಡಿಸಬೇಕು ಎನ್ನುವಂತಹ ಒಂದೇ ಒಂದು ಕಾರಣಕ್ಕೋಸ್ಕರವಾಗಿ ನಾನು ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದೆ. ಆ ಸಂದರ್ಭದಲ್ಲಿ ನಾನು ಸಲಹೆ ಕೊಟ್ಟೆ. ತಾವು ಏನು ಕಳಕಳಿಯನ್ನು ಇಟ್ಟುಕೊಂಡು ಪ್ರಧಾನಿಯವರನ್ನು ಭೇಟಿ ಮಾಡಿದಿರಿ, ಈ ಒಂದು ಹಿನ್ನೆಲೆಯಲ್ಲಿ ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ಎಲ್ಲರ ಅಭಿಪ್ರಾಯ ಕೂಡ ಅದೇ ಇದೆ. ಇದು ಯಡಿಯೂರಪ್ಪನವರದು ಒಂದೇ ಅಭಿಪ್ರಾಯ ಅಲ್ಲ. ಅನೇಕ ಬಾರಿ ತಾವು ಈ ಮಾತನ್ನು ಹೇಳಿದಾಗ ನಾನು ಅತ್ಯಂತ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ನನಗಿಂತ ಯಾರಿಗೂ ಕೂಡ ರೈತರ ಬಗ್ಗೆ ಕಳಕಳಿ ಕಡಿಮೆ ಏನೂ ಇಲ್ಲ. ಸದನದ ಒಳಗಡೆ ಆಡಳಿತ ಪಕ್ಷದ ಕಡೆ ಇರುವಂತಹ ಮಾನ್ಯ ಸದಸ್ಯ ಸ್ನೇಹಿತರುಗಳಿಗೆ ಕೆಲವು ವೇಳೆ ಸ್ಪಷ್ಟವಾದ ಅಭಿಪ್ರಾಯಗಳನ್ನು ಕೊಡುವುದು ಕಷ್ಟವಾಗುತ್ತದೆ. ಹೀಗೆ ಇದ್ದಂತಹ ಸಂದರ್ಭದಲ್ಲೂ ಸಹ ಅನೇಕ ವೇಳೆ ಇದನ್ನು ಮೀರಿ ಆಡಳಿತ ಪಕ್ಷದಲ್ಲಿ ಕುಳಿತಿರುವ ನನ್ನ ಸ್ನೇಹಿತರುಗಳು ನಮ್ಮ ರಾಜ್ಯದ ರೈತನ ಪರಿಸ್ಥಿತಿ ಬಗ್ಗೆ ದೀರ್ಘವಾಗಿ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಈ ಎಲ್ಲಾ ಕಂಡೀಷನ್ಸ್ ಅನ್ನು ತೆಗೆದು ಹಾಕಿ ಈ ರಾಜ್ಯದ ರೈತನ ಸಾಲ ಮನ್ನಾ ಮಾಡುವಂತಹ ಅಗತ್ಯ ಇದೆ ಎಂಬ ಅಭಿಪ್ರಾಯವನ್ನು ಆ ಕಡೆ ಹಾಗೂ ಈ ಕಡೆ ಕುಳಿತಿರುವ ಎಲ್ಲರೂ ಅಭಿಪ್ರಾಯವನ್ನು ಕೊಟ್ಟಿರುವ ಈ ಸಂದರ್ಭದಲ್ಲಿ ನಾನು ದೊಡ್ಡ ಸಂಗತಿಯನ್ನೇನೂ ಒತ್ತಾಯ ಮಾಡಲಿಲ್ಲ. ಈ ಒಂದು ಸದನದಲ್ಲಿ ದೀರ್ಘವಾದ ಚರ್ಚೆ ಆಗಿ ಈ ಸದನದಲ್ಲಿ ಒಂದು ರೆಸಲ್ಯೂಷನ್ ಮಾಡೋಣ. ಕೇಂದ್ರ ಸರ್ಕಾರಕ್ಕೆ ಒತ್ತಾಯ ತರೋಣ. ರಾಜ್ಯದ ರೈತನ ಸಾಲ ಮನ್ನಾ ಆಗಬೇಕು ಎಂದರೆ ಈ ಕಂಡೀಷನ್ಸ್ ಅನ್ನು ತೆಗೆದುಹಾಕಬೇಕು, ನಾವು ಅರ್ಧ ಭಾರವನ್ನು ಹೊರುತ್ತೇವೆ ಎನ್ನುವ ಮಾತನ್ನು ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಎಲ್ಲ ಪಕ್ಷಗಳ ಮುಖಂಡರುಗಳ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮನಸ್ಸನ್ನು ಒಲಿಸಬೇಕು. ಈಗ ಇರುವಂತಹ ಸರ್ಕಾರ ಈ ದೇಶದ ಜನತೆಗೆ ಗೊತ್ತಿರುವ ಹಾಗೆ, ನೀವು ಕೊಡುತ್ತಿರುವ ಬೆಂಬಲದ ಸರ್ಕಾರ. ಒಂದು ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ದೂರವಾಣಿ ಮೂಲಕ ಮಾತನಾಡಿ ಈ ರಾಜ್ಯದ ರೈತನ ಸಾಲ ಮನ್ನಾ ಮಾಡುವ ದೃಷ್ಟಿಯಿಂದ ಈ ಕಂಡೀಷನ್ಸ್ ಅನ್ನು ವಾಪಸ್ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು, ಒತ್ತಾಯವನ್ನು ತಂದರೆ ನಿಶ್ಚಿತವಾಗಿ ಕೇಂದ್ರ ಸರ್ಕಾರ ಒಪ್ಪಿಕೊಳ್ಳುತ್ತದೆ. ಇಲ್ಲದಿದ್ದರೆ ಒಂದು ಕ್ಷಣ ಅವರು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಸಾಧ್ಯ ಇಲ್ಲ. ಆದ್ದರಿಂದ ಈ ಒಂದು ಪ್ರಯತ್ನವನ್ನು ಮಾಡಬೇಕು. ಆ ರೀತಿ ಕೇಂದ್ರ ಸರ್ಕಾರದಿಂದ ಅನುಕೂಲ ಆಗದೇ ಇದ್ದರೆ ನಿಮ್ಮ ಬೊಕ್ಕಸದಿಂದ ಹಣವನ್ನು ತುಂಬಿಕೊಂಡು, ಈ ರಾಜ್ಯದ ರೈತನನ್ನು ಋಣಮುಕ್ತನನ್ನಾಗಿ ಮಾಡಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ನಾನು ಧರಣಿ ಕುಳಿತು ಹೋರಾಟ ಮಾಡಬೇಕಾಯಿತು. ಆದರೆ ಅತ್ಯೂಕರೆದು ಈ ಒಂದು ವಿಶೇಷವಾದ ಚರ್ಚೆಗೆ ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ಅಂದುಕೊಂಡಿದ್ದೇನೆ. ಕೇವಲ ಇಲ್ಲಿ ಚರ್ಚೆ ಮಾಡುವುದರಿಂದ, ಏನೋ ಯಡಿಯೂರಪ್ಪ ಧರಣಿ ಕುಳಿತಿದ್ದಾನೆ, ಅವನಿಗೆ ಸಮಾಧಾನ ಆಗಬಹುದು ಎಂಬ ದೃಷ್ಟಿಯಿಂದ ಮಾಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಇದು ತುಂಬಾ ಗಂಭೀರವಾದ ಸಮಸ್ಯೆ. ತಾವು ಈ ರಾಜ್ಯದ ರೈತನ ಪರಿಸ್ಥಿತಿಯನ್ನು ತಿಳಿದಿರುವವರು. ಈ ಚರ್ಚೆ ಆದ ನಂತರ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ರಾಜ್ಯದ ರೈತನ ಸಾಲ ಮನ್ನಾ ಮಾಡುವುದಕ್ಕೆ ಬೇಕಾದಂತಹ ಕಂಡೀಷನ್ಸ್‌ನ್ನು ತೆಗೆಸಿ ಹಾಕುವಂತಹ ಪ್ರಯತ್ನ ಮಾಡಿ; ಅದಕ್ಕೆ ಬೇಕಾದ ಹಣವನ್ನು ಕೇಂದ್ರ ಸರ್ಕಾರದಿಂದಲಾದರೂ ತನ್ನಿ ಅಥವಾ ನೀವಾದರೂ ತುಂಬಿಕೊಡಿ. ಒಟ್ಟಿನಲ್ಲಿ ಈ ರಾಜ್ಯದ ರೈತನನ್ನು ಋಣಮುಕ್ತನನ್ನಾಗಿ ಮಾಡುವಂತಹ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆ ಎನ್ನುವಂತಹ ವಿಶ್ವಾಸದ ಮೇಲೆ ನಾನು ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ. ಒಂದು ಸಂಗತಿ ಎಲ್ಲ ಕಡೆ ಇದೆ. ಈ ರಾಜ್ಯದ ರೈತನ ಸಾಲವನ್ನು ಮನ್ನಾ ಮಾಡುವುದಾದರೆ ನಮ್ಮ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ತೊಂದರೆ ಆಗಿಬಿಡುತ್ತದೆ; ನಮ್ಮಲ್ಲಿ ಹಣ ಇಲ್ಲ ಎನ್ನುವ

ಭಾವನೆ ಏನು ಇದೆ ಅದು ಸರಿಯಲ್ಲ. ರೈತನ ಸಾಲವನ್ನು ಮನ್ನಾ ಮಾಡುವುದರಿಂದ ಅಭಿವೃದ್ಧಿ ಕಾರ್ಯ ಆಗುತ್ತದೆ. ಅವನು ಒಳ್ಳೆಯ ಬೆಳೆ ಬೆಳೆಯುತ್ತಾನೆ. ಆತನ ಹಣಕಾಸಿನ ಪರಿಸ್ಥಿತಿ ಸುಧಾರಣೆ ಆಗುತ್ತದೆ, ಅದಕ್ಕೆ ಸಹಾಯ ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ ಸರ್ಕಾರ ಯೋಚನೆ ಮಾಡಿದಾಗ ಮಾತ್ರ ಈ ರಾಜ್ಯದ ರೈತನ ಸಾಲವನ್ನು ಮನ್ನಾ ಮಾಡುವಂತಹ ಪ್ರಯತ್ನದಲ್ಲಿ ವಿಶೇಷವಾದಂತಹ ತೀರ್ಮಾನವನ್ನು ತಾವು ಮಾಡುತ್ತೀರಿ, ಮಾಡಬೇಕು ಎಂದು ನಾನು ಭಾವಿಸಿದ್ದೇನೆ ಮತ್ತು ಈ ಬಗ್ಗೆ ಒತ್ತಾಯವನ್ನು ಮಾಡುತ್ತೇನೆ. ಇವತ್ತು ಕೇವಲ ರೈತನ ಸಾಲ ಮನ್ನಾ ಮಾಡುವುದರಿಂದ ರೈತನು ನೆಮ್ಮದಿಯಿಂದ ಜೀವನ ಮಾಡುತ್ತಾನೆ ಎಂದೇನೂ ಇಲ್ಲ. ಅನೇಕ ವರ್ಷಗಳಿಂದ ಅವನಿಗೆ ಮಾಡಿದಂತಹ ಅನ್ಯಾಯದ ಪರಿಣಾಮವಾಗಿ ಇವತ್ತು ಈ ರೀತಿ ಸಾಲಗಾರನ ಮಗನಾಗಿ ಇರುವಂತಹ ರೈತನನ್ನು ಋಣಮುಕ್ತನನ್ನಾಗಿ ಮಾಡುವಂಥಾದ್ದು ಸರ್ಕಾರ ಮಾಡಿದ ಪಾಪಕ್ಕೆ ಇದೊಂದು ಪ್ರಾಯಶ್ಚಿತ್ತ. ಈ ಮಾತನ್ನು ನಾನು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಇವತ್ತು ರೈತನ ಉತ್ಪನ್ನಗಳಿಗೆ ಸತತವಾಗಿ ಒಂದು ಕಡಿಮೆ ಬೆಲೆ ಕಟ್ಟಿ, ಅವನ ಬೆಳೆಗೆ ಸರಿಯಾದ ಬೆಲೆ ಕೊಡದೆ ನಷ್ಟಕ್ಕೆ ಈಡು ಮಾಡಿ, ಅವನ ಆರ್ಥಿಕ ಚೈತನ್ಯವನ್ನೇ ಚಿವುಟಿ ಹಾಕುವಂತಹ ಪ್ರಯತ್ನವನ್ನು ಹಿಂದಿನ ಸರ್ಕಾರಗಳು ಮಾಡಿವೆ. ಅವನೂ ಮನುಷ್ಯ ಇದ್ದಾನೆ, ಅವನಿಗೂ ಆಸೆ ಆಕಾಂಕ್ಷೆಗಳು ಇವೆ. ಅವನ ಆರ್ಥಿಕ ಸ್ಥಿತಿ ಸುಧಾರಣೆ ಆದಾಗ ಮಾತ್ರ ಈ ದೇಶ ಉಳಿಯುತ್ತದೆ. ಈ ಒಂದು ಭಾವನೆಯಿಂದ ಅಧಿಕಾರದಲ್ಲಿದ್ದಂತಹ ಜನಗಳು ಯೋಚನೆ ಮಾಡಿದ್ದರೆ ಇವತ್ತು ನಮಗೆ ಇಂತಹ ದುಸ್ಥಿತಿ ಬರುತ್ತಾ ಇರಲಿಲ್ಲ. 1952 ನೇ ಇಸವಿಯಲ್ಲಿ ನಮ್ಮ ಯೋಜನೆಗಳು ಪ್ರಾರಂಭದ ಸಂದರ್ಭದಲ್ಲಿ ಈ ದೇಶದ ಕೃಷಿ ಉತ್ಪನ್ನ ಒಟ್ಟು 55 ಮಿಲಿಯನ್ ಟನ್‌ಗಳು ಇತ್ತು. ಕಳೆದ ವರ್ಷ ಮಾರ್ಚ ತಿಂಗಳಲ್ಲಿ ಒಂದು ಸಮೀಕ್ಷೆಯನ್ನು ಕೇಂದ್ರ ಸರ್ಕಾರದವರು ಮಾಡಿ ಹೊರಡಿಸಿದಂಥ ಅಂಕಿಅಂಶದ ಪ್ರಕಾರ ಇವೊತ್ತು ಕೃಷಿರಾಶಿ, ಕೃಷಿ ಉತ್ಪನ್ನ 171 ಮಿಲಿಯನ್ ಟನ್‌ಗಳಷ್ಟು ಆಗಿದೆ. ಅಂದರೆ 1952 ಕ್ಕೆ ಹೋಲಿಕೆ ಮಾಡಿ ನೋಡಿದಾಗ 55 ಮಿಲಿಯನ್ ಟನ್ ಆಹಾರೋತ್ಪಾದನೆ ಇದ್ದದ್ದು ಇಲ್ಲಿವೊತ್ತು 171 ಮಿಲಿಯನ್ ಟನ್‌ಗಳಷ್ಟು ಹೆಚ್ಚು ಆಗಿದೆ. ಅದರ ಅರ್ಥ; ಇವೊತ್ತಿನ ದಿವಸ ನಮ್ಮ ರೈತರು ಬೆವರು ಸುರಿಸಿ ನಮಗಾಗಿ ಪ್ರಯತ್ನಮಾಡಿದ್ದಾನೆ, ಹೋರಾಟ ಮಾಡಿದ್ದಾನೆ, ತನ್ನ ಶ್ರಮದಿಂದಾಗಿ ಉತ್ಪನ್ನವನ್ನು ಜಾಸ್ತಿ ಮಾಡಿದ್ದಾನೆ. ಅವನು ಸೋಂಬೇರಿಯಾಗಿ ಕುಳಿತುಕೊಂಡಿಲ್ಲ. ಆದರೂ ಕೂಡ ಅವನು ದುಸ್ಥಿತಿಗೆ ಬಂದಿದ್ದಾನೆ ಎಂದು ಇವೊತ್ತು ಈ ಸದನದಲ್ಲಿರತಕ್ಕಂಥ ನಾವೆಲ್ಲರೂ ಮತ್ತು ಸರ್ಕಾರದವರು ಆಲೋಚನೆ ಮಾಡಬೇಕಾಗಿದೆ. ರೈತರ ವಿಚಾರ ಬಂದಾಗ ನಾವು ಏನು ಮಾಡುತ್ತೇವೆ (? ಉದಾಹರಣೆಗೆ ಒಂದು ಗಿಡವನ್ನು ನೆಡುತ್ತೇವೆ, ಅದು ಸ್ವಲ್ಪ ಎತ್ತರಕ್ಕೆ ಬೆಳೆದಿದೆ, ಗಿಡವನ್ನು ಉಳಿಸಿಕೊಳ್ಳಬೇಕೆಂದರೆ ಅಬದಕ್ಕೆ ಗೊಬ್ಬರ, ನೀರು ಹಾಕಬೇಕು. ಆದರೆ ಈ ಬಗ್ಗೆ ಸರ್ಕಾರದ ನೀತಿ ಏನಾಗಿದೆ ? ಈ ಗಿಡ ಇಷ್ಟು ಬೆಳೆಯಿತು, ಅದು ಹೆಮ್ಮರವಾಗಿ ಬೆಳೆದು ಫಲ ಕೊಡುವ ಕಾಲ ಬರಬಹುದು ಎಂದು ಅದಕ್ಕೆ ಅವಕಾಶವನ್ನು ಮಾಡಿಕೊಡದೆ ಆ ಗಿಡದ ಸುತ್ತ ಬೇರನ್ನು ಬಿಡಿಸಿ, ಆ ಬೇರನ್ನೆಲ್ಲಾ ಪೂರ್ಣವಾಗಿ ಕಟ್ ಮಾಡಿ, ಮಣ್ಣನ್ನು ತುಂಬಿ ಮೇಲೆ ನೀರು ಹಾಕಿದರೆ. ಗಿಡ ಉಳಿಯುತ್ತದೆಯೇ ? ಗಿಡ ಉಳಿಯಲಿಕ್ಕೆ ಸಾಧ್ಯವಿಲ್ಲ. ಅದೇ ರೀತಿಯಲ್ಲಿ ರೈತರಿಗೆ ಬೇಕಾದಂಥ ಕನಿಷ್ಠ ಸವಲತ್ತುಗಳನ್ನು ಮಾಡಿಕೊಡದೆ. ಅವನಿಗೆ ಇದ್ದಂಥ ಸವಲತ್ತುಗಳನ್ನು ಕಿತ್ತುಕೊಂಡು ಸರಿಯಾದಂಥ ವೈಜ್ಞಾನಿಕ ಬೆಲೆಯನ್ನು ಕೊಡದೆ, ಇವೊತ್ತು ಅವನು ಭಿಕ್ಷುನಂತೆ ಅಲೆಯತಕ್ಕಂಥ ಒಂದು ದುಸ್ಥಿತಿ ಬಂದಿದೆ. ಇದು ಅಧಿಕಾರದಲ್ಲಿದ್ದಂಥ ಜನರು ಮಾಡಿದ ಕೆಲಸದ ಪರಿಣಾಮವಾಗಿ ಬಂದಂಥ ವಿಚಿತ್ರ ಪರಿಸ್ಥಿತಿಯಾಗಿದೆ. ಆದುದರಿಂದ ನಾವೆಲ್ಲರೂ ಈ ಬಗ್ಗೆ ಯೋಚನೆ ಮಾಡಬೇಕಾದಂಥ ಕಾಲ ಸನ್ನಿಹಿತವಾಗಿದೆ. ಅದಕ್ಕಾಗಿ ಕೇವಲ ಬಾಯಿ ಮಾತಿನ ಮೊಸಳೆ ಕಣ್ಣೀರನ್ನು ಸುರಿಸದೆ ಪ್ರಾಮಾಣಿಕವಾಗಿ ಅವನ ನೆರವಿಗೆ ಬರುವಂಥ ಒಂದು ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕಾಗಿದೆ. ಸತತವಾಗಿ ಈ ರಾಜ್ಯದ, ಈ ದೇಶದಲ್ಲಿ ರೈತರ ಬಗ್ಗೆ ಮಲತಾಯಿ ಧೋರಣೆ ನಡೆಯುತ್ತದೆ. ಚುನಾವಣೆ ಬಂದಾಗ ರೈತರ ನೆನಪು ಎಲ್ಲರಿಗೂ ಬರುತ್ತದೆ. ಆಗ ಪಕ್ಷದ ಚಿಹ್ನೆಯಿಂದ ಹಿಡಿದು ಬೇಕಾದಾಗಲೆಲ್ಲಾ ರೈತರ ಮತ್ತು ಅವರ ಉಪಕರಣಗಳ ಚಿಹ್ನೆಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ ರೈತನು ಈ ದೇಶದ ಬೆನ್ನೆಲುಬು ಎನ್ನುವ ರೀತಿಯಲ್ಲಿ ಪ್ರಶಂಸಿಸುತ್ತಾರೆ, ಪ್ರದರ್ಶಿಸುತ್ತಾರೆ. ಹೊಗಳುತ್ತಾರೆ. ಈ ರೀತಿಯಾಗಿ ಕಳೆದ 43 ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ.ಆದರೆ ರೈತನು ತನ್ನ ಕಾಲ ಮೇಲೆ ತಾನು ನಿಂತು ಬದುಕುವಂಥ ಒಂದು ವ್ಯವಸ್ಥೆ ಮಾಡಲು ಸಂಪೂರ್ಣವಾಗಿ ನಿರ್ಲಕ್ಷತೆಯನ್ನು ಸರ್ಕಾರಗಳು ಮಾಡಿಕೊಂಡು ಬಂದಿವೆ. ಒಂದು ರೀತಿಯಲ್ಲಿ ನಿರ್ಲಕ್ಷತೆಯ ಅನ್ಯಾಯದ ಪರಿಣಾಮವಾಗಿ ರೈತರು ಇಂದು ದಯನೀಯ ಪರಿಸ್ಥಿತಿಗೆ ಬಂದು ತಲುಪುವಂತಾಗಿದೆ. ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರ ಬಯಸುತ್ತೇನೆ. ಕನ್ನಡ ಪ್ರಭ ಪತ್ರಿಕೆಯಲ್ಲಿ 18–4–88 ರಲ್ಲಿ ಒಂದ ಲೇಖನ ಬಂದಿದೆ. ಅದು ಕೇಂದ್ರ ಸರ್ಕಾರದವರು ಪ್ರಕಟಿಸಿದಂಥ ಅಂಕಿಅಂಶಗಳ ಆಧಾರದ ಮೇಲೆಲಿರುವಂಥ ಲೇಖನವಾಗಿದೆ. "ರೈತ ಮತ್ತು ವ್ಯವಸಾಯ ಮಲತಾಯಿ ಧೋರಣೆ" ಎನ್ನುವುದರಲ್ಲಿ ಅನೇಕ ವಿವರಗಳನ್ನು ಪ್ರಕಟಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರಗಳನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆ ಲೇಖನದ ಪ್ರಕಾರ ಕೇಂದ್ರ ಸರ್ಕಾರದವರು 1951 ನೇ ಇಸವಿಯಿಂದ 1985 ನೇ ಇಸವಿಯ

ವರೆಗೆ ಈ ಉದ್ದಿಮೆಗಳಿಗೆ, ಇಂಡಸ್ಟ್ರೀಗಳಿಗೆ ಖರ್ಚು ಮಾಡಿರುವಂಥ ಒಟ್ಟು ಹಣ 1,74,633 ಕೋಟಿ ರೂಪಾಯಿಗಳು. ಅದರ ಒಟ್ಟು ಉತ್ಪನ್ನ ಪ್ರತಿಶತ 39.75. ಆದರೆ ಅದೇ ಅವಧಿಯಲ್ಲಿ 1951 ರಿಂದ 1985ರ ವರೆಗೆ ಕೃಷಿಗೋಸ್ಕರ ಖರ್ಚು ಮಾಡಿದ್ದು ಕೇವಲ 48 ಲಕ್ಷದ 245 ಕೋಟಿ ರೂಪಾಯಿಗಳು ಮಾತ್ರ. ಅಂದರೆ ಪ್ರತಿಶತ ಕೇವಲ 23.11 ಬರುತ್ತದೆ. ಇದು ಕೇಂದ್ರ ಸರ್ಕಾರ ಯಾವ ರೀತಿ ಉದ್ಯಮಗಳಿಗೆ ಆದ್ಯತೆ ಕೊಟ್ಟಿತು, ರೈತರಿಗೆ ಎಷ್ಟು ಆದ್ಯತೆ ಕೊಟ್ಟಿದೆ ಎಂದು ಸ್ಪಷ್ಟವಾಗಿ ತಿಳಿಸುತದೆ. ಒಂದು ಆನಂದದ ಸಂಗತಿ. ಕನಿಷ್ಠ ಸ್ವಾತಂತ್ರ್ಯ ಬಂದ 43 ವರ್ಷಗಳ ನಂತರ ನಡೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕೇವಲ ಕಾಂಗ್ರೆಸ್ ಒಂದೇ ಅಲ್ಲ, ಎಲ್ಲ ರಾಜಕೀಯ ಪಕ್ಷಗಳೂ ಚುನಾವಣೆ ಎದುರಿಸಬೇಕಾದ ಪರಿಸ್ಥಿತಿ ಬಂದಾಗ ರೈತ ಸಮೂಹದ ಬಗ್ಗೆ ಚಿಂತೆ ಮಾಡದಿದ್ದರೆ ಗ್ರಾಮೀಣ ಪ್ರದೇಶಕ್ಕೆ ಪ್ರವೇಶ ಮಾಡುವುದು ಕಷ್ಟವಾಗುತ್ತದೆಂಬ ಹಿನ್ನೆಲೆಯಲ್ಲಿ ಬಿ. ಜೆ. ಪಿ., ಜನತಾದಳ, ಕಾಂಗ್ರೆಸ್‌ಗಳು ಚುನಾವಣಾ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದವು ಈ ದೇಶದ ರೈತ ತಾನು ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗದೆ ಕಷ್ಟಕಾರ್ಪಣ್ಯಗಳಿಗೆ ಸಿಕ್ಕಿದ್ದಾನೆ, ಅವನನ್ನು ಸಾಲದಿಂದ ಋಣಮುಕ್ತನನ್ನಾಗಿ ಮಾಡದಿದ್ದರೆ ದೇಶ ಉಳಿಯುವುದಿಲ್ಲ. ಆದ್ದರಿಂದ ದೇಶದಲ್ಲಿ ಶೇಕಡ 70ರಷ್ಟಿರುವ ಗ್ರಾಮೀಣ ಜನರ ಬಗ್ಗೆ ವಿಶೇಷ ಗಮನಕೊಟ್ಟು ಅವರ ಜೀವನ ಸುಧಾರಣೆ ಮಾಡುವಂತಹ ಕಾರ್ಯಕ್ರಮ ರೂಪಿಸುತ್ತೇವೆಂದು, ರೈತರನ್ನು ಋಣಮುಕ್ತರನ್ನಾಗಿ ಮಾಡುತ್ತೇವೆಂದು ಎಲ್ಲ ಪಕ್ಷಗಳೂ ಹೇಳಿಕೊಂಡವು. ರೈತನಿಗೆ ಅವನ ಶ್ರಮದ ಆಧಾರದ ಮೇಲೆ ವೈಜ್ಞಾನಿಕ ಬೆಲೆ ಕೊಡುತ್ತೇವೆಂದು ಸಾರಿ ಹೇಳಿದವು. ಈಗ ಮುಖ್ಯಮಂತ್ರಿಗಳು, ಸಂಬಂಧಿಸಿದ ಸಚಿವರು ಹೇಳಬಹುದು, ಯಡಿಯೂರಪ್ಪನವರೇ , ನಾವು ಒಪ್ಪುತ್ತೇವೆ ಆದರೆ ಏನು ಮಾಡುವುದು ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿ ಇಲ್ಲವಲ್ಲ ಎಂದು ಹೇಳಬಹುದು. ನಾನು ಕೇಳುತ್ತೇನೆ, ಇವತ್ತು ರಾಜ್ಯದ ಹಣಕಾಸಿನ ಪರಿಸ್ಥಿತಿ ಇಷ್ಟೊಂದು ಹದಗೆಡುವುದಕ್ಕೆ ಈ ದೇಶದ ರೈತರು ಕಾರಣರೇ ? ತುಂಬ ಪ್ರಾಮಾಣಿಕವಾಗಿ ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ನಾನು ಪ್ರಾರಂಭದಲ್ಲೇ ಒಂದು ಮಾತು ಹೇಳಿದೆ. 1952 ರಲ್ಲಿ ಯೋಜನೆಗಳು ಪ್ರಾರಂಭವಾದಾಗ ಕೃಷಿ ಉತ್ಪನ್ನ ಕೇವಲ 55 ಮಿಲಿಯನ್ ಟನ್ ಇತ್ತು. ರೈತನ ಪರಿಶ್ರಮ, ಬೆವರಿನ ಪರಿಣಾಮ ಇವತ್ತು 1990ರ ಮಾರ್ಚಿಗೆ ಕೇಂದ್ರದ ಅಂಕಿಅಂಶಗಳ ಪ್ರಕಾರ 171 ಮಿಲಿಯನ್ ಟನ್ ಆಗಿದೆ. ಅಂದರೆ ಈ ದೇಶದಲ್ಲಿ ವಾಸ ಮಾಡುವಂಥ ಜನತೆಗೆ ಅನ್ನ ಕೊಟ್ಟಂಥ ಅನ್ನದಾತನನ್ನು, ಅವನು ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಬೆಳೆದು, ಕೊನೆಗೆ ಸಾಲದಲ್ಲೇ ಸಾಯುವಂಥ ವ್ಯವಸ್ಥಿತ ಷಡ್ಯಂತರ ಅಧಿಕಾರಿಗಳ ಮೂಲಕ, ಸರ್ಕಾರಗಳ ಮೂಲಕ ಸ್ವಾತಂತ್ರ್ಯ ಬಂದ 43 ವರ್ಷಗಳಿಂದ ನಡೆದುಕೊಂಡು ಬಂದಿದೆ. ಇವತ್ತು ಗ್ರಾಮೀಣ ಜನತೆ ಜಾಗೃತರಾಗಿದ್ದಾರೆ. ಬಹುಶಃ ನಾವು ಚುನಾವಣೆಯಲ್ಲಿ ಅನೇಕ ಆಶ್ವಾಸನೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದು, ಅವರನ್ನು ಮರೆತಾಗ ಇವತ್ತು ರೈತ ಹೋರಾಟ ಮಾಡಿ ತನಗೆ ಬೇಕಾದ ನ್ಯಾಯವನ್ನು ಒದಗಿಸಿಕೊಳ್ಳುವ ಶಕ್ತಿ ಈ ದೇಶದ, ಈ ರಾಜ್ಯದ ರೈತನಲ್ಲಿ ಬಂದಿದೆ. ಅಷ್ಟು ಸುಲಭವಾಗಿ ಹಿಂದೆ ಚುನಾವಣೆಗಳನ್ನು ಎದುರಿಸುತ್ತಿದ್ದೆವು. ಆದರೆ ನಾವು ಯಾವ ಆಶ್ವಾಸನೆಗಳನ್ನು ಕೊಟ್ಟು ಇಲ್ಲಿಗೆ ಬಂದಿದ್ದೇವೆಯೋ, ಅವನ ಬಗ್ಗೆ ಮರುಕಪಟ್ಟು ಅವನಿಗೆ ಬೇಕಾದಂಥ ಸವಲತ್ತನ್ನು ಒದಗಿಸಿಕೊಡತಕ್ಕಂಥ ಜವಾಬ್ದಾರಿಯ ಕೆಲಸದಿಂದ ಹಿಂದೆ ಸರಿದರೆ ಬಹುಶಃ ಗ್ರಾಮೀಣ ಪ್ರದೇಶದಲ್ಲಿ ಓಡಾಟ ಮಾಡುವುದು ಕಷ್ಟವಾಗುತ್ತದೆ. ಕೇವಲ ರೈತನ ಬೆಳೆಗೆ ವೈಜ್ಞಾನಿಕ ಬೆಲೆಯನ್ನು ಕೊಡುವುದು ಮಾತ್ರವಲ್ಲ. ಅವನ ಜೀವನ ಹೇಗಿದೆ, ಅವನು ವಾಸ ಮಾಡುವಂಥ ಮೊಹಲ್ಲಾಗಳು ಹೇಗಿವೆ ? ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಆಯಿತೇ ಸ್ವಾಮಿ ? ಮನುಷ್ಯರು ಓಡಾಡುವಂಥ ರಸ್ತೆಯನ್ನು ಮಾಡಿ ಕೊಡುವುದಕ್ಕೆ ಆಯಿತೇ ? ಐದಾರು ಹಳ್ಳಿಗಳ ಮಧ್ಯ ಒಂದು ಆಸ್ಪತ್ರೆಯನ್ನು ಮಾಡಿ, ಆ ಮಕ್ಕಳಿಗೆ ಕೆಲಸ ಮಾಡುವಂಥ ನಮ್ಮ ಗ್ರಾಮೀಣ ಜನತೆ ಆಸ್ಪತ್ರೆಗೆ ಹೋದ ತಕ್ಷಣ ಅವರಿಗೆ ಬೇಕಾದಂಥ ಔಷಧೋಪಚಾರ ಸಿಗತಕ್ಕಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಆಯಿತೇ ? ಸ್ವಾತಂತ್ರ್ಯ ಬಂದ 43 ವರ್ಷಗಳ ಈ ರೀತಿಯೆಲ್ಲಾ ಮಾಡುವುದಕ್ಕಾಯಿತೇ ? ರೈತ ತನ್ನ ಮಕ್ಕಳಿಗಿಂತ ಹೆಚ್ಚಾಗಿ ಜಾನುವಾರಗಳನ್ನು ಸಾಕುತ್ತಾನೆ. ಇವತ್ತು ಒಂದು ಜಾನುವಾರಿನ ಬೆಲೆ ದುಬಾರಿಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸಾಧಾರಣವಾದ ಒಂದು ಎಮ್ಮೆಯ ಬೆಲೆ ಸುಮಾರು ಮೂರುವರೆ ಸಾವಿರ–ನಾಲ್ಕು ಸಾವಿರ ರೂಪಾಯಿಗಳವರೆಗೂ ಇದೆ. ಹೈಬ್ರಿಡ್, ಬೇರೆ ಹೊಸ ತಳಿ ಬಂದಿದೆ, ಅದರ ಬಗ್ಗೆ ನಾನು ಹೇಳುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಒಂದು ಜೂತೆ ಎತ್ತಿನ ಬೆಲೆ ಎಂಟು–ಹತ್ತು ಸಾವಿರ ರೂಪಾಯಿಗಳಾಗುತ್ತದೆ. ನಮಗೆ ಸ್ವಾತಂತ್ರ್ಯ ಬಂದು 43 ವರ್ಷಗಳಾಯಿತು. ಮಾನ್ಯ ಬಸವಲಿಂಗಪ್ಪನವರು ಪಕ್ಕದಲ್ಲಿದ್ದಾರೆ, ಇಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದಾರೆ. 43 ವರ್ಷಗಳಲ್ಲಿ ಈ ದೇಶದ ರೈತನ ಬಗ್ಗೆ ನೀವೆಲ್ಲಾ ಅಧಿಕಾರದಲ್ಲಿದ್ದು ಏನು ಮಾಡಿದ್ದೀರೆಂದು ನಾನು ಕೇಳುತ್ತೇನೆ. ಪಶುಸಂಗೋಪನಾ ಮಂತ್ರಿಗಳಾಗಿದ್ದ ಬಸವಲಿಂಗಪ್ಪನವರಲ್ಲಿ ನಾನು ಕೇಳುತ್ತೇನೆ, ನಾಲ್ಕೈದು ಹಳ್ಳಿಗಳ ಮಧ್ಯದಲ್ಲಿ ಒಂದು ಜಾನುವಾರುಗಳ ಆಸ್ಪತ್ರೆಯನ್ನು ಮಾಡಿದ್ದೀರಾ ? ತಕ್ಷಣ ಆ ಒಂದು ಜಾನುವಾರಿಗೆ ರೋಗರುಜಿನುಗಳು ಬಂದರೆ ಅವನು ಏನು ಮಾಡಬೇಕು, ರೈತರು ಕನಿಷ್ಟಪಕ್ಷ ಇಷ್ಟೊಂದು ದುಬಾರಿ ತೆರಿಗೆಯನ್ನು ಕೊಡುತ್ತಿದ್ದಾರೆ, ಈ ರೀತಿ ಅವನು ತನ್ನ ತಲೆಯನ್ನು ಬೋಳಿಸಿಕೊಂಡು ದುಡಿದು ಈ ದೇಶಕ್ಕೆ ಅನ್ನವನ್ನು ಹಾಕುತ್ತಿದ್ದಾನೆ. ಆಸ್ಪತ್ರೆಗೆ ಬಂದಾಗ ಪುಕ್ಕಟೆ

ಯಾಗಿ ಅವನಿಗೆ ಬೇಕಾದಂಥ ಔಷಧೋಪಚಾರ, ತನ್ನ ಜಾನುವಾರನ್ನು ಉಳಿಸಿಕೊಳ್ಳುವುದಕ್ಕೆ ಬೇಕಾದಂಥ ಔಷಧಗಳನ್ನು ಇಡುವ ವ್ಯವಸ್ಥೆಯನ್ನು ಮಾಡಿ ಅವನು ಬದುಕುವುದಕ್ಕೆ ಸಹಾಯವನ್ನೇನಾದರೂ ಮಾಡಿದ್ದೀರ ನಾವು ನೀವು ಎಲ್ಲರೂ ಇಲ್ಲಿ ಕುಳಿತಿದ್ದೇವೆಲ್ಲಾ ಇದನ್ನು ಮಾಡಿದ್ದೇವೆಯೇ ? ನಾವೆಲ್ಲರೂ ಇಷ್ಟೊಂದು ಮಾತ ನಾಡುತ್ತೇವೆ. ಇದನ್ನು ಯೋಚನೆಯನ್ನು ಮಾಡೋಣ. ಯಾರೂ ಒಬ್ಬರು ಇದಕ್ಕೆ ಕಾರಣರು, ಬೇರೆಯವರು ಯಾರಿಗೂ ಇದರ ಜವಾಬ್ದಾರಿ ಇಲ್ಲ ಎಂಬ ಮಾತನ್ನು ನಾನು ಹೇಳುತ್ತಿಲ್ಲ. ಅದಕ್ಕಾಗಿಯೇ ನಾನು ಪ್ರಾರಂಭದಲ್ಲಿ ಹೇಳಿದೆ. ನಾನೂ ಸೇರಿಕೊಂಡು ನಮ್ಮ ಪಕ್ಷ ಸೇರಿಕೊಂಡು ಇವತ್ತು ಗ್ರಾಮೀಣ ಜನತೆ ಜಾಗೃತರಾದಮೇಲೆ ಅವರ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನತಕ್ಕಂಥ ಕಳಕಳಿ, ಆ ದಿಕ್ಕಿನಲ್ಲಿ ಯೋಚನೆ ಇವತ್ತು ಪ್ರಾರಂಭವಾಗಿದೆ.

ಶ್ರೀ ಬಿ. ಬಸವಲಿಂಗಪ್ಪ :– ಅವರ ಭಾಷಣವನ್ನು ಪಕ್ಕದಲ್ಲಿ ಕುಳಿತು ಕೇಳೋಣ ಎಂದು ಆ ಕಡೆಗೆ ಹೋಗಿದೆ, ಕೇಳಿದೆ. ಅವರ ಭಾಷಣವನ್ನು ಹಿಂದೆಯೂ ಕೇಳಿದ್ದೆ. ಸಾಲ ಮನ್ನಾ ಮಾಡಿ, ಸಾಲ ಮನ್ನಾ ಮಾಡಿ ಎನ್ನುವ ಬಗ್ಗೆ ಕೇಳಿದ್ದೆ. ಇವತ್ತೂ ಸಹ ಸಾಲ ಮನ್ನಾ ಮಾಡಿ, ಸಾಲ ಮನ್ನಾ ಮಾಡಿ ಎಂದು ಹೇಳುತ್ತಿದ್ದಾರೆ. ಇದನ್ನು ಬೀಸುವ ರಾಗ ಎಂದು ಹೇಳುತ್ತಾರೆ. ಜೋಳವನ್ನು ಬೀಸುವಾಗ, ರಾಗಿಯನ್ನು ಬೀಸುವಾಗ ಹಾಡು ತ್ತಾರೆ. ಹಾಗೆ ಬೀಸುವ ರಾಗದತರಹ ನಾನು ಕೇಳಿದೆ. ಹೇಳಿದ್ದನ್ನೇ ಹೇಳುವುದು. ಸಾಲ ಮನ್ನಾ ಮಾಡಿ, ಸಾಲ ಮನ್ನಾ ಮಾಡಿ, ಇದನ್ನು ಎಷ್ಟು ಸಾರಿ ಹೇಳುವುದು;

ಶ್ರೀ ಬಿ. ಎಸ್. ಯಡಿಯೂರಪ್ಪ :– ಆದರೂ ಕೂಡಾ ನೀವು ಕೇಳುತ್ತಿಲ್ಲವಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ನಮಗೂ ಅರ್ಥ ಆಗಿದೆ. ನಾವು ದಡ್ಡರೇ ?

ಶ್ರೀ ಬಿ. ಎಸ್. ಯಡಿಯೂರಪ್ಪ :– ನೀವು ಬರೆದುಕೊಟ್ಟಿದ್ದರೆ ಹೇಳುತ್ತಿದ್ದೆ. ನನಗೆ ನಿಮ್ಮಷ್ಟು ಅನುಭವ ಇಲ್ಲ, ಮಂತ್ರಿಯಂತೂ ನಾನಲ್ಲ. ಏನೇನೋ ಎಲ್ಲೆಲ್ಲಿ ಲೂಟಿ ಮಾಡಿಕೊಂಡು ಬಂದರೋ ಆ ಅನುಭವ ನನಗೆ ಇಲ್ಲ. ಯಡಿಯೂರಪ್ಪನವರೇ, ಸಾಲ ಮನ್ನಾ ಮಾಡಬೇಕಾದರೆ ಈ ಒಂದು ತಂತ್ರವನ್ನು ಉಪಯೋಗಿಸಿ, ಈ ಒಂದು ಸೂತ್ರವನ್ನು ಉಪಯೋಗಿಸಿ ಎಂದು ಇಷ್ಟು ಹೇಳಿದ್ದರೆ ನಾನು ಮಾಡಿಬಿಡುತ್ತಿದ್ದೆ. ಸ್ವಾಮಿ, ನಮಗೆ ಅಂತಿಮವಾಗಿ ರೈತ ಉಳಿಯಬೇಕು.

ಶ್ರೀ ಬಿ. ಬಸವಲಿಂಗಪ್ಪ :– ನಿಮ್ಮನ್ನು ಕಂಡರೆ ನನಗೆ ಪ್ರೀತಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಸ್ವಾಮಿ, ರೈತನ ಬಗ್ಗೆ ಪ್ರೀತಿ ಇರಲಿ.

ಶ್ರೀ ಬಿ. ಬಸವಲಿಂಗಪ್ಪ :– ಸಾಲ ಮನ್ನಾ ಮಾಡುವುದು ಬಿಡುವುದು,, ಅದು ಕೇಂದ್ರ ಸರ್ಕಾರದ್ದು ಇದೆ ರಾಜ್ಯ ಸರ್ಕಾರದ್ದು ಇದೆ. ಒಂದು ಪ್ರಶ್ನೆಯನ್ನು ನಾನು ನಿಮಗೆ ಕೇಳುತ್ತೇನೆ. ಕೇಂದ್ರ ಸರ್ಕಾರದವರು ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಒಂದು ನಿಲುವನ್ನು ತೆಗೆದುಕೊಂಡರು. ಅದರ ಪ್ರಕಾರ ಕಾರ್ಯ-ಕ್ರಮವನ್ನು ತೆಗೆದುಕೊಂಡರೋ ಬಿಟ್ಟರೋ ? ಅವರೇನಾದರೂ ತೆಗೆದುಕೊಂಡಿದ್ದಾರೆಯೇ ? ಪುನಃ ತಾವು ಇದೇ ರಾಗವನ್ನು ಪ್ರಾರಂಭ ಮಾಡಿದ್ದೀರಿ. ಸಾಲ ಮನ್ನಾ ಮಾಡಿ ಅಂದರೆ ಯಾರಿಗೆ ಮಾಡುವುದು ? ಈ ದೇಶದಲ್ಲಿ ಯಾರ್ಯಾರು ಸಾಲ ಮನ್ನಾ ಮಾಡಿ ಎಂದು ಭಾಷಣ ಮಾಡಿದ್ದಾರೆ ಆ ಎಲ್ಲಾ ಪಟ್ಟಿಯನ್ನು ಮಾಡಿದ್ದೇನೆ. ಯಾರ್ಯಾರು ಸಾಲವನ್ನು ತೆಗೆದುಕೊಂಡಿದ್ದಾರೆ, ಅವರೇ ಸಾಲ ಮನ್ನಾ ಮಾಡಿ ಎಂದು ಹೇಳುವುದು. ನೀವು ತೆಗೆದುಕೊಂಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಅವರೇ ಸಾಲ ಮನ್ನಾ ಮಾಡಿ ಎಂದು ಹೇಳುವುದು. ಬಡವರು ಇದ್ದೇ ಇರುತ್ತಾರೆ. ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದೆ ಎಂದು ಇಟ್ಟುಕೊಳ್ಳೋಣ. ಆ ಹತ್ತು ಸಾವಿರ ರೂಪಾಯಿಗಳನ್ನು ಕೋ–ಆಪರೇಟೀವ್ ಸೊಸಾಯಿಟಿಗಳಿಂದ ಅಲ್ಲಿನ ಸಂಸ್ಥೆಗಳಿಂದ ಸಾಲ ವನ್ನಾಗಿ ತೆಗೆದುಕೊಂಡಿರುತ್ತಾರೆ; ಇಲ್ಲದಿದ್ದರೆ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡಿರುತ್ತಾರೆ. ಪುನಃ ಕೇಂದ್ರ ಸರ್ಕಾರದವರೂ ಕೊಡಬೇಕು, ರಾಜ್ಯ ಸರ್ಕಾರದವರೂ ಕೊಡಬೇಕು. ಅವರಿಗೆ ಯಾವ ರೂಪದಲ್ಲಿಯಾದರೂ ಹಣ ವಾಪಸ್ ಬರಲೇಬೇಕು. ಅದು ಬರದೇ ಹೋದರೆ ಅದು ಅಲ್ಲಿಗೇ ನಿಂತು ಹೋಗುತ್ತದೆ. ಇವತ್ತಿನ ದಿವಸ ರೈತನ ಪರಿಸ್ಥಿತಿ ವಿಪರೀತವಾಗುತ್ತಿದೆ. ಮಳೆಯಂತೂ ಕೆಲವು ಕಡೆಯಲ್ಲಿ ಬಂದಿಲ್ಲ. ಸಾಲವನ್ನು ತೆಗೆದುಕೊಳ್ಳ-ಬೇಕು, ವ್ಯವಹಾರವನ್ನು ಮಾಡಿಕೊಳ್ಳಬೇಕು. ಅವರಿಗೆ ಹಣ ಬರದೇ ಹೋದರೆ ಈ ವ್ಯವಹಾರವನ್ನು ಹೇಗೆ ಮಾಡುತ್ತೀರಿ ? ಈ ವ್ಯವಹಾರವನ್ನು ಮುಂದುವರೆಸುವುದು ಹೇಗೆ ? ಸಹಕಾರಿ ಸಂಸ್ಥೆಗಳಲ್ಲಿರುವ ವ್ಯವಹಾರ ವನ್ನು ಮುಂದುವರಿಸಿಕೊಂಡು ಹೋಗುವ ಬಗೆ ಹೇಗೆ ? ಇದನ್ನು ಮೊದಲು ಹೇಳಿ. ಕಡುಬಡವ, ಕಡುಬಡವ ನಾಗಿಯೇ ಇದ್ದಾನೆ, ಬಡ ರೈತ ಇದ್ದಾನೆ. ಅವನು ಸಾಹುಕಾರನಾಗಿದ್ದರೆ ರೈತನ ಕೆಲಸ ಏಕೆ ಮಾಡುತ್ತಾನೆ ? ನಮ್ಮ ಪ್ರೊ. ನಂಜುಂಡಸ್ವಾಮಿಯವರು ಮತ್ತು ನಮ್ಮ ಬಾಬುಗೌಡರು ಇದ್ದಾರೆ. ರೈತ ಬಡವನಲ್ಲದೆ ಹೋದರೆ ಅವನು ಸಾಲವನ್ನು ಏತಕ್ಕೆ ತೆಗೆದುಕೊಳ್ಳಬೇಕು ?

ಶ್ರೀ ಬಾಬುಗೌಡ ರುದ್ರಗೌಡ ಪಾಟೀಲ್ :– ರೈತ ಎಂದೂ ಬಡವನಲ್ಲ. ಸರ್ಕಾರ ಸಾಲಕೊಡುವಾಗ ಸ್ಟ್ರಾಟಿಜಿಕ್ಕಾಗಿ ಕೊಟ್ಟಿದ್ದೇ ಹೊರತು ಇವರು ಉದ್ಧಾರವಾಗಲಿ ಎಂದು ಕೊಟ್ಟಿದ್ದಲ್ಲ. ಇದು ಉತ್ಪಾದನೆಯ ತಂತ್ರ. ಹಿಂದಿಯಲ್ಲಿ ಒಂದು ಗಾದೆ ಇದೆ "ಮೂಚ್‌ವಾಲಾ ಮಾರ್ಕುಗಯಾ ದಾಡಿವಾಲ ಪಕಡಗಯಾ" ಎಂದು.

ಈ ದೇಶಕ್ಕೆ ಅನ್ನ ಬೇಕಾಗಿತ್ತು, ನಮ್ಮ ಹತ್ತಿರ ದುಡಿಸಿಕೊಂಡರು. ಅವರು ಊಟ ಹೊಡೆದರು. ಅದರ ಸಾಲವನ್ನು ನಾವು ಹೊತ್ತುಕೊಂಡು ಓಡಾಡಬೇಕೆಂದು ನಮ್ಮನ್ನು ಹಿಡಿದುಕೊಂಡಿದ್ದೀರಿ, ಇದು ತಪ್ಪು, ಇದು ಸರ್ಕಾರಕ್ಕೆ ತಿಳಿಯಲಿ ಎಂಬ ಉದ್ದೇಶದಿಂದ ಪ್ರತಿದಿನ ಸಾಲ ಮನ್ನಾ ಮಾಡಬೇಕೆಂದು ಹೇಳುವುದರ ಅರ್ಥ ವೇನೆಂದರೆ ಸಾಲವನ್ನು ಸ್ಟ್ರಾಟಿಜಿಕ್ ಆಗಿ ಕೊಟ್ಟಿದ್ದೇ ಹೊರತಾಗಿ ರೈತರು ಉದ್ಧಾರವಾಗಲಿ ಎಂದು ಕೊಟ್ಟಿದ್ದಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಉದ್ದಿಮೆದಾರರಿಗೆ ಸಾಲ ಮನ್ನಾ ಮಾಡಿದರೆ ಅದು ಚುನಾವಣೆಗೆ ಮತ್ತೆ ಬರುತ್ತದೆ. ರೈತನ ಸಾಲ ಮನ್ನಾ ಮಾಡಿದರೆ ಬರುವುದಿಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ಮಾನ್ಯ ಸಭಾಧ್ಯಕ್ಷರೆ, ನಾವು ಸಾಲಗಾರರೆಂದು ಯಾವತ್ತೂ ಹೇಳಿಲ್ಲ. ನಾವು ಸಾಲಗಾರರಲ್ಲ ಎಂತಲೇ ಹೇಳುತ್ತಿರುವುದು. ನಮ್ಮ ಅನ್ನದ ಋಣದಲ್ಲಿ ನೀವು ಇದ್ದೀರೆಂದು ನಾನು ಈ ಸದನಕ್ಕೆ ಬಂದಾಗಿನಿಂದಲೂ ಹೇಳುತ್ತಿದ್ದೇನೆ, ನೀವು ನಮಗೆ ಎಷ್ಟು ಬಾಕಿದಾರರೆಂದು ಲೆಕ್ಕ ಮಾಡು-ವುದಕ್ಕೋಸ್ಕರ ಚರ್ಚೆ ಮಾಡೋಣವೆಂದು ನಾನು ಒತ್ತಾಯ ಮಾಡುತ್ತಿರುವುದು. ಇವತ್ತು ಆ ದಿಕ್ಕಿನಲ್ಲಿ ಚರ್ಚೆ ಯಾಗಬೇಕು. ರೈತನ ಋಣದಲ್ಲಿ ಈ ದೇಶ ಇದೆ. ರೈತನ ಋಣದಲ್ಲಿಈ ಸರ್ಕಾರಗಳು ಇವೆ. ನಿಮಗೆ ಧೈರ್ಯ ವಿದ್ದರೆ ಚರ್ಚೆ ಮಾಡಿ. ಶ್ರೀ ವೀರೇಂದ್ರ ಪಾಟೀಲರು ಇದ್ದಾಗ ಅವರಿಗೆ ಧೈರ್ಯ ಬರಲಿಲ್ಲ. ಈಗೇನಾದರೂ ನಿಮಗೆ ಧೈರ್ಯವಿದ್ದರೆಆ ದಿಕ್ಕಿನಲ್ಲಿ ಚರ್ಚೆ ಮಾಡೋಣ. ನಾನು ಲೆಕ್ಕ ತೆಗೆದು ನಿಮಗೆ ತಿಳಿಸುತ್ತೇನೆ. ನಿಮ್ಮಿಂದ ರೈತನಿಗೆ ಎಷ್ಟು ಬಾಕಿ ಬರಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಇವತ್ತು ಕಣ್ಣಿಗೆ ಕಾಣುವಂತಹ ಈ ಸಂಗತಿಗಳ ಬಗ್ಗೆ ಮುಂದೆ ಅವನಿಗೆ ಒಳ್ಳೆಯದನ್ನು ಮಾಡುವುದು ಹೇಗೆ ಎನ್ನುವುದರ ಬಗ್ಗೆ ಚರ್ಚೆ ಮಾಡೋಣ. ರೈತನ ಸಾಲ ಮನ್ನಾ ಮಾಡುವುದರಿಂದ ರೈತ ಉದ್ಧಾರವಾಗುವುದಿಲ್ಲ ಎಂದು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ನೀವು ಅವನ ಬೆಳೆದಂತಹ ಬೆಳೆಗೆ ವೈಜ್ಞಾನಿಕ ಬೆಲೆ ಕೊಡದೆ, ಅವನಿಗೆ ಬೇಕಾದಂತಹ ಸೌಲಭ್ಯವನ್ನು ಕೊಡದೆ ಇದ್ದ ಪರಿಣಾಮ ಇವತ್ತು ಒಂದು ಸಣ್ಣ ಪ್ರಾಯಶ್ಚಿತ್ತ ಮಾಡಿಕೊಂಡು ಮುಂದೆ ಅವನು ಬದುಕುವುದಕ್ಕೆ ದಾರಿ ಮಾಡಿಕೊಡಿ. ಏನೇನು ಮಾಡಬೇಕೆಂದು ಹೇಳುತ್ತೇನೆ. ಬೇರೆ ಸರ್ಕಾರಗಳು ಏನು ಮಾಡುತ್ತಿವೆ, ಅದನ್ನು ಹೇಳುತ್ತೇನೆ, ಈಗ ಮಾತನಾಡುವ ವೈಖರಿ ಎಲ್ಲಿಗೆ ಬಂದಿದೆ ಅಂದರೆ, ಯಡಿಯೂರಪ್ಪ ಒಬ್ಬ ಅಥವಾ ಇನ್ಯಾರೋ ಕೆಲವರು ರೈತರ ಸಾಲ ಮನ್ನಾ ಮಾಡಿ ಎಂದು ಕೂಗುತ್ತಾರೆ ಎಂಬ ಅರ್ಥ ಬರುವ ರೀತಿಯಲ್ಲಿ ಈ ವಾತಾವರಣ ಇದೆ. ಆದರೆ ಸನ್ಮಾನ್ಯ ಹಿರಿಯ ಸಚಿವರಾದ ಬಸವಲಿಂಗಪ್ಪನವರಿಗೆ ಗೊತ್ತಿರಬಹುದು. ಮೊನ್ನೆ ಲೋಕಸಭಾ ಚುನಾವಣೆಯಾಗಿ ಶ್ರೀ ವಿ. ಪಿ. ಸಿಂಗ್‌ರವರು ಪ್ರಧಾನಮಂತ್ರಿಯಾದ ಸಂದರ್ಭದಲ್ಲಿ ರಾಷ್ಟ್ರಪತಿಗಳು ಈ ದೇಶದ ರೈತನ ಇವತ್ತಿನ ದಯನೀಯ ಪರಿಸ್ಥಿತಿಯಬಗ್ಗೆ ಪ್ರಸ್ತಾಪ ಮಾಡ್ತಿ, ಸಾಲ ಮನ್ನಾ ಮಾಡುವ ವಿಚಾರ ವನ್ನು ಈ ದೇಶದ ಇತಿಹಾಸದಲ್ಲಿ ಮೊಟ್ಟಮೊದಲನೇ ಬಾರಿಗೆ ಲೋಕಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಈ ವಿಷಯವನ್ನು ಯಡಿಯೂರಪ್ಪನವರು ಎತ್ತಿದ್ದಲ್ಲ. ಮೊದಲನೆ ಬಾರಿಗೆ ಈ ತಪ್ಪುಗಳನ್ನು ಏನೋ ಮಾಡಿದ್ದೇವೆ, ಆದರೆ ಸಾಲ ಮನ್ನಾ ಮಾಡದೆ ಇದ್ದರೆ ನಾವು ಉಳಿಯುವುದಕ್ಕೆ ಸಾಧ್ಯವಿಲ್ಲ ದೇಶ ಉಳಿಯುವು ದಿಲ್ಲ ಎನ್ನುವ ವಿಚಾರಕ್ಕೆ ಬಂದಮೇಲೆ ಕೇಂದ್ರ ಸರ್ಕಾರ ಈ ಬಗ್ಗೆ ಯೋಚನೆ ಮಾಡಿತು. ನಡೆದದ್ದು ಏನು ? ಈ ರಾಜ್ಯದ ಪ್ರಶ್ನೆ ಬಿಡಿ. ಇಡೀ ದೇಶದಲ್ಲಿ ಅವತ್ತು ಇದ್ದಂತಹ ನಮ್ಮ ದೇಶದ ಪ್ರಧಾನಿ ವಿ. ಪಿ. ಸಿಂಗ್‌ರವರು, ಹಣಕಾಸಿನ ಸಚಿವರಾದ ಮಧು ದಂಡವತೆಯವರು ಹೇಳಿದ ಅಧಿಕೃತ ಹೇಳಿಕೆಗಳು ಇವೆ. ಇವತ್ತು ಈ ರೈತನ ಸ್ಥಿತಿ ಸರಿಯಿಲ್ಲ; ಇದಕ್ಕಾಗಿ 10 ಸಾವಿರ ರೂಪಾಯಿಗಳ ವರೆಗಿನ ಎಲ್ಲ ರೈತರ ಸಾಲವನ್ನು ಮನ್ನಾ ಮಾಡುತ್ತೇವೆ; ಅದರಲ್ಲಿ ಕೃಷಿ ಕಾರ್ಮಿಕ ಬರುತ್ತಾನೆ, ನೇಕಾರ ಬರುತ್ತಾನೆ, ಮೀನುಗಾರ ಬರುತ್ತಾನೆ. ಈ ಮಾತನ್ನು ಪದೇ ಪದೇ ರೈತನಿಗೆ ಹೇಳಿಕೊಂಡು ಬಂದರು. ಹಿರಿಯ ಸಚಿವರಾದ ಮಾನ್ಯ ಬಸವಲಿಂಗಪ್ಪನವರಿಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ರೈತರ ಸಾಲ ಮನ್ನಾ ಮಾಡುವುದು ಬೇಡ, ಇವತ್ತು ನೀವೇ ಒಪ್ಪಿಕೊಂಡಿದ್ದೀರಿ, ಧಾರಾಳವಾಗಿ ಮಾನವೀಯತೆ ಯಿಂದ ಚರ್ಚೆ ಮಾಡೋಣ. ನೀವೇ ಹೇಳಿದ ಪ್ರಕಾರ, ಈ ರಾಜ್ಯದಲ್ಲಿ 15 ಜಿಲ್ಲೆ ಗಳಲ್ಲಿ 100 ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಭೀಕರ ಬರಗಾಲದ ಪರಿಸ್ಥಿತಿ ಇದೆ. ಆ 100 ತಾಲ್ಲೂಕುಗಳು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡುವ ಒಂದು ಸಂದರ್ಭ ಇದೆ. ಅಲ್ಲಿರುವಂತಹ ರೈತ ಯಾರು ಕೃಷಿ ಕಾರ್ಮಿಕನಿಗೆ ಉದ್ಯೋಗ ಕೊಡುತ್ತಿದ್ದ ಅವನ ಕೈಗೆ ಕೆಲಸ ಇಲ್ಲದೆ ಅವನು ಕೃಷಿ ಕಾರ್ಯಕ್ರಮದಲ್ಲಿ ಕೆಲಸ ಮಾಡಲು ಸಿದ್ಧವಾಗಿರತಕ್ಕ ವಿಚಿತ್ರವಾದ ಪರಿಸ್ಥಿತಿ ಇದೆ. ಈ ಸಂದರ್ಭದಲ್ಲಿ ಶ್ರೀ ಕೆ. ಹೆಚ್. ಪಾಟೀಲರಿಗ ಹಾಗೂ ಶ್ರೀ ಬಸವಲಿಂಗಪ್ಪನವರಿಗೂ ಒಂದು ಮಾತನ್ನು ಹೇಳುತ್ತೇನೆ. ಈ ರೀತಿ ಅವನು ಬೆಳೆದಂತಹ ಬೆಳೆ ಸಂಪೂರ್ಣ ನಾಶವಾಗಿದೆ. ರೈತನು ಬಿತ್ತನೆ ಮಾಡಿ, ಬೆವರು ಸುರಿಸಿ, ಗೊಬ್ಬರ ಹಾಕಿ, ಬಂಡವಾಳ ಹಾಕಿ ಬೆಳೆದಂಥ ಬೆಳೆ ಸಂಪೂರ್ಣವಾಗಿ ನಾಶವಾಗಿರುವಂಥ ಈ ಸಂದರ್ಭದಲ್ಲಿ ನೀವು ಬಲಾತ್ಕಾರ ವಾಗಿ ಅವನಿಂದ ಸಾಲ ವಸೂಲಿ ಮಾಡುವುದಕ್ಕೆ ಎಲ್ಲಾ ಕಡೆಯಿಂದ ಪ್ರಯತ್ನ ಮಾಡುತ್ತಿದ್ದೀರಿ. ನಾನು ನಿಮ್ಮನ್ನು ಕೇಳುತ್ತೇನೆ, ಆ ಸಾಲವನ್ನು ಆ ಬಡ ರೈತ ಹೇಗೆ ಕಟ್ಟಬೇಕು ? ರೈತ ಈ ರೀತಿ ದಯನೀಯ ಪರಿ-ಸ್ಥಿತಿಗೆ ಬಂದಿರುವುದು ನಿಜವಲ್ಲವೆ ? ಈ ಒಂದು ದೊಡ್ಡ ಸದನದಲ್ಲಿ ಜನತೆಯ ಆಗುಹೋಗುಗಳ ಯೋಚನೆ

ಯನ್ನು ಮಾಡುವುದಕ್ಕೆ ಇಲ್ಲಿ ಕುಳಿತಿರುತ್ತೇವೆ. ನಾನು ನಿಮಗೆ ಒಂದು ಸಲಹೆಯನ್ನು ಕೊಡುತ್ತೇನೆ. ಸನ್ಮಾನ್ಯ ಬಸವಲಿಂಗಪ್ಪನವರು ಸನ್ಮಾನ್ಯ ಕೆ. ಹೆಚ್. ಪಾಟೀಲ್‌ರವರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳು ನೀವು ನೂರು ಜನ ರಾಜ್ಯದ ಉದ್ದಗಲಕ್ಕೆ ಹೋಗಿ ಬನ್ನಿ. ಈ ರೈತ ಅತಿವೃಷ್ಟಿಗೆ, ಬರಗಾಲಕ್ಕೆ ಕಳೆದ ನಾಲ್ಕೈದು ವರ್ಷಗಳಿಂದ ತುತ್ತಾಗಿರುವುದು ನಿಜವಲ್ಲವೆ ? ಅವನು ತೆಗೆದುಕೊಂಡಿರುವ 5,000 ರೂಪಾಯಿಗಳ ಸಾಲಕ್ಕೆ ಇವತ್ತು ಅವನು 15,000 ರೂಪಾಯಿಗಳನ್ನು ಕಟ್ಟುವಂಥ ವಿಚಿತ್ರವಾದ ಪರಿಸ್ಥಿತಿ ಬಂದಿರುವುದು ನಿಜವಲ್ಲವೆ ? ಬಹುಶಃ 1983 ರಲ್ಲಿ ಅವತ್ತಿನ ಜನತಾ ಸರ್ಕಾರ ಇಂಟರೆಸ್ಟ್ ಸಬ್ಸಿಡಿ ಸ್ಕೀಮನ್ನು ತಂದಿರುವುದು ಒಂದು ರೀತಿಯಲ್ಲಿ ನಮ್ಮ ರಾಜ್ಯದ ರೈತರಿಗೆ ಅನಾನುಕೂಲವಾಯಿತು, ಅನ್ಯಾಯವಾಯಿತು. ಒಂದು ನೂರ ಮೂವತ್ತು ಕೋಟಿ ರೂಪಾಯಿಗಳ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವುದಕ್ಕೆ ಸರ್ಕಾರ ಬೊಕ್ಕಸದಿಂದ ತುಂಬಿ ಕೊಟ್ಟಿದೆ. ಆದರೆ , ಪರಿಣಾಮ ಏನಾಯಿತು ? 1983–87 ರಲ್ಲಿ ಇಂಟರೆಸ್ಟ್ ಸಬ್ಸಿಡಿ ಸ್ಕೀಮ್ ತಂದಾಗ. ರೈತ ಸುಮಾರು 400 ಕೋಟಿ ರೂಪಾಯಿಗಳ ಅಸಲನ್ನು ವಾಪಸ್ ಕೊಟ್ಟ, ರಿನ್ಯೂ ಆಯಿತು. ನಾನು ಇಲ್ಲಿರತಕ್ಕ ಹಿರಿಯ ಸಚಿವರನ್ನು ಕೇಳುತ್ತೇನೆ, ಈ 400 ಕೋಟಿ ರೂಪಾಯಿಗಳನ್ನು ಮರು ಪಾವತಿ ಮಾಡಿದನಲ್ಲ, ಅವನ ಜೇಬಿನಲ್ಲಿ ಹಣವಿತ್ತೆ ? ಇಲ್ಲ. ಬುಕ್ ಅಡ್ಜಸ್ಟ್‌ಮೆಂಟ್ ಆಯಿತು. ನೀವು ಸಹಕಾರಿ ಕ್ಷೇತ್ರದಲ್ಲಿ ಎಕ್ಸ್‌ಪರ್ಟ್ ಇದ್ದೀರಿ, ಆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೀರಿ, ನೀವೇ ನೋಡಿಕೊಂಡು ಬನ್ನಿ. ಯಾವುದೇ ಒಂದು ಕೋ–ಅಪರೇಟೀವ್ ಸೊಸಾಯಿಟಿಗೆ ರೈತನಿಂದ 25 ಲಕ್ಷ ರೂಪಾಯಿಗಳ ಸಾಲ ಬರಬೇಕಿದ್ದು, 10 ಲಕ್ಷ ರೂಪಾಯಿಗಳ ಇಂಟರೆಸ್ಟ್ ಬರಬೇಕಿದ್ದು, ಆ 25 ಲಕ್ಷ ರೂಪಾಯಿಗಳ ಅಸಲನ್ನು ಕಟ್ಟುವಂಥ ಸಂದರ್ಭದಲ್ಲಿ ಬಡ್ಡಿ ಮನ್ನಾ ಆಗುತ್ತದೆ ಎಂದು ಅಲ್ಲಿರುವ ಕೋ–ಆಪರೇಟಿವ್ ಸೊಸಾಯಿಟಿಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಡೈರೆಕ್ಟರುಗಳು ಹಾಗೂ ಸಿಬ್ಬಂದಿ ಕುಳಿತುಕೊಂಡು ಆ ಸಾಲವನ್ನು ಕೊಟ್ಟು ತೆಗೆದುಕೊಂಡ ರೀತಿ ಮಾಡಿ ಬುಕ್ ಅಡ್ಜಸ್ಟ್‌ಮೆಂಟ್ ಮಾಡಿಕೊಂಡರು. ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಆಗುತ್ತಿರುವುದರಿಂದ, ರೈತ ಉಳಿದುಕೊಳ್ಳುತ್ತಾನೆ ಎಂದು ಮಾಡಿದರು. ಅದು ಇಲ್ಲದಿದ್ದರೆ 1987 ಕ್ಕೆ ಮುಂಚೆ ಅವನು ಕಟ್ಟಿದಂಥ 400 ಕೋಟಿ ರೂಪಾಯಿಗಳ ಅಸಲಿನಿಂದ ಮಾತ್ರ ಅವನು ವಿಮುಕ್ತನಾಗುತ್ತಿದ್ದ. ಒಂದು ತರಹ ಜನತಾ ದಳದವರು ಅನುಕೂಲ ಮಾಡಿಕೊಟ್ಟರು, ಇಲ್ಲವೆಂದು ಹೇಳುವುದಿಲ್ಲ. ಆದರೆ, ಅದರಿಂದ ಈ ರಾಜ್ಯದ ರೈತನಿಗೆ ಅನಾನುಕೂಲವಾಯಿತು. ನಾವು ಗಮನಿಸಬೇಕಾದ ಇನ್ನೊಂದು ಪ್ರಮುಖವಾದ ಅಂಶವೇನೆಂದರೆ, ಇವತ್ತು ಆ ಸಾಲವನ್ನು ಮನ್ನಾ ಮಾಡಿ ಹೊಸದಾಗಿ 2000 ರೂಪಾಯಿಗಳಿರಬಹುದು, 5000 ರೂಪಾಯಿಗಳಿರಬಹುದು ಸಾಲ ಕೊಟ್ಟಾಗ ರೈತನು ನೇರವಾಗಿ ಹೊಲಕ್ಕೆ ಹೋಗಿ ಬಿತ್ತನೆ ಬೀಜ ಹಾಕಿ ಗೊಬ್ಬರ ಹಾಕಿ ಬೆಳೆ ಬೆಳೆಯುವುದಕ್ಕೆ ಆ ದುಡ್ಡನ್ನು ಉಪಯೋಗ ಮಾಡುತ್ತಾನೆ, ಒಳ್ಳೆಯ ಬೆಳೆ ಬೆಳೆಯುತ್ತಾನೆ. ಇದರಿಂದ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತದೆ, ರೈತನ ಪರಿಸ್ಥಿತಿಯೂ ಸುಧಾರಣೆಯಾಗುತ್ತದೆ. ಆದರೆ ಅದನ್ನು ಮಾಡಲಿಲ್ಲ. ಅದನ್ನು ಮಾಡದೇ ಇದ್ದರೆ, ಈ ವರ್ಷ ರೈತ ಹೇಗೆ ಬರಗಾಲಕ್ಕೆ ತುತ್ತಾದನೋ ಹಾಗೆ ಮುಂದಿನ ವರ್ಷ ಮಳೆ ಬಂದರೂ ಸಹ ಸಮಯಕ್ಕೆ ಸರಿಯಾಗಿ ಬಿತ್ತನೆ ಮಾಡಿ, ಗೊಬ್ಬರ ಹಾಕಿ, ಉಳಿದುಕೊಳ್ಳುವಂಥ ಸ್ಥಿತಿಯಲ್ಲಿಲ್ಲ. ದಯನೀಯವಾದ ಸ್ಥಿತಿಯಲ್ಲಿದ್ದಾನೆ. ನಮ್ಮ ಪ್ರೊ. ನಂಜುಂಡಸ್ವಾಮಿಯವರು ನಾವು ಭಿಕ್ಷೆ ಬೇಡುತ್ತಿಲ್ಲವೆಂದು ಅನೇಕ ಸಾರಿ ಹೇಳಿದ್ದಾರೆ. ನಾನೂ ಹೇಳುತ್ತಿದ್ದೇನೆ, ನಾವು ಬಿಕೆ ಬೇಡುತ್ತಿಲ್ಲ. ನಮ್ಮ ಹಕ್ಕನ್ನು ಕೇಳುತ್ತಿದ್ದೇವೆ. ರೈತನು ಬೆಳೆದ ಬೆಳೆಗೆ ಸರಿಯಾದಂಥ ಬೆಲೆ ಸಿಕ್ಕಲಿಲ್ಲ. ಈಗಲೂ ನೀವು 10,000 ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದರೆ ಅದು ಮೊದಲಿನಷ್ಟು ಹೆಚ್ಚು ಆಗುತ್ತ. ಹಾಗಾದರೆ ರೈತನನ್ನು ಬದುಕಿಸುವುದಕ್ಕೆ ಏನು ಮಾಡಬೇಕು ? ಅವನ ಕಾಲ ಮೇಲೆ ಅವನು ನಿಂತುಕೊಳ್ಳುವುದಕ್ಕೆ ಏನು ಮಾಡಬೇಕು ? ಅವರ ಬಗ್ಗೆ ಯೋಚನೆ ಮಾಡುವಂಥ ಕಾಲ ಇವತ್ತು ಬಂದಿದೆ. ಸನ್ಮಾನ್ಯ ಶ್ರೀ ಕೆ. ಹೆಚ್. ಪಾಟೀಲ್‌ರವರಿಗೆ ಗೊತ್ತಿರುವಂತೆ, ಇವತ್ತು ನಗರ ಪ್ರದೇಶದ ಜನರಿಗೂ ಹಾಗೂ ಗ್ರಾಮಾಂತರ ಪ್ರದೇಶದ ಜನರಿಗೂ ಇರುವ ಅಂತರ ಜಾಸ್ತಿಯಾಗುತ್ತಾ ಇದೆ. ಅವನು ಕೃಷಿ ಕಾರ್ಮಿಕನಿರಬಹುದು, ರೈತನ ಮಗನಿರಬಹುದು, ರೈತನಿರಬಹುದು, ಅವನಿಗೆ ಬೇಕಾದ ಸವಲತ್ತು ಸಿಗದೇ ಅವನು ನಗರದ ಕಡೆ ವಲಸೆ ಹೋಗುವಂಥ ಏನೊಂದು ವಾತಾವರಣ ಉಂಟಾಗಿದೆ, ಈ ಪರಿಸ್ಥಿತಿಯನ್ನು ಮುಂದುವರಿಸುವುದಕ್ಕೆ ನೀವು ಬಿಟ್ಟರೆ ದೇಶ ಸರ್ವನಾಶದತ್ತ ಹೋಗಬಹುದು. ಮುಂದಿನ ಪೀಳಿಗೆಯ ಜನಾಂಗವನ್ನು ಕ್ಷಮಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಯಾದರೂ ರೈತನಿಗೆ ಎಲ್ಲಾ ಸವಲತ್ತುಗಳು ಸಿಕ್ಕಿ ತನ್ನ ಕಾಲಮೇಲೆ ತಾನು ನಿಲ್ಲುವಂಥ ಪ್ರಯತ್ನವನ್ನು ನಾವು ಮಾಡಬೇಕಾಗಿದೆ, ಅವನು ನೆಮ್ಮದಿಯ ಜೀವನವನ್ನು ನಡೆಸುವ ಪ್ರಯತ್ನವನ್ನು ನಾವು ಮಾಡಬೇಕಾಗಿದೆ. ತಮ್ಮ ಅಂಕಿ ಅಂಶಗಳ ಪ್ರಕಾರ, ಕರ್ನಾಟಕ ಸರ್ಕಾರದ ಪ್ರಕಟಣೆ ಪ್ರಕಾರ, 1983–87ರ ಅವಧಿಯೊಂದರಲ್ಲೇ ರೈತರಿಗೆ 1198 ಕೋಟಿ ರೂಪಾಯಿಗಳ ಬೆಳೆ ನಷ್ಟವಾಗಿದೆ. ಇಲ್ಲವೆಂದರೆ ಹೇಳಿ. ಈ ಸದನದಲ್ಲಿ ಮಾನ್ಯ ಸಹಕಾರ ಸಚಿವರಿದ್ದಾರೆ. ಮಾನ್ಯ ಕೃಷಿ ಸಚಿವರಿದ್ದಾರೆ. ಈ ಅಂಕಿ ಅಂಶಗಳನ್ನು ತರಿಸಿ. ನಿಮ್ಮ ಪ್ರಕಟಣೆಯ ಪ್ರಕಾರ 1983–87ರ ಅವಧಿಯೊಳಗಾಗಿ ಆಗಿರುವಂಥ ಬೆಳೆಯ ನಷ್ಟ 1,198 ಕೋಟಿ ರೂಪಾಯಿಗಳನ್ನು ಮೀರಿದೆ. ಇವತ್ತು ರೈತ ಅದನ್ನೆಲ್ಲಾ ಕೇಳುತ್ತಿಲ್ಲ. ಹಳೆಯ ಸಾಲವನ್ನು ಮನ್ನಾ ಮಾಡಿ ಎಂದು ಕೇಳುತ್ತಿಲ್ಲ ನಾವು ಗೌರವದಿಂದ ಜೀವನ ನಡೆಸುವುದಕ್ಕೆ ಅನುಕೂಲ ಮಾಡಿಕೊಡಿ, ಅದಕ್ಕೆ ಬೇಕಾದ ಕನಿಷ್ಠ ಸವಲತ್ತುಗಳನ್ನು

ಒದಗಿಸಿಕೊಡಿ ಎಂದು ಕೇಳುತ್ತಿದ್ದಾನೆ. ಒಂದು ವಿಚಾರ ಇದೆ. ಮಾನ್ಯ ಶ್ರೀ ಬಸವಲಿಂಗಪ್ಪನವರು ದುಡ್ಡಿಲ್ಲವೆಂದು ಹೇಳಿದ್ದಾರೆ. ನಾವು ರೈತರಿಗೆ ದ್ರೋಹ ಮಾಡಿದಂತೆ ಆಗುತ್ತದೆ. ಇದನ್ನು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾದ ಮೇಲೆ ಮಾಡುವಂಥಾದ್ದಲ್ಲ. ರೈತರ ಸಾಲ ಮನ್ನಾ ಮಾಡುವುದು ಸರ್ಕಾರದ ಆರ್ಥಿಕ ಪರಿಸ್ಥಿತಿ ಅನುಕೂಲವಾದಾಗ ಮಾಡುವ ಸಂಗತಿಯಲ್ಲ. ಇದು ಒಂದು ಅವಶ್ಯಕ ಖರ್ಚು ಇದು ಒಂದು ಅಭಿವೃದ್ಧಿ ಕಾರ್ಯವನ್ನು ಮಾಡುತ್ತಿದ್ದೇವೆ, ದುಡ್ಡನ್ನು ವಿನಿಯೋಗ ಮಾಡುತ್ತಿದ್ದೇವೆ ಎನ್ನುವ ಭಾವನೆಯಲ್ಲ.

12-40 ಪಿ. ಎಂ.

ನೀವು ಎಲ್ಲಿದ್ದರೂ. ಮಂತ್ರಿಗಳಾಗುತ್ತೀರಿ, ಬಡ ಜನರ ಕಷ್ಟ ತಮಗೆ ಹೇಗೆ ಸ್ವಾಮಿ ಗೊತ್ತಾಗಬೇಕು. ಆದರೆ ನಿಮಗೆ ಅವರ ಕಷ್ಟ ಗೊತ್ತಾಗುವುದಿಲ್ಲ. ಸುಖವಾಗಿರುವಂಥ ಜನ ತಾವು. ಕಳೆದ 42-43 ವರ್ಷಗಳಲ್ಲಿ ಬಹುಶಃ ನೀವು ಶಾಸಕರಾಗಿ ಯಾವತ್ತೂ ಗೆದ್ದರೋ ಅದು ನಿಮ್ಮ ತಂದೆ ತಾಯಿಗಳ ಪೂರ್ವಜನ್ಮದ ಪುಣ್ಯದ ಫಲ ಶಾಸಕರಾಗಿ ಮಂತ್ರಿ ಸ್ಥಾನದಲ್ಲಿ ಕುಳಿತಿದ್ದೀರಿ ನಮ್ಮ ರೈತನ ಸ್ಥಿತಿ ಏನಾಗಿದೆ. ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಅದು ದೇವರ ದಯೆ, ಯಾವುದೋ ಒಂದು ಪುಣ್ಯದಿಂದ ನೀವು ಅಲ್ಲಿ ಕುಳಿತಿದ್ದೀರಿ. ಅಲ್ಲಿ ಕುಳಿತಿರುವಾಗ ನೀವು ಇಷ್ಟೊಂದು ಸುಖವಾಗಿದ್ದೀರಲ್ಲಾ ಸ್ವಾಮಿ, ನೀವು ಶಾಸಕರಾಗುವುದಕ್ಕೆ ಮುಂಚೆ ನಿಮ್ಮ ಸ್ಥಿತಿ ಏನಿತ್ತು. ಇವೊತ್ತು ಎಷ್ಟೊಂದು ಸುಧಾರಣೆಯಾಗಿದೆ. ಆದರೆ ಅದೇ ರೈತನ ಸ್ಥಿತಿ ಏನು ಸುಧಾರಣೆಯಾಗಿದೆ.

ಶ್ರೀ ಬಿ. ಬಸವಲಿಂಗಪ್ಪ :- ನಿಮ್ಮ ಸುಧಾರಣೆಯೂ ಆಗಿದೆಯೋ ಇಲ್ಲವೋ.

ಶ್ರೀ ಬಿ. ಎಸ್. ಯಡಿಯೂರಪ್ಪ- ನಮ್ಮದು, ನಿಮ್ಮದು ಆಗಿದೆಯೋ ಇಲ್ಲವೋ. ನಾವು ಇಲ್ಲಿ ಶಾಸಕರಾಗಿ ಗೆದ್ದು ಬಂದಿದ್ದೇವೆ. ಆದರೆ ನಮ್ಮನ್ನು ನಿಮ್ಮನ್ನು ಗೆಲ್ಲಿಸಿಕೊಟ್ಟಂಥ ಬಡ ರೈತನ ಮಗ, ನಿರುದ್ಯೋಗಿ ಯುವಕರೇನಿದ್ದಾರೆ ಅವರ ಅಭಿವೃದ್ಧಿ ಕಡೆಗೆ ಯೋಚನೆಯನ್ನು ಮಾಡುವುದು ಬೇಡವೆ. ಅದನ್ನು ಯೋಚನೆ ಮಾಡುವಂಥ ಕಾಲ ಇವೊತ್ತು ಸನ್ನಿಹಿತವಾಗಿದೆ. ಆ ದಿಕ್ಕಿನಲ್ಲಿ ತಾವು ಯೋಚನೆ ಮಾಡಬೇಕೆನ್ನುವುದಕ್ಕೋಸ್ಕರ ನಾನು ಇಷ್ಟೆಲ್ಲಾ ಮಾತುಗಳನ್ನು ಹೇಳಲಿಕ್ಕೆ ಹೊರಟೆ. ನಾನು ಸಲಹೆಗಳನ್ನು ಕೊಡುತ್ತೇನೆ, ಪ್ರಾರಂಭದಲ್ಲಿಯೇ ಹೇಳಿದೆ. ಇವೊತ್ತು ರೈತನ ಸಾಲವನ್ನು ಮನ್ನಾ ಮಾಡುವುದರಲ್ಲಿ ತೃಪ್ತಿಪಟ್ಟುಕೊಳ್ಳದೇ ಅವನ ಬದುಕಿಗೆ ಬೇಕಾದಂಥ ಕೆಲವು ಕಾರ್ಯಕ್ರಮಗಳನ್ನು ರೂಪಿಸುವ ಕಡೆಗೆ ಸನ್ಮಾನ್ಯ ಹಿರಿಯ ಸಚಿವರಾದ ಕೆ. ಹೆಚ್. ಪಾಟೀಲರು ಗಮನ ಹರಿಸಬೇಕು ಎಂದು ಹೇಳುತ್ತೇನೆ. ರೈತರ ಬಗ್ಗೆ ಅನೇಕ ಸಾರಿ ಚರ್ಚೆ ಮಾಡಿದ್ದೇವೆ ಅವನು ಬೆಳೆದಂಥ ಬೆಳೆಗೆ ವೈಜ್ಞಾನಿಕ ಬೆಲೆಯನ್ನು ಕೊಡಿ ಎಂದು ಹೇಳಿದ್ದೇವೆ. ಅವರ ಶ್ರಮವನ್ನು ಅರ್ಥ ಮಾಡಿಕೊಂಡು ಅವನ ಭೂಮಿಯ ಬೆಲೆಯನ್ನು ಆಧಾರವಾಗಿಟ್ಟುಕೊಂಡು, ಅದರ ಆಧಾರದ ಮೇಲೆ ಒಂದು ವೈಜ್ಞಾನಿಕ ಬೆಲೆಯನ್ನು ಆವತ್ತಿನಿಂದ ಇವತ್ತಿನವರೆಗೆ ಕೊಟ್ಟಿದ್ದರೆ ರೈತ ಸಾಲ ಮನ್ನಾ ಮಾಡಿ ಎಂದು ನಿಮ್ಮ ಹತ್ತಿರ ಬರುತ್ತಿರಲಿಲ್ಲ. ಅಥವಾ ರೈತ ಸಾಲ ಬೇಕು ಎಂದು ನಿಮ್ಮ ಕೋ-ಆಪರೇಟೀವ್ ಸೊಸಾಯಿಟಿಗಳ, ಬ್ಯಾಂಕುಗಳ ಬಾಗಿಲಲ್ಲಿ ನಿಲ್ಲುತ್ತಿರಲಿಲ್ಲ. ಈ ರೀತಿಯಾಗಿ ಆರ್ಥಿಕ ದಿವಾಳಿತನವಾಗಿರುವಂಥ ಸರ್ಕಾರಗಳಿಗೆ ನಾವು ಕೊಡುತ್ತೇವೆ ಎಂದು ಹೇಳಿ, ದುಡ್ಡು ಕೊಡುವಂಥ ಸ್ಥಿತಿಗೆ ಅವನು ಬರುತ್ತಿದ್ದ. ಅದನ್ನು ಮಾಡಲಿಲ್ಲ. ಆ ಪಾಪದ ಕೆಲಸವನ್ನು ಅಧಿಕಾರದಲ್ಲಿರುವಂಥ ಜನರು ಮಾಡಿದರು. ಇನ್ನು ಎರಡನೆಯದು, ಇವೊತ್ತು ರೈತನ ಕೆಲಸ ಕಾರ್ಯಗಳಿಗೆ ಬೇಕಾಗುವಂಥ ಕ್ರಿಮಿನಾಶಕಗಳಿರಬಹುದು, ರಾಸಾಯನಿಕ ಗೊಬ್ಬರ ಇರಬಹುದು, ಅವುಗಳ ಬೆಲೆ ಗಗನಕ್ಕೇರುತ್ತಿದೆ. ಯಾವತ್ತಾದರೂ ಒಂದು ದಿವಸ ರಾಜ್ಯಸರ್ಕಾರವಾಗಲಿ, ಕೇಂದ್ರಸರ್ಕಾರವಾಗಲಿ, ರೈತನಿಗೆ ಬೇಕಾದಂಥ ರಾಸಾಯನಿಕ ಗೊಬ್ಬರ ಇರಬಹುದು, ಕ್ರಿಮಿನಾಶಕ ಇರಬಹುದು, ಹಾರೆ, ಪಿಕಾಸಿಗಳು ಇರಬಹುದು. ಇವುಗಳ ಬೆಲೆಯನ್ನು ಕಾರ್ಖಾನೆಯ ಮಾಲೀಕ ನಿಗದಿ ಮಾಡುತ್ತಾನಲ್ಲ, ಆ ಒಂದು ಸಮಯದಲ್ಲಿ ಆ ಗೊಬ್ಬರ ಯೂರಿಯಾ ಇರಬಹುದು. 17/17 ಇರಬಹುದು. ಆ ಗೊಬ್ಬರವನ್ನು ತಯಾರು ಮಾಡುವುದಕ್ಕೆ ಎಷ್ಟು ಖರ್ಚು ಬರುತ್ತದೆ; ಯಾವ ಬೆಲೆಯನ್ನು ನಿಗದಿ ಮಾಡುತ್ತಾನೆ ಎನ್ನುವುದನ್ನು ನೋಡುವಂತಹ ಪ್ರಯತ್ನ ಆಗುತ್ತಿದೆಯೇ. ರೈತನಿಗೆ ಬೇಕಾದ ಯಾವುದೇ ಒಂದು ವಸ್ತು ಇರಬಹುದು. ಗೊಬ್ಬರ ಇರಬಹುದು, ಕ್ರಿಮಿನಾಶಕ ಇರಬಹುದು, ಹಾರೆ, ಪಿಕಾಸಿ ಇರಬಹುದು. ಅವನ ಹಳೆಯ ಚಡ್ಡಿ ಒಗೆಯಲಿಕ್ಕೆ ಬೇಕಾದಂಥ ಒಂದು ಸೋಪು ಇರಬಹುದು; ಹಲ್ಲುಜ್ಜಲಿಕ್ಕೆ ಬೇಕಾದ್ದು ನಿಮ್ಮ ಟೂತ್‌ಪೇಸ್ಟ್ ಅಲ್ಲ... ಹಲ್ಲುಪುಡಿ ಇದನ್ನು ತಯಾರು ಮಾಡುವಂಥ ಕಾರ್ಖಾನೆ ಮಾಲೀಕ ಯಾವ ಆಧಾರದಮೇಲೆ ನಿಗದಿ ಮಾಡುತ್ತಾನೆ ಏನು ಎದನ್ನು ನೋಡುವಂಥ ಪ್ರಯತ್ನ ಆಯಿತೇ. ಕಾರ್ಖಾನೆಯ ಮಾಲೀಕ ಕೋಟ್ಯಾಧೀಶ್ವರ ಆದ. ಅದನ್ನು ಕೊಳ್ಳುವಂಥ ಸಾಮಾನ್ಯ ಜನ, ಮಧ್ಯಮ ವರ್ಗದ ಜನ ಕಣ್ಣೀರಿನಲ್ಲಿ ಕೈತೊಳೆಯುವಂಥ ಹೀನ ಸ್ಥಿತಿಗೆ ನಾವು ಬಂದಿಲ್ಲವೇನು ? ಇದನ್ನು ಹತೋಟಿಗೆ ತರುವಂಥಾದ್ದು ಸರ್ಕಾರದ ಜವಾಬ್ದಾರಿ ಅಲ್ಲವೇನು. ಇದು ಸುಮಾರು 42-43 ವರ್ಷಗಳಿಂದ ಆಗಿಲ್ಲ ಅಂದರೆ ನಾವಾದರೂ ಪ್ರಯತ್ನ ಮಾಡೋಣ. ಹಿಂದೆ ತಪ್ಪಾಗಿದೆ ಎಂದು ಯಾರನ್ನೋ ದೂರುತ್ತಾ ಕುಳಿತುಕೊಂಡರೆ ಆಗುವುದಿಲ್ಲ. ಸರ್ಕಾರ ಇರುವುದು ಇದಕ್ಕಲ್ಲವೇ . ಈ ಒಂದು ಸಾಮಗ್ರಿ ತಯಾರಾಗುತ್ತಾ ಇರಬೇಕಾದರೆ, ಈ ರಾಜ್ಯದ ಮಧ್ಯಮ ವರ್ಗದ ಜನ ಅದನ್ನು ಉಪಯೋಗಿಸಿ ಬಾಳಿ ಬದುಕಬೇಕಾ-

ದರೆ, ಅವರು ನೆಮ್ಮದಿಯಿಂದ ಇರಬೇಕು ಎನ್ನುವಂಥ ಈ ವ್ಯವಸ್ಥೆಯಲ್ಲಿ ಅವನು ತಯಾರು ಮಾಡುವಂಥ ಕಚ್ಚಾ ಮಾಲಿಗೆ ಒಂದು ವಸ್ತುವಿಗೆ, ಯಾವರೀತಿ ರೈತನಿಗೆ ಒಂದು ವೈಜ್ಞಾನಿಕ ಬೆಲೆಯನ್ನು ಕೊಡಿ ಎಂದು ಕೇಳುತ್ತಿದ್ದೇವೆಯೋ ಅದೇ ರೀತಿ ಅವನ ಶ್ರಮಕ್ಕೂ ಮತ್ತು ಅವನ ಇನ್‌ವೆಸ್ಟ್‌ಮೆಂಟ್‌ನ್ನು ನೋಡಿಕೊಂಡು ಸರಿಯಾದಂಥ ಬೆಲೆ ನಿಗದಿ ಮಾಡುವಂಥ ಯಾವುದಾದರೂ ಪ್ರಾಮಾಣಿಕ ಪ್ರಯತ್ನ ಇದುವರೆಗೂ ನಡೆಯಿತೆ ಸ್ವಾಮಿ. ನಮ್ಮ ಗ್ರಾಮೀಣ ಜನರಿಗೆ ಮೊದಲು ಕ್ರಿಮಿನಾಶಕವನ್ನು ಉಪಯೋಗ ಮಾಡುವುದು ಗೊತ್ತಿರಲಿಲ್ಲ; ಏಕೆಂದರೆ, ಮೊದಲು ರೋಗಗಳು ಬರುತ್ತಿರಲಿಲ್ಲ. ರಸಗೊಬ್ಬರಗಳನ್ನು ಉಪಯೋಗ ಮಾಡುವುದು ಆತನಿಗೆ ಗೊತ್ತಿರಲಿಲ್ಲ. ನೀವು ರೈತನಿಗೆ ಹೆಚ್ಚು ಹೆಚ್ಚು ಬೆಳೆಯನ್ನು ಬೆಳೆಯಿರಿ, ಇಂಥಿಂಥ ಬೀಜಗಳನ್ನು ಕೊಡುತ್ತೇವೆ, ಇದಕ್ಕಾಗಿ ಕೃಷಿ ಇಲಾಖೆ ಇದೆ, ಕೃಷಿ ತಜ್ಞರಿದ್ದಾರೆ ಎಂದು ಏನೇನೋ ಹೇಳಿ, ಅನೇಕ ರೀತಿಯ ಬಿತ್ತನೆ ಬೀಜಗಳನ್ನು ಕೊಟ್ಟಿರಿ. ಆ ಭೀಜಗಳು ಹುಟ್ಟುವಾಗಲೇ ರೋಗ ರುಜನಗಳಿಂದ ಹುಟ್ಟುವಂತೆ ಮಾಡಿದಿರಿ. ರಾಸಾಯನಿಕ ಗೊಬ್ಬರವನ್ನು ತಯಾರಿಸುವಂಥ ಕಾರ್ಖಾನೆಯ ಮಾಲೀಕರ ಜೊತೆಯಲ್ಲಿ, ಕ್ರಿಮಿನಾಶಕ ಔಷಧಿಗಳನ್ನು ತಯಾರಿಸುವಂಥ ಕಾರ್ಖಾನೆಯ ಮಾಲೀಕರ ಜೊತೆ ಶಾಮೀಲಾಗಿ ಆ ಮಾಲೀಕರು ತಮ್ಮ ಮನಸ್ಸಿಗೆ ಬಂದಂತೆ ಬೆಲೆಗಳನ್ನು ನಿಗದಿ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರಿ. ಇದರ ಹೊಣೆಯನ್ನು ನಾವೂ, ನೀವೂ, ಹೊರಬೇಕಾಗುತ್ತದೆ. ಇನ್ನು ಹತ್ತಾರು ವರ್ಷಗಳಾದಮೇಲೆ ಏನಾಗಬಹುದು ? ಕೃಷಿಯೂ ಬೇಡ, ಹೊಲವೂ ಬೇಡ ಯಾವುದಾದರೂ ಒಂದು ಕಾರ್ಖಾನೆಯಲ್ಲಿ ಒಂದು ನೌಕರಿ ಸಿಕ್ಕಿದರೆ ಸಾಕು ಎಂದು ತಮಗಿರತಕ್ಕ 50-60 ಎಕರೆ ಜಮೀನನ್ನೂ ಕೂಡ ಬಿಟ್ಟು, ಈಗಾಗಲೇ ಗ್ರಾಮೀಣ ಯುವ ಜನತೆ ವಲಸೆ ಬರುತ್ತಿದ್ದಾರೆ. ಈ ದಿಕ್ಕಿನಲ್ಲಿ ನಮ್ಮ, ನಿಮ್ಮೆಲ್ಲರ ಯೋಚನೆ ಪ್ರಾರಂಭವಾಗಬೇಕಾಗಿದೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ ತಾವು ವೈಜ್ಞಾನಿಕ ಬೆಲೆಯನ್ನು ರೈತನ ಉತ್ಪಾದನೆಗೆ ಕೊಡುವುದರ ಜೊತೆಗೆ, ರೈತನ ಅಗತ್ಯಕ್ಕೆ ಬೇಕಾದಂಥ ಯಾವುದೇ ವಸ್ತು ಇರಬಹುದು, ಅದನ್ನು ತಯಾರು ಮಾಡುವಂತಹ ಕಾರ್ಖಾನೆಯ ಮೇಲೆ ಒಂದು ಹತೋಟಿಯನ್ನಿಟ್ಟುಕೊಂಡು ಸಬ್ಸಿಡೈಸ್ಡ್ ರೇಟ್‌ನಲ್ಲಿ ರೈತನಿಗೆ ಸಿಕ್ಕುವಂತೆ ಮಾಡಿದರೆ ಮತ್ತೆ ಈತ ಸಾಲಗಾರ ಆಗುವುದಿಲ್ಲ. ನಾನು ತಮಗೆ ಪ್ರಾರಂಭದಲ್ಲೇ ಹೇಳಿದೆ. ಈ ರೀತಿ ಬರಗಾಲ ಅಥವಾ ಅತಿವೃಷ್ಟಿಗೆ ಸಿಕ್ಕಿ ರೈತನ ಬೆಳೆ ನಾಶವಾದಾಗ ಅದಕ್ಕೆ ಪರಿಹಾರವನ್ನು ನೀಡುವುದು ಸರ್ಕಾರದ ಜವಾಬ್ದಾರಿ ಅಲ್ಲವೆ ? ಇವತ್ತು ರೈತ ಒಂದು ವರ್ಷಕಾಲ ಪೂರ್ತಿಯಾಗಿ ತನ್ನ ಜಮೀನಿನಲ್ಲಿ ದುಡಿದರೂ ಕೂಡ ಕೇವಲ ಒಂದು ಸಾವಿರ ರೂಪಾಯಿ ಕೂಡ ತನ್ನ ಮನೆಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ತನ್ನ ಹೆಂಡತಿಗೆ ಒಂದೆರಡು ಸೀರೆಗಳನ್ನು ತಂದು ಕೊಡಲಿಕ್ಕೆ ಸಾಧ್ಯವಿಲ್ಲದೇ ಇರತಕ್ಕ ಪರಿಸ್ಥಿತಿಯಲ್ಲಿದ್ದಾನೆ. ರೈತನ ಬೆಳೆ ಸಂಪೂರ್ಣವಾಗಿ ನಾಶವಾದರೆ ಇನ್ನು 3-4 ವರ್ಷಗಳಲ್ಲಿ ತಬ್ಬಲಿಯಾಗುತ್ತಾನೆ. ರೈತನಿಗೆ ಊಟಕ್ಕೇ ಇಲ್ಲದಿರತಕ್ಕ ಪರಿಸ್ಥಿತಿ ಇರುವಾಗ ಸಹಕಾರಿ ಕ್ಷೇತ್ರದಲ್ಲಿ ನುರಿತಿರತಕ್ಕ ಮಾನ್ಯ ಕೆ. ಹೆಚ್. ಪಾಟೀಲರು ಹಾಗೂ ಇನ್ನೂ ಕೆಲವು ಹಿರಿಯ ಸಚಿವರು ಯಾರಿದ್ದೀರಿ ನೀವೆಲ್ಲರೂ ಮುಂದೆ ಏನು ಧೈರ್ಯವನ್ನು ಮಾಡುತ್ತೀರಿ ? ಅತಿವೃಷ್ಟಿ ಮತ್ತು ಬರಗಾಲದ ಪರಿಹಾರಕ್ಕೆ ನನ್ನ ಸರ್ಕಾರ ಬಜೆಟ್‌ನಲ್ಲಿ ಒಂದು ನೂರು ಕೋಟಿ ರೂಪಾಯಿಗಳನ್ನು ತೆಗೆದಿರುತ್ತೇನೆ, ನಾನು ಕೇಂದ್ರಸರ್ಕಾರದ ಭಿಕ್ಷೆಗೆ ಹೋಗುವುದಿಲ್ಲ, ಅವರ ಸಹಾಯವನ್ನು ಕೇಳುವುದಿಲ್ಲ, ನಮ್ಮ ರಾಜ್ಯದ ರೈತರ ಹಿತ ಕಾಪಾಡುವಂಥದ್ದು ನನ್ನ ಸರ್ಕಾರದ ಜವಾಬ್ದಾರಿ ಎಂದು ಹೇಳಬೇಕು. ಈ ರೀತಿ ಬರಗಾಲಕ್ಕೆ ಅಥವಾ ಅತಿವೃಷ್ಟಿಗೆ ರಾಜ್ಯದ ರೈತ ತುತ್ತಾದರೆ ನಮ್ಮ ಅಧಿಕಾರಿಗಳು ಆ ರೈತನ ಮನೆಯ ಬಾಗಿಲಿಗೆ ಧಾವಿಸಿ ಹೋಗಿ ಅವನು ಬದುಕಲು ಬೇಕಾದ ಪರಿಹಾರವನ್ನು ಕೊಡುತ್ತಾರೆ ಎಂದು ಯೋಚನೆ ಮಾಡುತ್ತೀರಾ ? ಈ ರೀತಿಯ ಕಾರ್ಯಕ್ರಮಗಳನ್ನು ನೀವು ರೂಪಿಸಿಕೊಳ್ಳುತ್ತೀರಾ, ಇದರ ಅಗತ್ಯತೆ ಇಲ್ಲವೆ ? ಈ ರೀತಿಯ ಸೌಲಭ್ಯಗಳನ್ನು ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಸ್ವಾಮಿ, ಇತ್ತೀಚೆಗೆ ಬೆಳೆ ವಿಮೆ ಎಂದು ಯೋಜನೆ ಪ್ರಾರಂಭವಾಯಿತು. ನಾನು ಜೀವ ವಿಮೆಯನ್ನು ಮಾಡಿಸುತ್ತೇನೆ. ನಾನು ಜೀವ ವಿಮೆಯನ್ನು ಮಾಡಿಸತಕ್ಕದ್ದು ನನ್ನ ಜೀವನದ ರಿಸ್ಕ್‌ಕೋಸ್ಕರ. ನನಗೆ ಏನಾದರೂ ಹೆಚ್ಚು ಕಡಿಮೆ ಆದರೆ ನನ್ನ ಹೆಂಡತಿ ಮಕ್ಕಳಿಗೆ ಅನುಕೂಲ ಆಗಲೆಂದು ನಾನು ಮಾಡಿಸುತ್ತೇನೆ. ಇನ್‌ಷ್ಯೂರೆನ್ಸ್ ಮಾಡಿಸಿದ ವ್ಯಕ್ತಿ ಯಾವುದಾದರೂ ಕಾರಣದಿಂದ ಸತ್ತರೆ ಕೂಡಲೇ ಅವನ ಮನೆಯವರಿಗೆ ಆ ಜೀವವಿಮೆ ಹಣ ತಲುಪುತ್ತದೆ. ಇದಕ್ಕಾಗಿ ಜೀವವಿಮಾ ಯೋಜನೆ ಇದೆ. ಅದನ್ನು ನಾವು ಅಳವಡಿಸಿಕೊಂಡಿದ್ದೇವೆ. ಅಧಿಕಾರದಲ್ಲಿರತಕ್ಕ ನಾವೂ, ನೀವೂ ರಾಜಕೀಯವನ್ನು ಮರೆಯೋಣ ಇದುವರೆಗೆ ಅಧಿಕಾರದಲ್ಲಿದ್ದಂಥ ಕೇಂದ್ರ ಸರ್ಕಾರ ಸುಮಾರು 35-40 ವರ್ಷಗಳ ಕಾಲ ಕಣ್ಣು ಮುಚ್ಚಿಕೊಂಡು ಕುಳಿತಿದ್ದು ಇತ್ತೀಚೆಗೆ ಕೆಲವು ವರ್ಷಗಳಿಂದ ಬೆಳೆ ವಿಮೆ ಯೋಜನೆಯನ್ನು ಜಾರಿಗೆ ತಂದಿತು. ಈ ಬೆಳೆ ವಿಮೆ ಯೋಜನೆಯ ಮೂಲಕ ಒಂದು ತಾಲ್ಲೂಕನ್ನು ಒಂದು ಘಟಕವನ್ನಾಗಿ ಮಾಡತಕ್ಕದ್ದು, ಒಂದು ಹೋಬಳಿಯನ್ನು ಒಂದು ಘಟಕವನ್ನಾಗಿ ಮಾಡತಕ್ಕದ್ದು ಎಂದು ಒಂದು ಚಿಂತನೆಯನ್ನು ಮಾಡಿ ನಿಮ್ಮ ಅಧಿಕಾರಿಗಳು ಏನೊಂದು ಸಲಹೆಯನ್ನು ಕೊಟ್ಟರು, ಅದನ್ನು ಕಾರ್ಯರೂಪಕ್ಕೆ ತಂದಂಥ, ಅವತ್ತು ಅಧಿಕಾರದಲ್ಲಿದ್ದಂಥ ಜನರನ್ನು ಮೂರ್ಖರೆಂದು ಕರೆಯಬೇಕೆ ? ಅಥವಾ ಈ ಯೋಜನೆಯನ್ನು ತಂದು ರೈತನ ಕಣ್ಣೊರೆಸುವ ಕುತಂತ್ರವನ್ನು ಮಾಡಿದರು ಅಥವಾ ಒಂದು ಷಡ್ಯಂತ್ರವನ್ನು ಮಾಡಿದರೆಂದು ಹೇಳಬೇಕೆ ? ದೇಶದಲ್ಲಿ ಈ ರೀತಿ ಬೆಳೆ ನಾಶವಾದಾಗ ಕೊನೆಯಪಕ್ಷ ಒಂದು ಊರನ್ನು ಒಂದು ಘಟಕ ಎಂದು ಮಾಡಿ ಅಲ್ಲಿ ಬೆಳೆ ನಾಶವಾಗಲಿ, ಅತಿವೃಷ್ಟಿ

ಯಾಗಲಿ ಈ ಬೆಳೆ ವಿಮೆ ಯೋಜನೆಯ ಮೂಲಕ ಅಲ್ಲಿನ ರೈತರಿಗೆ ತಕ್ಷಣ ಸೌಲಭ್ಯಗಳನ್ನು ಕೊಡತಕ್ಕ ಯೋಚನೆಯನ್ನು ಮಾಡಿದಿರಾ ? 65–70 ವರ್ಷಗಳ ಕಾಲ ಅಧಿಕಾರದಲ್ಲಿದ್ದಂಥ ಹಲ್ಲ ಹಿರಿಯ ಸಚಿವರೂ ಇವತ್ತು ನಮ್ಮ ಎದುರಿಗೆ ಕುಳಿತಿದ್ದಾರೆ. ಇವರಿಗೆಲ್ಲಾ ಅವತ್ತಿನಿಂದ ಇವತ್ತಿನವರೆಗೂ ಬಹಳಷ್ಟು ಅನುಭವ ಇದೆ. ಅವರಲ್ಲಿ ಹಳ್ಳಿಗಳಿಂದ ಬಂದಿರುವವರೂ ಇದ್ದಾರೆ, ರೈತನ ಸಮಸ್ಯೆಗಳನ್ನು ತಿಳಿದಿರುವವರೂ ಇದ್ದಾರೆ. ರೈತನ ಕಣ್ಣೀರಿನ ಕರ್ಮ ಕತೆಯನ್ನು ನೋಡಿ ಬೆಂದು, ಸಹಕಾರ ನೀಡಿದಂಥ ಸರ್ಕಾರ ಅದೇ ರೈತನ ಕೃಪೆಯಿಂದ ಅಧಿಕಾರ ಸಿಕ್ಕಿರುವಾಗ ಅವನ ಕಣ್ಣೀರನ್ನೊರೆಸುವ ಪ್ರಾಮಾಣಿಕ ಪ್ರಯತ್ನವಾಗಲಿ. ಚಿಂತನೆಯಾಗಲಿ, ಈ ರಾಜ್ಯದಲ್ಲಿ ಅಥವಾ ಈ ದೇಶದಲ್ಲಿ ನಡೆಯಿತೆ ? ಅಂಥ ಪ್ರಯತ್ನ ಇವತ್ತು ಆಗಬೇಕಾದ ಅಗತ್ಯವಿಲ್ಲವೆ ? ಸ್ವಲ್ಪ ಭಾಗ ಮಾತ್ರ ನೀರಾವರಿ ಇರತಕ್ಕ ಭೂಮಿ ಇದೆ. ಇದರಲ್ಲಿ ನೂರಕ್ಕೆ ಸುಮಾರು 75–80 ಭಾಗ ಖುಷ್ಕಿ ಭೂಮಿ ಇದೆ. ಒಂದು ಎಕರೆ ಖುಷ್ಕಿ ಭೂಮಿಯಲ್ಲಿ ರೈತ 6–7 ತಿಂಗಳು ದುಡಿದರೂ ಕೂಡ ಕೇವಲ 500 ಅಥವಾ 1000 ರೂಪಾಯಿನಷ್ಟು ಕೂಡ ಉತ್ಪನ್ನವನ್ನು ಮಾಡುವುದಕ್ಕಾಗದೇ ಇರತಕ್ಕ ವಿಚಿತ್ರ ಪರಿಸ್ಥಿತಿ ಇವತ್ತು ಒದಗಿ ಬಂದಿದೆ. ಆ ಭೂಮಿಯಲ್ಲಿ ಏನು ಜಲರಾಶಿ ತುಂಬಿದೆ ಅದನ್ನು ಹೊರಗೆ ತೆಗೆದು ಆ ಕೃಷಿ ಭೂಮಿಗೆ ಒದಗಿಸತಕ್ಕಂಥ ಪ್ರಯತ್ನವನ್ನು ನೀವು ಮಾಡಿದಿರಾ ? ಜಲಾಶಯಗಳಲ್ಲಿ ನೀರು ಹರಿದು ಹೋಗುತ್ತಿದೆ. ನಾನು ಶಾಸಕನಾಗಿ 6 ವರ್ಷವಾಯಿತು. ನನ್ನ ತಾಲ್ಲೂಕಿನಲ್ಲಿ ಅಂಜನಾಪುರ, ಅಂಬಲಿಗೊಳದ ನೀರು ಏನು ಹರಿಬದುಹೋಗುತ್ತಿದೆ ಇದನ್ನು ಲಿಫ್ಟ್ ಇರಿಗೇಷನ್‌ಗೆ ಒಳಪಡಿಸಬೇಕೆಂದು ಕಳೆದ 56 ವರ್ಷಗಳಿಂದ ಸತತವಾಗಿ ಪ್ರಯತ್ನಮಾಡಿ ಮಾನ್ಯ ಪುಟ್ಟಸ್ವಾಮಿ ಗೌಡರ ಕಾಲಿಗೆ ಬಿದ್ದಿದ್ದಾಯಿತು. ಮಾನ್ಯ ದೇವೇಗೌಡರ ಕಾಲಿಗೆ ಬಿದ್ದಿದ್ದಾಯಿತು. ಮಾನ್ಯ ವೀರೇಂದ್ರ ಪಾಟೀಲರ ಕಾಲನ್ನೂ ಹಿಡಿದಿದ್ದಾಯಿತು. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಬೆಂಬಲಪತ್ರನ್ನು ಕೊಟ್ಟಿದ್ದೂ ಕೈಮುಗಿದದ್ದೂ ಆಯಿತು. ಪ್ರತಿವರ್ಷ ಬಜೆಟ್‌ನಲ್ಲಿ ತಂದರೂ ಅಲ್ಲಿ ನೀರಾವರಿ ಯೋಜನೆ ಆಗಲಿಲ್ಲ. ಏಕೆಂದರೆ, ಯಡಿಯೂರಪ್ಪ ವಿರೋಧ ಪಕ್ಷದಲ್ಲಿದ್ದಾನೆ, ಅವನ ಕ್ಷೇತ್ರದ ರೈತರಿಗೆ ಅನುಕೂಲವಾದರೆ ಯಡಿಯೂರಪ್ಪ ಇಲ್ಲಿ ಬಂದು ರೈತರ ಪರವಾಗಿ ಮಾತನಾಡುತ್ತಾನೆ. ಆದ್ದರಿಂದ ಇವನ ಸೊಲ್ಲನ್ನು ಅಡಗಿಸಬೇಕು, ಅವನು ಶಾಸನ ಸಭೆಯಲ್ಲಿ ಮತ್ತೆ ಬರದಹಾಗೆ ನೋಡಿಕೊಳ್ಳಬೇಕೆನ್ನುವುದಕ್ಕೋಸ್ಕರ ಪೂರ್ಣವಾಗಿ ನೆಗ್ಲೆಕ್ಟ್ ಮಾಡುವಂತಹ ಪಾಪವನ್ನು ಅಧಿಕಾರದಲ್ಲಿರತಕ್ಕಂಥ ಜನ ಮಾಡಿದರು. ಇವತ್ತಿಗೂ ಆ ಯೋಜನೆಯನ್ನು ಪ್ರಾರಂಭಿಸಲಿಲ್ಲ. ಇದು ಕೇವಲ ಯಡಿಯೂರಪ್ಪನ ಕರ್ಮಕಥೆಯಲ್ಲ. ಇದು ವ್ಯವಸ್ಥಿತವಾಗಿ ನಡೆಯುತ್ತಿರುವ ಷಡ್ಯಂತ್ರ. ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ರೈತರು, ಕೃಷಿ ಕಾರ್ಮಿಕರು, ಹರಿಜನ ಗಿರಿಜನ ಬಂಧುಗಳು ಅದೇ ಒಂದು ಗೊಂದಲದಲ್ಲಿ ನರಳುತ್ತಿರಬೇಕು; ಅವರು ಬುದ್ಧಿವಂತರಾಗಬಾರದು, ರಾಜಕೀಯ ವ್ಯಕ್ತಿಗಳು ಚುನಾವಣೆಯ ಸಂದರ್ಭದಲ್ಲಿ ಓಟನ್ನು ಕೇಳುವುದಕ್ಕೆ ಬಂದಾಗ, ಅದೇ ಗುಡಿಸಲು. ಅದೇ ರಸ್ತೆ, ಅದೇ ಆಸ್ಪತ್ರೆ, ಕುಡಿಯಲಿಕ್ಕೆ ನೀರಿಲ್ಲ. ತನ್ನ ಮಗನಿಗೆ ಉದ್ಯೋಗವಿಲ್ಲ ಎಂದು ಕಾಡಿ ಬೇಡಿ ಅವನು ಸಾಯುತ್ತಾ ಅಲ್ಲಿ ಬಿದ್ದಿರಬೇಕು. ನಾವು ಇಲ್ಲಿ ಮೋಜು ನಡೆಸಬೇಕು ಎನ್ನತಕ್ಕ ಷಡ್ಯಂತ್ರ ಸ್ವಾತಂತ್ರ್ಯ ಬಂದು 43 ವರ್ಷಗಳಾದರೂ ಇದು ಸತತವಾಗಿ ನಡೆಯುತ್ತಾ ಬಂದಿತು. ಇವತ್ತು ಜನರು ಜಾಗೃತರಾಗಿದ್ದಾರೆ. ನೀವು ಇಲ್ಲಿ ಮಾತನಾಡಬಹುದು. ಆದರೆ ಆದ್ಯತೆ ಯಾವುದಕ್ಕೆ ಕೊಟ್ಟಿದ್ದೀರಿ. ಈ ಸರ್ಕಾರದ ಬೊಕ್ಕಸಕ್ಕೆ ಬಜೆಟ್‌ನಲ್ಲಿ ದುಡ್ಡು ಬಂದಾಗ ಯಾವುದಕ್ಕೆ ಖರ್ಚು ಮಾಡಬೇಕೆಂಬುದನ್ನು ತೀರ್ಮಾನ ಮಾಡುವವರು ಯಾರು ? ತೀರ್ಮಾನ ಮಾಡುವವರು ಅಧಿಕಾರದಲ್ಲಿರತಕ್ಕಂಥ ನಿಮ್ಮ ಪಕ್ಷದವರು. ಅಧಿಕಾರದಲ್ಲಿ ಯಾರೇ ಇರಲಿ ಅವರು ಯಾವುದಕ್ಕೆ ಆದ್ಯತೆಯನ್ನು ಕೊಡಬೇಕು ಎಂದು ತೀರ್ಮಾನ ಮಾಡುತ್ತಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಬೋರ್ಡ್‌ಗಳನ್ನು ತೆಗೆದು ಹಾಕಿ ಅವುಗಳನ್ನು ಪಂಚಾಯಿತಿ ಎಂದು ಬೋರ್ಡ್ ಗಳನ್ನು ಬರೆಯುವುದಕ್ಕೋಸ್ಕರ 30–40 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಯೋಜನೆಯನ್ನು ತರಬೇಕೊ, ಆ ರೈತರ ಕಣ್ಣೀರನ್ನು ಒರಿಸತಕ್ಕಂಥ ಯೋಜನೆಗಳನ್ನು ತರಬೇಕೊ ಯೋಚನೆ ಮಾಡಿ. ಮನಬಂದಂತೆ ಸ್ವೇಚ್ಛಾಚಾರದ ಅಧಿಕಾರ ನಡೆದುಹೋಯಿತು. ಹಳ್ಳಿಯಲ್ಲಿ ವಾಸ ಮಾಡುವಂತಹ ವಿದ್ಯೆ, ಬುದ್ಧಿ ಇಲ್ಲದ ಜನರಿಗೆ ಈ ಒಂದು ಷಡ್ಯಂತ್ರದ ವಿರುದ್ಧ ಹೋರಾಟ ಮಾಡತಕ್ಕಂಥ ನೈತಿಕ ಶಕ್ತಿಯನ್ನು ತರಲಿಲ್ಲ; ಇದರ ಪರಿಣಾಮವಾಗಿ ಇವತ್ತು ಮನಬಂದಂತೆ ಅಧಿಕಾರವನ್ನು ನಡೆಸತಕ್ಕಂಥ ಪ್ರವೃತ್ತಿ ಬಂದಿದೆ ಏನು ಬಂದಿದೆ ಇದು ಕೊನೆಗಾಲ. ರಾಮನ ಆಣೆ ಎಂದು ಹೇಳುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಹೋಗುತ್ತಿದ್ದಾರೆ. ಇದೇ ಪ್ರವೃತ್ತಿ ಮುಂದುವರೆದರೆ ಮತ್ತೊಮ್ಮೆ ಶಾಸನ ಸಭೆಗೆ ತಾವು ಬರುವುದಕ್ಕಾಗುವುದಿಲ್ಲ. ನಿಮ್ಮ ಬಗ್ಗೆ ನಮಗೆ ಬಹಳ ಪ್ರೀತಿ ಇದೆ. ರೈತರ ಬಗ್ಗೆ ತಮಗೆ ಪ್ರೀತಿ ಇದ್ದರೆ ತಾವು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ :— ರೈತರನ್ನು ಉದ್ಧಾರ ಮಾಡಿ. ಇಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ನಂಜುಂಡಸ್ವಾಮಿಯವರು, ಮಾನ್ಯ ಬಾಬುಗೌಡರು ಅನ್ನಕೊಟ್ಟು ಸಾಕುತ್ತೇವೆಂದು ಹೇಳಿದರು. ಅವರು ನಿಮ್ಮನ್ನೂ ಸಾಕುತ್ತಾರೆ. ನೀವೂ ಹೊಲ ಉಳುವುದಿಲ್ಲ, ಇಬ್ಬರೂ ಹೊಲ ಉಳುವುದಿಲ್ಲ. ನಿಮ್ಮನ್ನೂ

ಸಾಕುತ್ತೇವೆಂದು ಹೇಳಿದರು. ಸಾಕುವುದು ಸರಿ. ಆದರೆ ಸರ್ಕಾರವನ್ನು ನಡೆಸಬೇಕು, ಸರ್ಕಾರವನ್ನು ಯಾವ ರೀತಿಯಲ್ಲಿ ನಡೆಸಬೇಕು ? ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿದಿರಿ, ಮಾಡಿ ಕೊಡೋಣ. ಅನುಕೂಲ ಮಾಡಿಕೊಡಬೇಕಾದರೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಸಾಲದ ರೂಪದಲ್ಲಿ ಅಥವಾ ಇನ್ನೊಂದು ಇಂಡಸ್ಟ್ರಿ ತರಹ ಮಾಡಬೇಕೆಂದು ಹೇಳಿದಿರಿ. ಇಂಡಸ್ಟ್ರೀ ಮಾಡುವುದಕ್ಕೆ ಯಾರೂ ತಯಾರಾಗಿಲ್ಲ. ಅವರ ಸಂಕಷ್ಟಗಳನ್ನು ಈ ಸದನದಲ್ಲಿ ಹೇಳುವುದರಿಂದ ಅವರಿಗೆ ಪರಿಹಾರ ಸಿಕ್ಕುತ್ತದೆಂದು ನಾನು ತಿಳಿದುಕೊಂಡಿಲ್ಲ. ಸಂಕಷ್ಟಗಳು ನೂರಾರು ವರ್ಷಗಳಿಂದ ಇದೆ. ಅಕಸ್ಮಾತ್ ಸಂಕಷ್ಟ ಇದ್ದರೆ ಅದರ ಬಗ್ಗೆ ನಾವು ಗಮನಹರಿಸಬೇಕು. ಈಗ ರೈತ ಎಂದರೆ ಯಾರು. ಹತ್ತುಸಾವಿರ ರೂಪಾಯಿಗಳ ಬೆಳೆಗೆ ಸಾಲ ತೆಗೆದು ಕೊಂಡಿರತಕ್ಕಂಥವರೆಲ್ಲ ರೈತರೆಂದು ಹೇಳುತ್ತೀರಿ. ಆ ರೈತರಿಗೆಲ್ಲ ಏನು ಬೇಕೋ ಅದನ್ನು ಮಾಡಿ. ಆದು ಅವರನ್ನು ನಂಬಿರತಕ್ಕಂಥ ಸಹಕಾರಿ ಸಂಸ್ಥೆಗಳಾಗಲಿ, ಬ್ಯಾಂಕ್‌ಗಳಾಗಲಿ ಅವರ ಮನೆ ಮುಚ್ಚುವಂತೆ ಮಾಡಿದರೆ ತಾವು ಎಷ್ಟೇ ಈ ರೀತಿ ಭಾಷಣ ಮಾಡಿದರೂ ಕೂಡ ಸರ್ಕಾರ ನಿಮ್ಮ ಕಡೆಗೆ ಗಮನ ಕೊಡುವುದಕ್ಕಾಗುವುದಿಲ್ಲರೆ ಇದನ್ನು ಸ್ಪಷ್ಟವಾಗಿ ತಮಗೆ ಹೇಳುತ್ತೇನೆ. ರೈತರನ್ನು ಉಳಿಸಿಕೊಳ್ಳುವಂತೆ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಸಹಕಾರ ಸಂಸ್ಥೆಗಳನ್ನು ಮುಚ್ಚಬಾರದು. ಬ್ಯಾಂಕ್‌ಗಳನ್ನು ಮುಚ್ಚಬಾರದು. ಅದಕ್ಕೆ ಮಾಡಬೇಕಾದ ಕೆಲಸ ಅಂದರೆ ರೈತರಿಗೆ ಆದ್ಯತೆಯನ್ನು ಕೊಡುವಂಥ ಕೆಲಸ ಮಾಡುವುದು ಆಗತ್ಯವಾಗಿದೆ. ಅದಕ್ಕೆ ದುಡ್ಡು ಕೊಡಬೇಕೆನ್ನುವ ಯೋಚನೆ ಮಾಡಬೇಕು. ಅನಗತ್ಯ ಕೆಲಸಗಳನ್ನು ತಾವು ಬಜೆಟ್‌ನಿಂದ ತೆಗೆಯಬೇಕು; ನಿಮಗೆ ಓಟನ್ನು ಕೊಟ್ಟು ನಿಮ್ಮನ್ನು ಕಳುಹಿಸಿರತಕ್ಕಂಥ ರೈತನಿಗೆ, ಕೃಷಿ ಕಾರ್ಮಿಕನಿಗೆ, ಬೇಕಾಗಿರುವ ಸವಲತ್ತುಗಳನ್ನು ನಮ್ಮ ರಾಜ್ಯ ಸರ್ಕಾರದ ಬೊಕ್ಕಸದಿಂದ ತುಂಬಿಕೊಡಿ. ಕೇಂದ್ರ ಸರ್ಕಾರದ ಬೊಕ್ಕಸದಿಂದ ತುಂಬಿಕೊಡುವಂಥ ವ್ಯವಸ್ಥೆ ಮಾಡಿ. ಕೇಂದ್ರ ಸರ್ಕಾರದಲ್ಲಿ ಪ್ರಧಾನಮಂತ್ರಿಗಳಾದ ಶ್ರೀಮಾನ್ ಚಂದ್ರಶೇಖರ್‌ರವರಿಗೆ ಹೇಳಿ. ಹಿಂದೆ ಇದ್ದವರು ಘೋಷಣೆ ಮಾಡಿ ಹೋದರು, ನಮ್ಮ ರಾಜ್ಯದಲ್ಲಿ ಅನಾನುಕೂಲವಾಗಿದೆ, ನಮ್ಮ ರಾಜ್ಯ ಸರ್ಕಾರದಲ್ಲಿ ಹಣವಿಲ್ಲ, ಆ ಹಣವನ್ನು ತುಂಬಿಕೊಡಿ ಎಂದು ಹೇಳಿ. ಇವತ್ತಿನ ದಿವಸ ಕೇಂದ್ರ ಸರ್ಕಾರವನ್ನು ಕೆಲವು ದೃಷ್ಟಿಯಿಂದ ಅಭಿನಂದಿಸಬೇಕಾಗುತ್ತದೆ; ಮಾನ್ಯ ಸಿಂಧ್ಯರವರು ಹೇಳಿದಂತೆ ಕೆಲವು ವಿಷಯಗಳಲ್ಲಿ ಅವರಿಗೂ ನಮಗೂ ಭೂಮಿಗೂ ಆಕಾಶಕ್ಕೂ ಇರುವಷ್ಟು ಅಂತರ ಇರಬಹುದು. ಆದರೆ ಕೆಲವು ಸತ್ಯಗಳನ್ನು ಹೇಳಬೇಕಾಗುತ್ತದೆ. ಸತ್ಯ ಸಂಗತಿಗಳನ್ನು ಹೇಳಬೇಕಾಗುತ್ತದೆ. ಕೊನೇ ಪಕ್ಷ ಶ್ರೀ ವಿ. ಪಿ. ಸಿಂಗ್‌ರ ಸರ್ಕಾರ ಬಂದಾಗ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುವ ಯೋಚನೆ ಮಾಡಿದ ಸಂದರ್ಭದಲ್ಲಿ ಅವತ್ತು ನಾನು ಶ್ರೀ ಮಾನ್ಯ ವೀರೇಂದ್ರ ಪಾಟೀಲರನ್ನು ಪ್ರಾರ್ಥಿಸಿದ್ದೆ, ಅವರ ಕಾಲಿಗೆ ಬಿದ್ದೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮುಂಚೆ ನಮ್ಮ ರಾಜ್ಯದ ರೈತರ ಪರಿಸ್ಥಿತಿ ಏನಿದೆ, ಯಾವುದಾದರೂ ಇಂಟರೆಸ್ಟ್ ಸಬ್ಸಿಡಿ ಸ್ಕೀಂ ಬಂದರೆ ಇಲ್ಲಿ ಯಾರೂ ಡಿಫಾಲ್ಟರ್ಸ್ ಇಲ್ಲ, ಇದನ್ನು ಮಾಡಿ ಎಂದು ಹೇಳಿದೆ. ಅವತ್ತೇ ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಇದರ ಬಗ್ಗೆ ತಾವು ಯೋಚನೆ ಮಾಡಿ , ರೈತರ ಸಾಲ ಮನ್ನಾದ ಬಗ್ಗೆ ಗಮನ ಕೊಡಿ, ಇಲ್ಲದಿದ್ದರೆ ಮುಂದೆ ತೊಂದರೆಯಾಗುತ್ತದೆಂದು ಹೇಳಿದ್ದೆ. ಇದನ್ನು ಇವತ್ತು ಮಾತ್ರ ನಾನು ಪ್ರಸ್ತಾಪ ಮಾಡುತ್ತಿಲ್ಲ. 19-3-90 ರಂದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ರೈತರ ಸಾಲ ಮನ್ನಾ ಮಾಡುವ ಬಗ್ಗೆ ಕರ್ನಾಟಕ ರೈತ ಸಮುದಾಯದ ಪರವಾಗಿ ಒತ್ತಾಯ ಪತ್ರ ಎಂದು ಬರೆದಿದ್ದೇವೆ. ಕೇಂದ್ರ ಸರ್ಕಾರದವರು ಹತ್ತು ಸಾವಿರ ರೂಪಾಯಿಗಳ ವರೆಗಿನ ಸಾಲ ಮನ್ನಾ ಮಾಡುವ ಯೋಜನೆಯನ್ನು ರೂಪಿಸುತ್ತಿರಬೇಕಾದರೆ ಇಲ್ಲಿ ಇಂಟರೆಸ್ಟ್ ಸಬ್ಸಿಡಿ ಸ್ಕೀಂ ಇದೆ, ಇದರಿಂದ ಏನೂ ಅನುಕೂಲವಾಗುವುದಿಲ್ಲ. ಅದಕ್ಕೋಸ್ಕರ 1990–91 ರ ರಾಜ್ಯದ ಮುಂಗಡ ಪತ್ರದಲ್ಲೂ ಕೂಡ ಈ ಬಗ್ಗೆ ನೀವು ಉಲ್ಲೇಖ ಮಾಡಿಲ್ಲವೆಂದು ಹೇಳಿದ್ದೆ. ಅಲ್ಲದೆ, ರೈತನಿಗೆ ಅನುಕೂಲವಾಗುವಂತಹ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತರುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೋಸ್ಕರ ಹೋಗೋಣ. ಆ ರೀತಿ ತಾವು ಒಂದು ಕಾರ್ಯಕ್ರಮವನ್ನು ರೂಪಿಸಿ ಎಂದು ಹೇಳಿದ್ದೇವು- ನಮ್ಮ ರಾಜ್ಯದಲ್ಲಿ 1989ರ ಮಾರ್ಚ ವರೆಗೆ ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡುವುದಾದರೆ ಒಟ್ಟು ಎಷ್ಟು ಹಣವನ್ನು ಮನ್ನಾ ಮಾಡಬೇಕು, ನಾವು ಎಷ್ಟು ಕೇಳಬೇಕು, ನಬಾರ್ಡ್‌ನವರು ಎಷ್ಟು ಕೊಡುತ್ತಾರೆ, ಕೇಂದ್ರ ಸರ್ಕಾರದವರು ನಮಗೆ ಎಷ್ಟು ಕೊಡುತ್ತಾರೆ ಎಂಬುದನ್ನೆಲ್ಲ ಪೂರ್ಣ ಪಟ್ಟಿ ಮಾಡಿ ಎಂದು ಹೇಳಿದ್ದೆವು. ಇಂಟರೆಸ್ಟ್ ಸಬ್ಸಿದಿಡಿ ಸ್ಕೀಂ ಬಂದಾಗ, ಮೊದಲು ಬಾರಿಗೆ ಈ ರಾಜ್ಯದಲ್ಲಿ ಜನತಾ ಸರ್ಕಾರ ಅಧಿಕಾರದಲ್ಲಿದ್ದಾಗ 118 ಜನರು ಬೆಂಬಲ ಕೊಡುತ್ತಿದ್ದ ಸಂದರ್ಭದಲ್ಲಿ ಬಡ್ಡಿ, ಸುಸ್ತಿಬಡ್ಡಿ ಮನ್ನಾ ಮಾಡುವುದಕ್ಕೆ 130 ಕೋಟಿ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಿಂದ ತುಂಬಿ ಕೊಟ್ಟರು. ನೀವು ಏನು ಮಾಡಿದಿರಿ ? ಏನು ಮಾಡುವುದಕ್ಕೆ ಹೊರಟಿದ್ದೀರಿ ? ಒಂದು ವರ್ಷದಿಂದ ಇದುವರೆಗೆ ಕಾಡಿದೆಬೇಡಿದರೂ ಸಹ ರೈತರ ಬಗ್ಗೆ ಎಷ್ಟೊಂದು ನಿರ್ಲಕ್ಷ್ಯ, ಎಷ್ಟೊಂದು ಧೈರ್ಯ ನಿಮಗೆ ? ಈ ಯೋಜನೆಯಲ್ಲಿ ಯಾವ ರೈತ ಬರುತ್ತಾನೆಂದು ಎಷ್ಟು ಕೋಟಿ ದುಡ್ಡು ಬೇಕಾಗುತ್ತದೆಂದು ಸರ್ವೆ ಮಾಡಿ. ನಿಮ್ಮ ಅಧಿಕಾರಿಗಳು ಏತಕ್ಕೆ ಇದ್ದಾರೆ; ಅವರಿಂದ ಈ ಕೆಲಸ ಮಾಡಿಸಿ ಪಟ್ಟಿ ತರಿಸಿ ಎಂದರೆ ಇದುವರೆಗೆ ನಿಮ್ಮ ಹತ್ತಿರ ಅಂಕಿಅಂಶ ಇಲ್ಲ. ಆ ಪ್ರಯತ್ನವನ್ನು ನೀವು ಮಾಡಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ನಿಮ್ಮ ಪಕ್ಷದವರು ಬಹು ಸಂಖ್ಯೆಯಲ್ಲಿ ಗೆದ್ದು ಬನ್ನಿ, ಸರ್ಕಾರ ಮಾಡಿ. ಆಗ ಏನು ಮಾಡುತ್ತೀರೋ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾಡಿ ತೋರಿಸಿದ್ದೇವೆ. ಉದಾಹರಣೆಗೆ ಕೂಡ ಕೊಟ್ಟಿದ್ದೇವೆ ಅದನ್ನು ಫಾಲೋ ಮಾಡುತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ಗಾನಾ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಅಲ್ಲಿನ ಅಧ್ಯಕ್ಷರು ಬೆಂಗಳೂರಿಗೆ ಬಂದಿದ್ದರು. ಆಗ ನಾನು ಅವರನ್ನು ನಿಮ್ಮ ದೇಶದಲ್ಲಿ ಇಷ್ಟು ಬಡತನ ಇದೆಯಲ್ಲ ಅವರನ್ನು ಹೇಗೆ ಉದ್ಧಾರ ಮಾಡುತ್ತೀರಿ ಎಂದು ಕೇಳಿದೆ. ಅದಕ್ಕೆ ಅವರು **Can we distribute the money kept in the public/government treasury among all the people who are poor, among all the people who are suffering ? We cannot do that. We will change their mind. They will take what they want,**

ಎಂದು ಹೇಳಿದರು. ನಾವು ಜನಗಳಿಗೆ ಸಂಪತ್ತು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಮಾರ್ಗವನ್ನು ಸೂಚಿಸ ಬೇಕೇ ಹೊರತು ದೇಶದಲ್ಲಿರತಕ್ಕ, ಟ್ರಜರಿಯಲ್ಲಿರತಕ್ಕ ಹಣ ಕೊಡಿ, ಸಾಲ ಕೊಟ್ಟದ್ದು ಮನ್ನಾ ಮಾಡಿ ಎಂದು ಎಂದು ಹೇಳತಕ್ಕದ್ದು ಅಲ್ಲ. ಯಾರಿಗೆ ಮನ್ನಾ ಮಾಡುವುದು ? ಸಾಲ ಮನ್ನಾ ಮಾಡಿದರೆ ಸಹಕಾರ ಸಂಸ್ಥೆಗಳು ಹಾಳಾಗಿ ಹೋಗುತ್ತವೆ. ಕದ ಮುಚ್ಚುತ್ತವೆ. ತಾವು ದೊಡ್ಡವರು, ಒಂದು ಪಕ್ಷದ ನಾಯಕರು, ತಾವು ಸಲಹೆ ಕೊಡುವಾಗ ಈ ರೀತಿ ಮಾಡಿ, ಈ ರೀತಿ ಉತ್ಪತ್ತಿ ಹೆಚ್ಚು ಮಾಡಲಿಕ್ಕೆ ಈ ಕೆಲಸ ಮಾಡಿ ಎಂದು ಅವರಿಗೂ ಸಲಹೆ ಮಾಡಿ, ಇತ್ತ ಸರ್ಕಾರವೂ ನಡೆಯ ಬೇಕೆಂದ ಸಲಹೆ ಕೊಡ ತ್ತಾರೆ ಎಂದು ಇದ್ದರೆ ಕಡು ಬಡವ, ಬಡರೈತ ಹಾಗಿದ್ದಾನೆ, ಹೀಗಾಗಿದ್ದಾನೆ ಎಂದು ಹೇಳುತ್ತಿದ್ದೀರಿ. ಎಲ್ಲರೂ ಹಾಗೇ ಇದ್ದಾರೆ. ನೂರಾರು ವರ್ಷಗಳಿಂದ ಯಾರು ಈ ಸಮಾಜದಲ್ಲಿ ಸಾಯುತ್ತಿದ್ದಾರೆ, ಅಂಥವರಿಗೆರ ಬಗ್ಗೆ ನಿಮ್ಮ ಗಮನ ಹೋಗುವುದಿಲ್ಲ. ಜಮೀನು ಇಲ್ಲದವರು ಇದ್ದಾರೆ. ಅವರ ಕಡೆ ಗಮನ ಹೋಗುವುದಿಲ್ಲ. ಎಲ್ಲರ ಕಡೆಯೂ ಗಮನ ಹೋಗಬೇಕು. ಕಡು ಬಡವರು, ರೈತರು, ಜಮೀನಿಲ್ಲದವರು ಏನಿದ್ದಾರೆ ಅವರ ಕಡೆ ಸರ್ಕಾರದವರು ಗಮನ ಕೊಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ :– ಮಾನ್ಯ ಯಡಿಯೂರಪ್ಪನವರು ಸಾಲ ಮನ್ನಾ ಮಾಡುವ ಬಗ್ಗೆ ಮಾತ್ರ ಹೇಳಲಿಲ್ಲ. ಅದಕ್ಕಿಂತ ಹೆಚ್ಚಾಗಿ ಈ ದೇಶದ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವ ವ್ಯವಸ್ಥೆ ಮಾಡಿ ಎಂಬ ಮಾತನ್ನು ಹೇಳಿದರು. ಅದರ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು ?

ಶ್ರೀ ಬಿ. ಬಸವಲಿಂಗಪ್ಪ :– ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ಕೊಡುವುದು, ಸಾಲ ಕೊಟ್ಟವರಿಗೆ ಬಡ್ಡಿ ರಿಯಾಯಿತಿ ಮಾಡತಕ್ಕದ್ದು ಬಹಳ ದಿನಗಳಿಂದ ಈ ರಾಜ್ಯದಲ್ಲಿ ಬಂದಿದೆ. ಅದರ ಬಗ್ಗೆ ತಾವು ಕೇಳಿ. ನಿಮ್ಮ ಪ್ರತಿಕ್ರಿಯೆಯೇ ನನ್ನದು.

ಶ್ರೀ ಬಿ. ಎಸ್. ಯಡಿಯೂರಪ್ಪ :– ನಾನು ತಮ್ಮನ್ನು ಕೇಳುತ್ತೇನೆ, ಇವತ್ತು ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಬಗ್ಗೆ ಎಲ್ಲರಿಗೂ ಗೌರವ ಇದೆ. ಅವರು ನಿಮ್ಮ ನಾಯಕರು.

ಚೇರ್ಮನ್ :– ಈ ಚರ್ಚೆಗೆ ಒಂದು ಘಂಟೆ ನಿಗದಿಯಾಗಿದೆ. ಈಗ ಒಂದು ಘಂಟೆ ಆಯಿತು. ಇನ್ನೂ ಆರು ಜನ ಮಾತನಾಡುವವರಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಸ್ವಾಮಿ, ಇದು ಒಂದು ಗಂಟೆಯಲ್ಲಿ ಮುಗಿಯುವುದಿಲ್ಲ, ಬೆಳಕು ಹರಿಯುವವರೆಗೂ ನಡೆಯುತ್ತದೆ. ಈ ರಾಜ್ಯದ ರೈತನ ಪ್ರಶ್ನೆ ಬಂದಾಗ, ಒಂದು ಗಂಟೆ, ಎರಡು ಗಂಟೆಯಲ್ಲಿ ಸಮಸ್ಯೆ ಬಗೆಹರಿಯುವುದಿಲ್ಲ. ಕೆಲಸಕ್ಕೆ ಬಾರದ ಯಾವುದೋ ವಿಷಯದ ಬಗ್ಗೆ ಚರ್ಚೆ ನಡೆಯುತ್ತದೆ. ಮತ್ತೆ ಧರಣಿ ನಡೆಸಬೇಕು ಎಂದರೆ ನನ್ನ ಅಭ್ಯಂತರ ಇಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಇದು ಬಹಳ ಗಂಭೀರವಾದ ಪ್ರಶ್ನೆ. ಇದರ ಬಗ್ಗೆ ಯಾರೂ ಚಕಾರ ಎತ್ತುವುದಿಲ್ಲ. ಕೆಲಸಕ್ಕೆ ಬಾರದ ವಿಷಯ ಚರ್ಚೆ ಮಾಡಿದ್ದೇವೆ ಎಂದು ಮಾನ್ಯ ಸದಸ್ಯರು ಏತಕ್ಕೆ ತಪ್ಪು ದಾರಿಗೆ ಎಳೆಯುತ್ತಾರೆ ?

ಶ್ರೀ ಬಿ. ಎಸ್. ಯಡಿಯೂರಪ್ಪ :– ಅಧ್ಯಕ್ಷರೇ, ನಾನು ಮುಗಿಸುತ್ತೇನೆ.

ಚೇರ್ಮನ್ :– ನಿಮ್ಮ ಪಕ್ಷದವರೇ ಇನ್ನೂ ಮೂರು ಜನರಿದ್ದಾರೆ. ಅವರ ಸಮಯವನ್ನೂ ನೀವೇ ತೆಗೆದುಕೊಳ್ಳುವುದಾದರೆ ನಾನು ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಆಗಬಹುದು ಸ್ವಾಮಿ. ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ, ಇವತ್ತು ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಬಗ್ಗೆ ನಮಗೂ ಗೌರವ ಇದೆ, ನಿಮಗೂ ಗೌರವ ಇದೆ. ರಾಜಕೀಯ ಭಿನ್ನಾಭಿಪ್ರಾಯ ಇರಬಹುದು. ಆದರೆ ಅವರು ಒಂದು ಮಾತು ಹೇಳಿದರು. ಲೋಕಸಭೆ ಚುನಾವಣೆ ಸಂದರ್ಭದಲ್ಲಿ, ದೇಶದ ಜನತೆಯ ಮುಂದೆ ಹೋದಾಗ, ದೇಶದ ರೈತನ ಪರಿಸ್ಥಿತಿಯನ್ನು ಅರ್ಥ

ಮಾಡಿಕೊಂಡು ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಈ ದೇಶದ ರೈತನ ಸಾಲ ಮನ್ನಾ ಮಾಡುತ್ತೇವೆ ಎಂಬ ಮಾತನು ಹೇಳಿದ್ದರು. ಇದು ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆಯಲ್ಲಿ ಇಲ್ಲ ಎಂದರೆ ನಾನು ಕ್ಷಮಾಪಣೆ ಕೇಳಿ, ನನ್ನ ಎಲ್ಲ ಬೇಡಿಕೆಗಳನ್ನೂ ವಾಪಸ್ ತೆಗೆದುಕೊಳ್ಳುತ್ತೇನೆ. ಅಂದರೆ ಅರ್ಥ ಏನು ? ಇವತ್ತು ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರಿಂದ ಹಿಡಿದು ಹಿಂದೆ ಇದ್ದಂಥ ಶ್ರೀ ವಿ. ಪಿ. ಸಿಂಗ್‌ರವರ ವರೆಗೆ ಎಲ್ಲ ರಾಜಕೀಯ ಪಕ್ಷದ ಮುಖಂಡರೂ ದೇಶದ ರೈತನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಸಾಲ ಮನ್ನಾ ಮಾಡದೇ ಹೋದರೆ ರೈತ ಉಳಿಯುವುದಿಲ್ಲ, ಅವನಿಗೆ ವೈಜ್ಞಾನಿಕ ಬೆಲೆ ಕೊಡಬೇಕು ಎಂದು ಕಳಕಳಿ ಇಟ್ಟುಕೊಂಡಿರತಕ್ಕ ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರದ ಜವಾಬ್ದಾರಿ ಏನು ? ಅವತ್ತು ಸನ್ಮಾನ್ಯ ವೀರೇಂದ್ರ ಪಾಟೀಲರು ಹೇಳಿದರು. ಅವರು ಹೇಳಿದ್ದರಲ್ಲಿ ಅರ್ಥ ಇದೆ. ಯಡಿಯೂರಪ್ಪನವರೇ, ಇಲ್ಲಿ ಏತಕ್ಕೆ ಕೂಗುತ್ತೀರಿ, ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ, ನೀವೇ ಬೆಂಬಲ ಕೊಟ್ಟಿರುವ ಸರ್ಕಾರ ಕೇಂದ್ರದಲ್ಲಿದೆ, ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ ಮನೆ ಮುಂದೆ ಧರಣಿ ಕುಳಿತುಕೊಳ್ಳಿ, ಶ್ರೀ ಎಲ್. ಕೆ. ಅದ್ವಾನಿ ಅವರ ಮನೆ ಮುಂದೆ ಧರಣಿ ಕುಳಿತುಕೊಳ್ಳಿ, ಶ್ರೀ ವಿ. ಪಿ. ಸಿಂಗ್ ಅವರ ಮನೆ ಮುಂದೆ ಧರಣಿ ಕುಳಿತುಕೊಳ್ಳಿ ಎಂದು ಹೇಳಿದರು. ಹೌದು, ನಾವು ಧರಣಿ ಕುಳಿತುಕೊಳ್ಳಲಿಲ್ಲ. ಆದರೆ ಒತ್ತಡ ತರುವಂಥ ಪ್ರಯತ್ನ ಮಾಡಿದೆಲ್ಲವು. ನಾವು ನಿಮ್ಮನ್ನು ಧರಣಿ ಕುಳಿತುಕೊಳ್ಳಿ ಎಂದು ಹೇಳುವುದಿಲ್ಲ. ಸನ್ಮಾನ್ಯ ಬಸವಲಿಂಗಪ್ಪನವರು ಮತ್ತು ಸನ್ಮಾನ್ಯ ಕೆ. ಹೆಚ್. ಪಾಟೀಲರು ಟೆಲಿಫೋನ್ ತೆಗೆದುಕೊಂಡು ಕೇಂದ್ರಕ್ಕೆ ಹೇಳಿಹೇಳಿ. ಮತ್ತೊಮ್ಮೆ ನೀವು ಲೋಕಸಭೆಯಲ್ಲಿ ಗೆಲ್ಲಬೇಕು ಎಂದಿದ್ದರೆ, ರಾಜ್ಯದಲ್ಲಿ ರೈತ ಉಳಿಯಬೇಕು ಎಂದಿದ್ದರೆ ಕೇಂದ್ರ ಸರ್ಕಾರದ ಯೋಜನೆ ಸರಿಯಿಲ್ಲ, ಅದನ್ನು ಬದಲಾವಣೆ ಮಾಡಬೇಕು ಎಂದು ಒತ್ತಾಯ ತಂದರೆ ಇವತ್ತು ಕೇಂದ್ರ ಸರ್ಕಾರ ಕೊಡುವುದಕ್ಕೆ ಸಿದ್ಧವಿದೆ. ನಿಮ್ಮ ಹತ್ತಿರ ದುಡ್ಡಿಲ್ಲ. ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ನೀವು ಎಷ್ಟು ಮನ್ನಾ ಮಾಡುತ್ತಿರೋ ಅಷ್ಟು ದುಡ್ಡನ್ನು ನಬಾರ್ಡ್‌ನಿಂದ ಕೊಡುತ್ತೇಲೆವೆಂದು ಒಪ್ಪಿದ್ದಾರೆ. ಅದನ್ನು ಕಂತುಗಳಲ್ಲಿ ವಾಪಸ್ ಕಟ್ಟಿ ಎಂದು ಹೇಳಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾವು 400 ಕೋಟಿ ರೂಪಾಯಿ ಮನ್ನಾ ಮಾಡಬೇಕಾಗಿ ಬರಬಹುದು. ಕೇಂದ್ರ ಸರ್ಕಾರ ಅದರಲ್ಲಿ ಅರ್ಧ ಭಾಗ ಕೊಡುವುದಕ್ಕೆ ಒಪ್ಪಿಕೊಂಡರೆ ಎಲ್ಲ ರೈತರ ಸಾಲ ಮನ್ನಾ ಮಾಡುವ ಪ್ರಶ್ನೆ ಬಂದಾಗ ಆ 200 ಕೋಟಿ ರೂಪಾಯಿಗಳನ್ನು ನಾಲ್ಕೈದು ಕಂತುಗಳಲ್ಲಿ ವಾಪಸ್ ಕೊಡುವುದಕ್ಕಾಗುವುದಿಲ್ಲಥವೆ ? ಆ ರೀತಿ ಜವಾಬ್ದಾರಿ ತೆಗೆದುಕೊಳ್ಳುವ ಅಗತ್ಯವಿಲ್ಲವೇನು ? ನಾನು ಒಂದು ಉದಾಹರಣೆ ಕೊಡುತ್ತೇನೆ. ಇವತ್ತು ಯಾವ ಸ್ಥಿತಿ ಇದೆ ? ಇವತ್ತು ಮೂರು ನಾಲ್ಕು ರಾಜ್ಯದಲ್ಲಿ ನಾವು ಅಧಿಕಾರದಲ್ಲಿದ್ದೇವೆ. ನೀವೂ ಕೂ ಕೆಲವು ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದೀರಿ. ಮಧ್ಯಪ್ರದೇಶದಲ್ಲಿ ಸರ್ಕಾರಿ ಆಜ್ಞೆ ಇದೆ. ಅದರ ವಿವರ ನಾನು ಒದಗಿಸಿಕೊಡುತ್ತೇನೆ. ಮಧ್ಯಪ್ರದೇಶ ಅಗ್ರಿಕಲ್ಚರಿಸ್ಟ್ಸ್ ಡೆಟ್ ರಿಲೀಫ್ ಸ್ಕೀಂ 1990 ಎಂದು ಮಾಡಿದ್ದಾರೆ. ಅದರಲ್ಲಿ ಮಧ್ಯಪ್ರದೇಶ ಸರ್ಕಾರ 664 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದಾರೆ. ಅದರಲ್ಲಿ ರೈತರು ಬರುತ್ತಾರೆ, ನೇಕಾರರು ಬರುತ್ತಾರೆ, ಕೃಷಿ ಕಾರ್ಮಿಕರು ಬರುತ್ತಾರೆ, ಕರಕುಶಲ ಕಾರ್ಮಿಕರು, ರೂರಲ್ ಆರ್ಟಿಸಾನ್ಸ್ ಬರುತ್ತಾರೆ. ಅವರ ಸಾಲ 664 ಕೋಟಿ ರೂಪಾಯಿ ಮನ್ನಾ ಮಾಡಿದೆ. ಸರ್ಕಾರ ಆಜ್ಞೆ ಏನಿದೆ ಎಂದರೆ–

'Who did not have overdues on January 1st, 1990- Rs. 10,000 will be waived out of all kinds of loans taken for agricultural purpose by a family for the purpose would include husband, wife and minor children." 1–1–1990 ಕ್ಕೆ ಯಾರು ಸಾಲ ಪಡೆದಿದ್ದಾರೆ ಅವರು ಡಿಫಾಲ್ಟರ್ಸ್ ಅಲ್ಲ. ಕೇಂದ್ರ ಸರ್ಕಾರ ಕೊಟ್ಟಿರುವ ಕಟ್ ಆಫ್ ಡೇಟ್ 2–10–1989. ಆದರೆ ಕೇಂದ್ರ ಸರ್ಕಾರದ ಜೊತೆ, ರಿಸರ್ವ್ ಬ್ಯಾಂಕ್ ಅಧಿಕಾರಿಗಳ ಜೊತೆ ಮತ್ತು ನಬಾರ್ಡ್ ಅಧಿಕಾರಿಗಳ ಜೊತೆ ಮಾತನಾಡಿ ಸ್ವತಃ ಪ್ರೈಮ್‌ಮಿನಿಸ್ಟರ್ ಹತ್ತಿರ ಕುಳಿತುಕೊಂಡು ಚರ್ಚೆ ಮಾಡಿ ಫೈನಲೈಸ್ ಮಾಡಿರುವ ಸ್ಕೀಮ್ ಇದು. 1–1–1990 ಕ್ಕೆ ಸಾಲ ಪಡೆದಿರುವಂಥ ಪ್ರತಿಯೊಬ್ಬ ರೈತ ಅವನು ಸಣ್ಣವನಿರಬಹುದು, ದೊಡ್ಡವನಿರಬಹುದು, ಮೊದಲ 10 ಸಾವಿರ ರೂಪಾಯಿಗಳನ್ನು ಮನ್ನಾ ಮಾಡುವ ತೀರ್ಮಾನವನ್ನು ತೆಗೆದುಕೊಂಡು 664 ಕೋಟಿ ರೂಪಾಯಿ ರೈತನ, ಕೃಷಿ ಕಾರ್ಮಿಕನ ಸಾಲ ಮನ್ನಾ ಮಾಡಿದೆ. ಇದೊಂದು. ಇನ್ನೊಂದು ಸ್ಕೀಂ ಇದೆ. ಅದರ ಪ್ರಕಾರ, ಸರ್ಕಾರಿ ಆಜ್ಞೆ ಈ ರೀತಿ ಹೇಳುತ್ತದೆ.

"It is interesting to note that in the case of 96% of borrowers each family has over dues of less than Rs. 10,000 and only 4% of the borrowers, who have taken big loans have overdues of more than Rs. 10,000 each."

10 ಸಾವಿರಕ್ಕೂ ಜಾಸ್ತಿ ತೆಗೆದುಕೊಂಡಿರುವ ಶೇಕಡಾ 4ರಷ್ಟು ರೈತರು ಯಾರಿದ್ದಾರೆ ಅವರು 10 ಸಾವಿರಕ್ಕಿಂತ ಮೇಲ್ಪಟ್ಟ ಹಣವನ್ನು ವಾಪಸ್ ಕಟ್ಟಿದರೆ ಅವರು ದೊಡ್ಡ ರೈತರು ಆಗಿದ್ದರೂ ಕೂಡಾ ಆ ರೈತರ ಸಾಲವನ್ನು ಮನ್ನಾ ಮಾಡುವ ಸ್ಕೀಮನ್ನು ಅಲ್ಲಿ ಮಾಡಿದ್ದಾರೆ. ಅವರು ಬರೀ ಸಾಲ ಮನ್ನಾ ಮಾಡುವ ಘೋಷಣೆಯನ್ನು ಮಾಡಿಲ್ಲ. ಆಶ್ಚರ್ಯ ಎಂದರೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ. ಮತ್ತೆ 25–9–90 ರಿಂದ

2–10–90ರ ವರೆಗೆ ಆಯಾ ಕ್ಷೇತ್ರದಲ್ಲಿ ಶಾಸನಸಭೆಯ ಸದಸ್ಯರು ಹಾಗೂ ಲೋಕಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ 8 ದಿವಸಗಳಲ್ಲಿ ರೈತರ ಸಾಲ ಮನ್ನಾ ಯೋಜನೆಯ ಅನ್ವಯ ಸಾಲ ಮನ್ನಾ ಸರ್ಟಿಫಿಕೇಟನ್ನು ಅವರ ಕೈಯಿಂದ ಡಿಸ್ಟ್ರಿಬ್ಯೂಟಟ್ ಮಾಡುವ ವ್ಯವಸ್ಥೆ ಮಾಡಿದ್ದಾರೆ. ಶಾಸಕರು, ಪಾರ್ಲಿಮೆಂಟ್ ಸದಸ್ಯರು ಯಾವುದೇ ಪಕ್ಷದವರಿರಲಿ ಅವರ ಕೈಯಿಂದ ಸಾಲ ಮನ್ನಾ ಮಾಡಿದ ಸರ್ಟಿಫಿಕೇಟ್ ಡಿಸ್ಟ್ರಿಬ್ಯೂಟ್ ಮಾಡಲಾಗಿದೆ. ಇವತ್ತು ಮಧ್ಯ ಪ್ರದೇಶದಲ್ಲಿ ಈ ರೀತಿ ಸಾಲ ಮನ್ನಾ ಮಾಡಿದ ಪ್ರತಿಯೊಬ್ಬ ವ್ಯಕ್ತಿಗೆ ಹೊಸದಾಗಿ ಸಾಲ ಕೊಡಲಾಗಿದೆ. ಇದನ್ನು ಹೇಗೆ ಮಾಡಲಾಗಿದೆ ? ಎಷ್ಟು ಜನರಿಗೆ ಅನುಕೂಲವಾಗಿದೆ ಎಂಬುದನ್ನು ನೋಡಿ. ಇದರಿಂದ 32 ಲಕ್ಷ ಕುಟುಂಬದವರಿಗೆ ಅನುಕೂಲವಾಗಿದೆ. ಇದರಲ್ಲಿ ರಾಜ್ಯ ಸರ್ಕಾರ ತನ್ನ ಬೊಕ್ಕಸದಿಂದ, ನಬಾರ್ಡ್ ಮತ್ತು ರಿಸರ್ವ್ ಬ್ಯಾಂಕನಿಂದ ಸಾಲ ಪಡೆದು ಕೊಟ್ಟಿರುವುದು 250 ಕೋಟಿ ರೂಪಾಯಿ ಕೇಂದ್ರ ಸರ್ಕಾರದವರು ಅವರ ಸ್ಕೀಂ ಪ್ರಕಾರ 50 ಪರ್ಸೆಂಟ್ ಏನು ಕೊಡುತ್ತೇವೆಂದು ಹೇಳಿದ್ದರು ಅದರ ಪ್ರಕಾರ ಕೊಟ್ಟಿರತಕ್ಕದ್ದು 125 ಕೋಟಿ ರೂಪಾಯಿ. ರಾಜ್ಯ ಸರ್ಕಾರದಲ್ಲಿ ಹಣ ಇಲ್ಲ ಎಂದು ಹೇಳಿ ಕೇಂದ್ರ ಸರ್ಕಾರ ಸಾಲ ಕೊಡಿಸಿರುವುದು 289 ಕೋಟಿ ರೂಪಾಯಿಗಳು. ಈ ರೀತಿ 664 ಕೋಟಿ ರೂಪಾಯಿಗಳ ರೈತನ ಕೃಷಿ ಕಾರ್ಮಿಕರ, ನೇಕಾರರ, ಕರಕುಶಲಕಾರರ, ಬಡವರ ಸಾಲ ಮನ್ನಾ ಮಾಡುವ ಧೈರ್ಯವನ್ನು ಮಧ್ಯ-ಪ್ರದೇಶದಲ್ಲಿ ಮಾಡಿದ್ದಾರೆ. ಅವರು ಇಷ್ಟೇ ಮಾಡಿಲ್ಲ , ಬಸವಲಿಂಗಪ್ಪನವರೇ. ನಿಮ್ಮ ಇಲಾಖೆಗೆ ಸೇರಿದ ವಿಷಯವನ್ನು ಹೇಳುತ್ತೇನೆ. ಅಲ್ಲಿ ಏನು ಅನುಕೂಲ ಮಾಡಿದ್ದಾರೆಂದು ಹೇಳುತ್ತೇನೆ. ಒಳ್ಳೆಯದನ್ನು ತಾವು ತಾವು ಅಪ್ರಿಶಿಯೇಟ್ ಮಾಡುವುದರಿಂದ ನಾನು ಇದನ್ನು ತಮಗೆ ಹೇಳುತ್ತಿದ್ದೇನೆ. ಇತಿಹಾಸದಲ್ಲೇ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ತಕ್ಷಣ ನಮ್ಮ ದಲಿತರು ಅಲ್ಲಿ ಪಂಪುಸೆಟ್ಟು ಹಾಕಿದರೆ, ಬೋರ್ವೆಲ್ ತೆಗೆಸಿದರೆ, ರೈತಾಪಿ ಕೆಲಸಕ್ಕೆ ಬೋರ್ವೆಲ್ ಹಾಕಿದರೆ ನೂರಕ್ಕೆ ನೂರರಷ್ಟು ಸಬ್ಸಿಡಿ ಕೊಡುವ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಮೊದಲ 10 ಎಕರೆ ಇರುವ ಒಬ್ಬ ರೈತ ಬೋರ್ವೆಲ್ ಹಾಕಿದರೆ, ಆತ ಯಾವುದೇ ಸಮಾಜದವ-ನಾಗಿರಲಿ ಆತನಿಗೆ 60 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ. ಬೇಕಾದರೆ ತಮಗೆ ಈ ಸರ್ಕಾರಿ ಆಜ್ಞೆಗಳನ್ನು ಕೊಡುತ್ತೇನೆ. 10 ಎಕರೆಗಿಂತಾ ಮೇಲ್ಪಟ್ಟು 100 ಎಕರೆ ವರೆಗೆ ಇದ್ದರೂ ಆ ರೀತಿ ರೈತ ಬೋರ್ವೆಲ್ ಹಾಕಿಕೊಂಡರೂ ಸಹ 40 ಪರ್ಸೆಂಟ್ ಸಬ್ಸಿಡಿ ಕೊಡುವ ಸ್ಕೀಮ್‌ನ್ನು ನಾವು ತಂದಿದ್ದೇವೆ. ಇವತ್ತು ಕೇವಲ ಮಧ್ಯ ಪ್ರದೇಶದಲ್ಲಿ ಅಷ್ಟೇ ಅಲ್ಲ, ಹಿಮಾಚಲ ಪ್ರದೇಶದಲ್ಲಿ ಕಾರ್ಯರೂಪಕ್ಕೆ ತಂದಿದ್ದೇವೆ. ರಾಜಸ್ಥಾನದಲ್ಲಿ ಇಂಟರೆಸ್ಟ್ ಸಬ್ಸಿಡಿ ಸ್ಕೀಂ ಇಲ್ಲದ ಪರಿಣಾಮವಾಗಿ ಕೇಂದ್ರ ಸರ್ಕಾರದ ಯೋಜನೆಯ ಅನ್ವಯ 100ಕ್ಕೆ 88 ಜನ ರೈತರಿಗೆ ಸಾಲ ಮನ್ನಾ ಆಗಿದೆ. ನಾನು ಈಗ ಅತ್ಯಂತ ವಿನಯದಿಂದ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ದಯಮಾಡಿ ದಾಖಲೆಗಳನ್ನು ಇಲ್ಲಿ ಇಡಿ. ಕಳೆದ ಒಂದು ವರ್ಷದಿಂದ ಈ ರಾಜ್ಯದಲ್ಲಿ ಇಷ್ಟೊಂದು ಹೋರಾಟ ನಡೆಯುತ್ತಿದೆ, ಎಲ್ಲರೂ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದರೂ ಸಹ ಈ ಬಗ್ಗೆ ಒಂದು ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಬರೆದಿದ್ದೀರಾ ? ಪ್ರಧಾನಿಯವರಿಗಾಗಲೀ , ಕೇಂದ್ರದ ಹಣಕಾಸಿನ ಸಚಿವರಿಗಾಗಲೀ, ಈ ರಾಜ್ಯದ ರೈತರ ಇವತ್ತಿನ ದಯನೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಾಲ ಮನ್ನಾ ಮಾಡುವ ಯೋಜನೆ ಯಾವ ರೀತಿ ಇರಬೇಕು ಎಂದು ತಮ್ಮ ಅಭಿಪ್ರಾಯವನ್ನು ಕೊಡುವ ದೃಷ್ಟಿಯಿಂದ ಒಂದು ಪತ್ರವನ್ನು ಕಳೆದ ಒಂದು ವರ್ಷದಿಂದ ನಮ್ಮ ಮುಖ್ಯಮಂತ್ರಿಗಳಾಗಲೀ, ಕೃಷಿ ಸಚಿವರಾಗಲೀ, ಸಹಕಾರಿ ಮಂತ್ರಿಗಳಾಗಲೀ ಬರೆದಿದ್ದರೆ ನಾನು ನಿಮಗೆ ತಲೆಬಾಗುತ್ತೇನೆ. ಒಂದೂ ಪತ್ರವನ್ನು ಬರೆದಿಲ್ಲ. ಮೊದಲಬಾರಿಗೆ ಸನ್ಮಾನ್ಯ ಬಂಗಾರಪ್ಪನವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅವರು ಇವತ್ತು ಒಳ್ಳೆಯ ಕೆಲಸ ಮಾಡುತ್ತಿ-ದ್ದಾರೆ. ದಯವಿಟ್ಟು ಅವರ ಕಾಲು ಎಳೆಯುವ ಪ್ರಯತ್ನವನ್ನು ಮಾಡಬೇಡಿ. ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ರೈತರ ಪರವಾಗಿ ವಿಧಾನಸಭೆಯಲ್ಲಿ, ಹೊರಗಡೆ ನಾವು ಮಾತನಾಡುತ್ತೇವೆ. ರೈತರ ಹಿತ-ಚಿಂತಕರಂತೆ ವರ್ತನೆ ಮಾಡುತ್ತೇವೆ. ಆದರೆ ರೈತರ ಸಮಸ್ಯೆ ಬಗೆಹರಿಯುವ ಸಂದರ್ಭ ಬಂದಾಗ ರೈತರ ಹಿತಶತೃಗಳಂತೆ ವರ್ತನೆ ಮಾಡುತ್ತೇವೆ.

1–10 ಪಿ. ಎಂ.

ಶ್ರೀ ಕೆ. ಹೆಚ್. ಪಾಟೀಲ್ :– ರೈತರ ಸಾಲವನ್ನು ಪೂರ್ಣ ಮನ್ನಾ ಮಾಡಬೇಕು, ರೈತರ ಸಾಂಪತ್ತಿಕ ಸ್ಥಿತಿ ಅಭಿವೃದ್ಧಿ ಆಗಬೇಕು, ರೈತರ ಹಿತ ಮಾಡುವಂತಹವರಿಗೆ ನೀವೆಲ್ಲ ಅಹಿತ ಮಾಡುತ್ತೀರಿ ಎಂದು ಹೇಳು-ತ್ತಿದ್ದೀರಿ. ಈ ಮೂರು ಮಾತು ಬಿಟ್ಟು ನಾಲ್ಕನೇ ಮಾಪತು ನಿಮ್ಮಿಂದ ಬಂದಿದೆಯೋ ? ಅಥವಾ ಮಧ್ಯ-ಪ್ರದೇಶದಲ್ಲಿ ನಾವು ಚಲೋ ಮಾಡಿದ್ದೇವೆ, ಬಿ. ಜೆ. ಪಿ. ಯವರು ಎಲ್ಲಿ ಬಂದಿದ್ದಾರೆ. ಅಲ್ಲಿ ಕಲ್ಯಾಣ ಮಾಡಿದ್ದಾರೆ ಎಂದು ಈ ನಾಲ್ಕು ಮಾತನ್ನು ಹೇಳಿದ್ದೀರಿ. ಇದಕ್ಕೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ಅದನ್ನು ಬಿಟ್ಟು ಬೇರೆನೂ ಹೇಳುತ್ತಿಲ್ಲ. ತಿರುಗ ಮುರುಗ ಅದನ್ನೇ ಹೇಳುತ್ತಿದ್ದೀರಿ. ನಾನು ಇಷ್ಟು ಹೊತ್ತಿನ ತನಕ ಇದ್ದೇನೆ ಕೇಳುತ್ತಿದ್ದೇನೆ. ಅದನ್ನೇ ತಿರುಗ ಮುರುಗ ಹೇಳುತ್ತಿದ್ದೀರಿ. ರಿಪಿಟೇಷನ್ ಮಾಡಬಾರದೆಂದು ರೂಲ್ಸ್‌ನಲ್ಲೇ ಇದೆ. ಹೊಸ ಸದಸ್ಯರು ರಿಪಿಟೇಷನ್ ಮಾಡಿದರೆ ನಾನು ತಕರಾರು ಹೇಳುತ್ತಿರಲಿಲ್ಲ. ಆದರೆ ನಮ್ಮಂತಹವರು

ನಿಮ್ಮಂತಹವರು ರಿಪಿಟೇಷನ್ ಮಾಡಬಾರದು. ಆದ್ದರಿಂದ ನೀವು ಸರಿಯಾಗಿ ಕೇಳಿದರೆ ನಮಗೆ ಉತ್ತರ ಹೇಳುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಏನು ಸರಿಯಾಗಿ ಕೇಳಬೇಕು. ಇವತ್ತು ರಾಜ್ಯದ ರೈತನ ಸಮಸ್ಯೆಯ ಬಗ್ಗೆ ವಿವರವಾಗಿ ಚರ್ಚೆಯಾಗಬೇಕೆಂದು ನಂಜುಂಡಸ್ವಾಮಿಯವರು ಸಲಹೆ ಮಾಡಿದ್ದಾರೆ, 4–5 ದಿವಸ ಚರ್ಚೆ ಮಾಡಬೇಕಾಗುತ್ತದೆ. ದೀರ್ಘವಾದ ವಿವರಕ್ಕೆ ಹೋಗೋಣ. ಇವತ್ತು ರಾಜ್ಯದ ರೈತನ ಪರಿಸ್ಥಿತಿ ಏನು ಇದೆ ಅದನ್ನು ತಿಳಿಸುವಂತಹ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಸರ್ಕಾರ ಯಾವ ರೀತಿ ವಂಚನೆ ಮಾಡಿಕೊಂಡು ಬರುತ್ತಿದೆ ಎಂದು ಹೇಳಿದೆ. ಇದಕ್ಕೊಂದು ಉದಾಹರಣೆ ನೀಡುತ್ತೇನೆ. ಗೇಣೀದಾರರ ಬಗ್ಗೆ ಪ್ರಸ್ತಾಪವಾಯಿತು. ಬೇಕಿದ್ದರೆ ರೆಕಾರ್ಡ್‌ಗಳನ್ನು ತೆಗೆದು ನೋಡಿ. ಬಡ ಗೇಣೀದಾರರು ಪ್ರಿಮಿಯಂ ಹಣ ಕಟ್ಟದ ಹಾಗೆ ನೋಡಿಕೊಳ್ಳಬೇಕೆಂದು ಹೋರಾಟ ಪ್ರಾರಂಭವಾಯಿತು. ನಾವೂ ಇಲ್ಲಿ ಧರಣಿ ಕುಳಿತಿದ್ದೆವು. ಇಡೀ ರಾಜ್ಯಾದ್ಯಂತ ನಾವೆಲ್ಲ ಸೇರಿ ಕೆಲಸ ಮಾಡಿದೆವು. ನೀವು ಈ ಕಡೆ ಇದ್ದಾಗ ಆ ಕಡೆ ಇದ್ದ ರಾಮಕೃಷ್ಣ ಹೆಗಡೆಯವರ ಸರ್ಕಾರವನ್ನು ಒತ್ತಾಯ ಮಾಡಿದಿರಿ. ಆದರೆ ಕಳೆದ 6 ತಿಂಗಳ ಹಿಂದೆ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲವೆಂದು ಎಲ್ಲ ಬಡ ಗೇಣೀದಾರರಿಂದ ಬಲಾತ್ಕಾರದಿಂದ ಪ್ರೀಮಿಯಂ ಹಣವನ್ನು ವಸೂಲ ಮಾಡಿದಿರಿ. ಅದಾದ ಮೇಲೆ ನಮ್ಮ ಜಿಲ್ಲೆಯ ತಹಸೀಲ್ದಾರರಾದ ವಿರೂಪಾಕ್ಷಪ್ಪ ಎಂಬುವವರು ಸರ್ಟಿಫಿಕೇಟಿಗೋಸ್ಕರ ಮನೆಮನೆಗೆ ನುಗ್ಗಿ ಬಡ ಗೇಣೀದಾರರಿಂದ ಸುಮಾರು 65-70 ಲಕ್ಷ ರೂಪಾಯಿಗಳನ್ನು ವಸೂಲು ಮಾಡಿ ಕಿರೀಟ ತೆಗೆದುಕೊಂಡು ಬಂದು ಇವತ್ತು ವಿಧಾನಸೌಧದಲ್ಲಿ ಕುಳಿತಿದ್ದಾರೆ. ಆ ತಹಸೀಲ್ದಾರರನ್ನು ಅವತ್ತು ಬಡ ಗೇಣೀದಾರರಿಂದ ಬಲಾತ್ಕಾರವಾಗಿ ಹಣ ವಸೂಲು ಮಾಡಿದ್ದು ಸರಿಯೇ ಎಂದು ಕೇಳುತ್ತೇನೆ. ಅವತ್ತು ಶಿಕಾರಿಪುರ ತಾಲ್ಲೂಕಿನಲ್ಲಿ ಬಡ ಗೇಣೀದಾರರ ಸಾಲ ಮನ್ನಾ ಆಗಬೇಕೆಂದು ಹೋರಾಟ ಮಾಡಿದಾಗ ಕೆಲವು ಇಂತಹ ಮೂರ್ಖ ಅಧಿಕಾರಿಗಳು ಸರ್ಟಿಫಿಕೇಟ್ ಪಡೆಯುವುದಕ್ಕೋಸ್ಕರ ಬಲಾತ್ಕಾರವಾಗಿ ಹಣವನ್ನು ವಸೂಲು ಮಾಡಿದರು. ಇವತ್ತು ಗೇಣೀದಾರರ ಕಂತಿನ ಹಣವನ್ನು ಮನ್ನಾ ಮಾಡಿದ್ದೀರಿ. ಈ ರೋಗಿನ ರಾಜಕಾರಣ ಏಕೆ ? ಮಾನ್ಯ ಬಸವಲಿಂಗಪ್ಪನವರೇ, ಇವತ್ತು ಬಹಳ ಜನ ರೈತರು ಇದ್ದಾರೆ, ಅದರಲ್ಲಿ ಬಹಳ ಜನ ದಲಿತರೂ ಕೂಡ ಇದ್ದಾರೆ. ಪಿ. ಎಲ್. ಡಿ. ಬ್ಯಾಂಕ್‌ನಿಂದ ಸಾಲವನ್ನು ಕೊಟ್ಟು ಪ್ರಿಮಿಯಂ ಹಣವನ್ನು ತುಂಬಿಸಿ ಕೊಟ್ಟಿದ್ದೀರಿ. ಯಾವ ಬಡ ಗೇಣೀದಾರರಿಂದ ಹಣವನ್ನು ಬಲಾತ್ಕಾರದಿಂದ ವಸೂಲು ಮಾಡಿಕೊಂಡಿದ್ದೀರೋ ಅದನ್ನು ವಾಪಸು ಕೊಡಿ.

ಶ್ರೀ ಬಿ. ಬಸವಲಿಂಗಪ್ಪ :– ನನ್ನ ಹೆಸರನ್ನು ಕರೆದು ದಲಿತರೆಂದು ಏಕೆ ಹೇಳುತ್ತೀರಿ. ನಾನು ಎಲ್ಲರಿಗೂ ಸೇರಿದವನೆಂದು ನಿನ್ನೆ ತಾನೆ ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ನಾನೇನೂ ತಪ್ಪು ಹೇಳಲಿಲ್ಲ. ನಿಮಗೆ ತಪ್ಪೆಂದು ಅನಿಸಿದರೆ ವಾಪಸು ತೆಗೆದುಕೊಳ್ಳುತ್ತೇನೆ. ನಿಮಗೆ ದಲಿತರ ಬಗ್ಗೆ ಕಳಕಳಿ ಇಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ :– ರೈತರ ಬಗ್ಗೆ ಮಾತನಾಡಿ, ದಲಿತರ ಬಗ್ಗೆ ಏಕೆ ಮಾತನಾಡುತ್ತೀರಿ. ನನ್ನ ಹೆಸರು ಏಕೆ ಹೇಳುತ್ತೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಗೇಣೀದಾರರಲ್ಲಿ ದಲಿತರೂ ಕೂಡ ಇದ್ದಾರೆ. ನಿಮ್ಮ ಹೆಸರನ್ನು ಹೇಳುವುದಿಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಮಾನ್ಯ ಕೆ. ಹೆಚ್. ಪಾಟೀಲ್‌ರವರು ನೀವು ಏನು ಮಾತನಾಡಿದಿರಿ ಯಡಿಯೂರಪ್ಪನವರೇ ಎಂದು ಕೇಳಿದರು. ಇವತ್ತು ನೀವು ಅಧಿಕಾರಕ್ಕೆ ಬಂದ ಮೇಲೆ ನಾಳೆ ಲೋಕಸಭೆ ಚುನಾವಣೆ ಎದುರಿಸಬೇಕೆನ್ನುವಂತಹ ಸಂದರ್ಭದಲ್ಲಿ......

ಶ್ರೀ ಕೆ. ಹೆಚ್. ಪಾಟೀಲ್ :– ರಿಪಿಟೇಷನ್ ಆಗುತ್ತಿದೆ ಎಂದು ತಮಗೆ ನೆನಪು ಮಾಡಿದೆ. ಹೇಳಿದ್ದನ್ನೇ ಹೇಳುವುದರಿಂದ ನಿಮ್ಮ ಸಮಯವೇ ವ್ಯಯವಾಗುತ್ತಿದೆ, ಮತ್ತೇನಾದರೂ ಹೊಸದು ಇದ್ದರೆ ಹೇಳಿ ಎಂದು ಹೇಳಿದೆ.

ಛೇರ್ಮನ್ :– ಮಾನ್ಯ ಯಡಿಯೂರಪ್ಪನವರೇ, 1 ಗಂಟೆ 10 ನಿಮಿಷವಾಯಿತು. ಸಚಿವರಿಗೆ ನಿಮ್ಮ ಕಳಕಳಿ ಅರ್ಥವಾಗಿದೆ. ದಯಮಾಡಿ ಬೇಗ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಇನ್ನು 10 ನಿಮಿಷದಲ್ಲಿ ಮುಗಿಸುತ್ತೇನೆ. ಹಿರಿಯ ಸಚಿವರು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಬಡ ಗೇಣೀದಾರರ ಪ್ರೀಮಿಯಂ ಹಣ 6 ತಿಂಗಳು ವಸೂಲಿ ಆದಮೇಲೆ ಮನ್ನಾ ಮಾಡಿದ್ದೇವೆಂದು ಘೋಷಣೆ ಮಾಡಿದರಲ್ಲ ಎಷ್ಟು ಹಣ ವಸೂಲಾಯಿತು ಎಂಬ ಬಗ್ಗೆ ವಿವರ ಕೊಡಬೇಕು. ಬಡ ಗೇಣೀದಾರರ ಬಡ್ಡಿ ಎಷ್ಟು, ಎಷ್ಟು ಪ್ರೀಮಿಯಂ ಹಣ ಕಟ್ಟಬೇಕಾಗಿತ್ತು. ಈಗ ಮನ್ನಾ ಮಾಡಿದ ಮೇಲೆ ಎಷ್ಟು ಜನ ಬಡ ಗೇಣೀದಾರರಿಗೆ ಎಷ್ಟು ಹಣವನ್ನು ಮನ್ನಾ ಮಾಡಿದಿರಿ ಎಂಬ ಬಗ್ಗೆ ನನಗೆ ಅಂಕಿ ಅಂಶಗಳನ್ನು ಕೊಡಬೇಕು. ಬಡ ರೈತನ ಕಣ್ಣಿಗೆ ಸುಣ್ಣ ಎರಚುವಂತಹ ಕೆಲಸ ನಮ್ಮಿಂದ ನಡೆಯುತ್ತಿದೆ.

ಪ್ರಚಾರಕ್ಕೋಸ್ಕರ ರೈತನ ಬಗ್ಗೆ ಕಾರ್ಯಕ್ರಮ ರೂಪಿಸುವಂತಹ ಪ್ರಯತ್ನ ನಡೆಯುತ್ತಿದೆ. ನಾವು ಹಿಂದೆ ರೈತರ ಬಗ್ಗೆ ಹೋರಾಟ ಮಾಡಿದೆವು. ಕಾಂಗ್ರೆಸ್ ಪಕ್ಷದ ಸ್ನೇಹಿತರು ಅವತ್ತು ಈ ಕಡೆ ಇದ್ದಾಗ ಅಲ್ಲಿ ಅಧಿಕಾರ ದಲ್ಲಿದ್ದಂತಹ ಜನತಾ ದಳದವರಿಗೆ ಪ್ರಿಮಿಯಂ ಹಣವನ್ನು ಮನ್ನಾ ಮಾಡಿ ಎಂದು ಒತ್ತಾಯ ತಂದಿರಿ. ಅದೇ ನೀವು ಅಧಿಕಾರಕ್ಕೆ ಬಂದ ತಕ್ಷಣ ಅದನ್ನು ಮಾಡಿದ್ದರೆ ನಾವು ಒಪ್ಪುತ್ತಿದ್ದೆವು. ರೈತರು ನಿಮಗೆ ಧನ್ಯವಾದ ಹೇಳು ತ್ತಿದ್ದರು. 6 ತಿಂಗಳು ಬಲಾತ್ಕಾರದಿಂದ ಹಣವನ್ನು ವಸೂಲಿ ಮಾಡಿ ಸುಲಿಗೆ ಮಾಡಿಯಾದ ಮೇಲೆ ಶೇಕಡ 5 ಜನರು ಬಡ ಗೇಣೀದಾರರು ದುಡ್ಡು ಕಟ್ಟುವಂತಹವರು ಉಳಿದಿಲ್ಲ. ಆ ಸಮಯದಲ್ಲಿ ಬಡ ಗೇಣೀದಾರರ ಸಾಲ ಮನ್ನಾ ಮಾಡಿದ್ದೇವೆಂದು ಹೇಳುವಂತಹ ಪ್ರಯತ್ನವನ್ನು ಮಾಡಿದ್ದೀರಿ. ಮಾನ್ಯ ಬಸವಲಿಂಗಪ್ಪನವರು ಹೊರಟುಹೋದರು, ನಮ್ಮ ಕೆಲವರು ಸ್ನೇಹಿತರು ಹೇಳುತ್ತಾರೆ. ಯಡಿಯೂರಪ್ಪನವರು ಕಳೆದ ಆರು ವರ್ಷಗಳಿಂದ ಇಲ್ಲಿ ಏನು ಮಾತನಾಡಿದ್ದಾರೆನ್ನುವ ವಿಷಯಗಳನ್ನು ರೆಕಾರ್ಡ್ ತೆಗೆಸಿ ನೋಡಿದರೆ ಗೊತ್ತಾಗುತ್ತದೆ. ಇದೇ ಸ್ಥಳದಲ್ಲಿ ಸಿ ಅಂಡ್ ಡಿ ಲ್ಯಾಂಡ್‌ಅನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವಂತಹ ಕಾರ್ಯಕ್ರಮವನ್ನು ಮಾನ್ಯ ರಾಚಯ್ಯನವರು ರೂಪಿಸಿದ್ದರು. ಮಾನ್ಯ ರಾಚಯ್ಯನವರು ಅದೇ ಸ್ಥಳದಲ್ಲಿ ಕುಳಿತಿದ್ದರು. ಅವರು ಮಂತ್ರಿಗಳಾಗಿದ್ದ ಕಾಲದಲ್ಲಿ ತಂದಂಥ ಕಾನೂನು. ಯಾವ ಬಡ ರೈತರು, ಹರಿಜನ ಗಿರಿಜನರು, ಸುಮಾರು ಮೂರು ಮೂರುವರೆ ಲಕ್ಷ ಕುಟುಂಬಗಳು ಒಂದು ಎಕರೆ, ಎರಡು ಎಕರೆ ಜಮೀನನ್ನು ಬಗರ್ ಹುಕುಂ ಸಾಗು- ವಳಿ ಏನು ಮಾಡಿಕೊಂಡಿದ್ದರೊ, ಅಂತಹ ಬಡ ರೈತರ ಜಮೀನನ್ನು ಸಿ ಅಂಡ್ ಡಿ ಲ್ಯಾಂಡ್ ಎಂದು ಕರೆದು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವಂತಹ ಶಾಸನವನ್ನು ತಂದಾಗ ನಾನು ಒಬ್ಬನೇ ಬಿ. ಜೆ. ಪಿ. ಯಲ್ಲಿದ್ದೆ. ಮಾನ್ಯ ವಸಂತ ಬಂಗೇರರವರು ನನ್ನ ಜೊತೆಯಲ್ಲಿಲ್ಲವೆಂದು ಹೇಳಿದರು. ಇದೇ ಸದನದಲ್ಲಿ ನಾನು ಕಣ್ಣೀರು ಹಾಕುತ್ತಾ ಕುಳಿತುಕೊಂಡಿದ್ದೇನೆ. ಮಾನ್ಯ ರಾಚಯ್ಯನವರು, ಮಾನ್ಯ ಯಡಿಯೂರಪ್ಪನವರು ನನ್ನ ಕಣ್ಣು ತೆರೆಸಿದ್ದಾರೆಂದು ಹೇಳಿದರು. ಬೇಕಾದರೆ ದಾಖಲೆ ತೆಗೆದು ನೋಡಿ. ಕರ್ನಾಟಕದ ಇತಿಹಾಸದಲ್ಲಿಯೇ ಲಕ್ಷಾಂತರ ಕಡು ಬಡವರಿಗೆ ಸಂಬಂಧಪಟ್ಟ ವಿಷಯ ಬಂದಾಗ, ಮಾನ್ಯ ರಾಚಯ್ಯನವರು ನನಗೆ ಕೆಲವರು ಮಿಸ್‌ಗೈಡ್ ಮಾಡಿದರು, ನಾನು ಈ ಶಾಸನ ತಂದಿದ್ದೇನೆ, ಈ ಶಾಸನವನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೇನೆ ಎಂದು ವಾಪಸ್ ಪಡೆದಿದ್ದಾಯಿರೆ. ಅವರಿಗೆ ಅಭಿನಂದನೆ ಸಲ್ಲಿಸಬೇಕು. ಇದರಿಂದ ಸುಮಾರು 3 ಲಕ್ಷ ಬಡ ರೈತರು ಸಿ ಅಂಡ್ ಡಿ ಲ್ಯಾಂಡ್‌ನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದವರು ಉಳಿದುಕೊಂಡರು. ಇವತ್ತು ಏನು ಮಾಡುತ್ತಿದ್ದೀರಿ ಅಂದರೆ ಬಗರ್ ಹುಕುಂ ಸಾಗುವಳಿಯನ್ನು ಖಾಯಂ ಮಾಡುವುದಕ್ಕೆ ಶಾಸನ ತರುವುದಕ್ಕೆ ಹೊರಟಿದ್ದೀರಿ. ಅವೊತ್ತು ಯಡಿಯೂರಪ್ಪ ಮತ್ತು ನಾವೆಲ್ಲ ಹೋರಾಟ ಮಾಡಿ ಸಿ ಅಂಡ್ ಡಿ ಲ್ಯಾಂಡ್ ಅರಣ್ಯ ಇಲಾಖೆಗೆ ವರ್ಗಾವಣೆಯಾಗುವುದಕ್ಕೆ ಅವಕಾಶವಾಗದ ಹಾಗೆ ನೋಡಿಕೊಳ್ಳದಿದ್ದರೆ ಇವತ್ತು ಅರಣ್ಯ ಇಲಾಖೆಗೆ ಆ ಭೂಮಿ ವರ್ಗಾವಣೆಯಾಗುತ್ತಿತ್ತು. ಇವತ್ತು ಮೂರೂವರೆ ಲಕ್ಷ ಕಡು ಬಡವರು ಹರಿಜನರು ದೀನದಲಿತರು, ಕೃಷಿ ಕಾರ್ಮಿಕರು, ಸಣ್ಣ ರೈತರು ಇರಬಹುದು, ಅವರು ಬೀದಿ ಪಾಲು ಆದಮೇಲೆ ಈ ಶಾಸನ ವನ್ನು ನೀವು ತರುತ್ತಿದ್ದೀರಿ. ಮಾನ್ಯ ರಾಮಕೃಷ್ಣ ಹೆಗಡೆಯವರು 1983ರಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ನಾವು 18 ಜನ ಬಿ. ಜೆ. ಪಿ. ಶಾಸಕರು ಆ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದೆವು. ಆಗ ಮಾನ್ಯ ರಾಮಕೃಷ್ಣ ಹೆಗಡೆ ಯವರು ಹೇಳಿದರು. ರಾಜ್ಯದಲ್ಲಿ ಬರಗಾಲವಿದೆ, ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ, ಹಿಂದೆ ಅಧಿಕಾರ ದಲ್ಲಿದ್ದವರು ಖಜಾನೆಯನ್ನು ಪೂರ್ತಿ ಖಾಲಿ ಮಾಡಿ ಹೋಗಿದ್ದಾರೆ, ನಾವು ಯಾವ ರೀತಿ ಸರ್ಕಾರವನ್ನು ನಡೆಸ- ಬೇಕು, ಎಂದು ಹೇಳಿದರು. ಹಣಕಾಸಿನ ಪರಿಸ್ಥಿತಿ ಸರಿಯಿಲ್ಲದಾಗ ರಾಜ್ಯದಲ್ಲಿ ಬರಗಾಲ ಬಂದಿತ್ತು. ನಾವು 18 ಜನ ಆ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದೆವು. ಸನ್ಮಾನ್ಯ ವಿ. ಎಸ್. ಆಚಾರ್‌ರವರು ನಮ್ಮ ಪಕ್ಷದ ನಾಯಕ ರಾಗಿ ಇಲ್ಲೇ ಕುಳಿತಿದ್ದರು. ಅವತ್ತಿನ ದಿವಸ ನಾನು ಎದ್ದುನಿಂತುಕೊಂಡು ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಕೇಳಿದೆ. ಜನ ನಿಮಗೆ ಬೆಂಬಲ ಕೊಟ್ಟಿದ್ದಾರೆ, ಅದರಿಂದ ಈ ಖುರ್ಚಿ ನಿಮಗೆ ಸಿಕ್ಕಿದೆ, ನೀವು ರೈತರ ಬಗ್ಗೆ ಕಳಕಳಿ ಇರುವಂತಹ ಜನ, ಸರ್ಕಾರದ ಬೊಕ್ಕಸ ಖಾಲಿಯಾಗಿದೆ ಎನ್ನುವುದಕ್ಕೋಸ್ಕರ ಕಳೆದ ಮೂರ್‍ನಾಲ್ಕು ವರ್ಷ ಗಳಿಂದ ಬರಗಾಲ ಇರುವುದರಿಂದ ರೈತರಿಂದ ಬಲತ್ಕಾರವಾಗಿ ಹಣವನ್ನು ವಸೂಲಿ ಮಾಡಬೇಡಿ. ಸಾಲ ಮನ್ನಾ ಮಾಡಿ, ಮನ್ನಾ ಮಾಡುವುದಕ್ಕೆ ಆಗದಿದ್ದರೆ ಹೋಗಲಿ, ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡಿ ಯೆಂದು ನಾವು ಇಲ್ಲಿ ಧರಣಿ ಕುಳಿತುಕೊಂಡಿದ್ದೆವು. ಕೊನೆಗೆ ಸರ್ಕಾರ ಮಣಿಯದಿದ್ದಾಗ ನಮ್ಮ ನಾಯಕರಾದ ಶ್ರೀ ವಿ. ಎಸ್. ಆಚಾರ್‌ರವರು ನಾವು ವಾಕ್‌ಔಟ್ ಮಾಡುತ್ತೇವೆ, ನಿಮಗೆ ಕೊಟ್ಟಿರತಕ್ಕ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿ ಹೊರಗಡೆ ಹೋದಾಗ, ಉಳಿದ 17 ಜನ ಶಾಸಕರು ನಮ್ಮ ಪಕ್ಷದವರು ನಮ್ಮ ಜೊತೆಯಲ್ಲಿ ಬಂದರು. ಮಾರನೆ ದಿವಸ ಬೆಳಿಗ್ಗೆ ಬಂದು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದರು. ನಾವು ಇವತ್ತು ಅವರನ್ನು ಜ್ಞಾಪಕ ಮಾಡಿಕೊಳ್ಳಬೇಕು. ಅವರು ಈ ಸದನದಲ್ಲಿ ಹೇಳಿದರು. ಈಗ ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ. ನಮಗೆ ಬೆಂಬಲ ಕೊಟ್ಟಿರತಕ್ಕ ಬಿ. ಜೆ. ಪಿ. ಯ 18 ಜನ ಶಾಸಕರು ಒತ್ತಾಯ ಮಾಡುತ್ತಿದ್ದಾರೆ, ಸಾಲ ಮನ್ನಾ ಮಾಡುವಂತಹ ಸ್ಥಿತಿಯಿದ್ದರೆ ಮಾಡುತ್ತಿದ್ದೆ ಕೊನೆಯ ಪಕ್ಷ ರೈತರ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ ಎಂದು 1983ರಲ್ಲಿ ಹೇಳಿದರು. 1987

ರಲ್ಲಿ ಅದನ್ನು ಮಾಡಿದರು. 130 ಕೋಟಿ ರೂಪಾಯಿಗಳ ಭಾರವನ್ನು ಹೊತ್ತುಕೊಂಡರು· ನಾವು ಅಷ್ಟೊತ್ತು ಸಹ ಹೋರಾಟ ಮಾಡಿದ್ದೇವೆ. ಈ ರೀತಿ ಸದನದ ಒಳಗೆ· ರೈತರ ಪ್ರಶ್ನೆ ಬಂದಾಗ, ಅವರ ಸಾಲ ಮನ್ನಾ ಮಾಡುವ ವಿಚಾರ ಮಾತ್ರವಲ್ಲ ಪ್ರತಿಯೊಂದು ಸಂದರ್ಭದಲ್ಲೂ ನಾವು ಹೋರಾಟ ಮಾಡಿಕೊಂಡು ಬರುತ್ತಿದ್ದೇವೆ· ಕೃಷಿ ಇಲಾಖೆಯಲ್ಲಿ ಲೂಟಿ ಮಾಡುತ್ತಿದ್ದಾರೆ. ರೈತರಿಗೆ ಉತ್ತಮವಾದ ಬಿತ್ತನೆ ಬೀಜ ಕೊಡುತ್ತಿಲ್ಲ. ಅಲ್ಲಿ ನಡೆಯತಕ್ಕ ಅವ್ಯವಹಾರವನ್ನು ನೋಡಿದರೆ, ಮಾನ್ಯ ನಂಜುಂಡಸ್ವಾಮಿಯವರು ಹೇಳಿದಹಾಗೆ, ಪ್ರತಿಯೊಂದು ಇಲಾಖೆಯ ಮೇಲೆ ಚರ್ಚೆ ಮಾಡಬೇಕಾಗುತ್ತದೆ. ವಿಶೇಷವಾಗಿ ರೈತರಿಗೆ ಸಂಬಂಧಪಟ್ಟ ಇಲಾಖೆಗಳ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ನಾನು ಒತ್ತಾಯ ಮಾಡುತ್ತಿದ್ದೇನೆ. ಕೊನೆಯಲ್ಲಿ ನಾನು ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಅವರು ಸಹ ತಮ್ಮ ಸಹಾಯಕ್ಕೆ ಬರಬಹುದು. ನಾನು ಒಬ್ಬನೇ ಮಾತನಾಡತಕ್ಕ ಅಗತ್ಯವಿಲ್ಲ, ಬೇರೆಯವರು ತಮ್ಮ ಅಭಿಪ್ರಾಯಗಳನ್ನು ಹೇಳುವವರಿದ್ದಾರೆ. ರೈತರ ದಯನೀಯ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಲು ಒಂದು ವಾರ ವಿಶೇಷ ಸಭೆಯನ್ನು ಕರೆಯಿರಿ. ಇವತ್ತು ಕೃಷಿ ಇಲಾಖೆಯಲ್ಲಿ ನಡೆಯತಕ್ಕ ಅನ್ಯಾಯ, ರೈತನನ್ನು ಕಂಡಾಗ ಅಧಿಕಾರಿಗಳು ನಡೆಸತಕ್ಕ ದರ್ಬಾರು, ರೈತನಿಗೆ ವೈಜ್ಞಾನಿಕ ಬೆಲೆಯನ್ನು ಏತಕ್ಕೆ ಕೊಡಬೇಕು, ಬೆಲೆಯನ್ನು ಯಾವ ರೀತಿ ನಿಗದಿ ಮಾಡಬೇಕು ಎನ್ನುವುದರ ಬಗ್ಗೆ ಆ ವಿಷಯ ಚರ್ಚೆಗೆ ಬಂದಾಗ ಮಾತನಾಡೋಣ. ಅದಕ್ಕಾಗಿ ಒಂದು ವಿಶೇಷವಾದ ಅವಕಾಶವನ್ನು ಸರ್ಕಾರ ಮಾಡಿಕೊಡಬೇಕು. ಅದನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಾನು ಪ್ರಾರಂಭದಲ್ಲಿ ಒಂದು ಮಾತನ್ನು ಹೇಳಿದ್ದೇನೆ. ಗೌರವಪೂರ್ವಕವಾಗಿ ಒಂದು ಮಾತನ್ನು ಹೇಳುತ್ತೇನೆ, ಇಡೀ ದೇಶದಲ್ಲಿ ಬೇರೆ ಎಲ್ಲ ರಾಜ್ಯಗಳೂ ಸಹ ರೈತನ ಸಾಲವನ್ನು ಮನ್ನಾ ಮಾಡುವ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇನ್ನೂ ಹೆಚ್ಚಿಗಳನ್ನು ಮುಂದಿಡುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ನಬಾರ್ಡ್ ಸಂಸ್ಥೆಯ ಮೂಲಕ ದುಡ್ಡು ಕೊಡುತ್ತೇನೆಂದು ಒಪ್ಪಿಕೊಂಡ ಮೇಲೂ ಸಹ ಅತ್ಯಂತ ಕಡಿಮೆ ಹಣ ನಬಾರ್ಡ್‌ನಿಂದ ಪಡೆದಿರುವಂತಹ ಯಾವುದಾದರೂ ಸರ್ಕಾರವಿದ್ದರೆ ಅದು ನಮ್ಮ ಸರ್ಕಾರ. ಕೇವಲ 23 ಕೋಟಿ ರೂಪಾಯಿಗಳನ್ನು ಮಾತ್ರ ಪಡೆದಿದೆ. ಹಿಮಾಚಲ ಪ್ರದೇಶ 32 ಕೋಟಿ ರೂಪಾಯಿಗಳನ್ನು ನಬಾರ್ಡ್‌ನಿಂದ ಸಹಾಯ ಪಡೆದು ಎಲ್ಲ ರೈತರ ಸಾಲವನ್ನು ಮನ್ನಾ ಮಾಡಿದೆ. ಸನ್ಮಾನ್ಯ ಸಹಕಾರ ಮಂತ್ರಿಗಳು ಒಂದು ಬಿಲ್ ತರುತ್ತಿದ್ದಾರೆ. ಕೋ-ಆಪರೇಟೀವ್ ಎಲೆಕ್ಷನ್ಸ್ ಮಾಡುತ್ತಾರಂತೆ. ಮಾನ್ಯ ಸಹಕಾರ ಸಚಿವರಿಗೆ, ನಾನು ಏನು ಸಲಹೆ ಕೊಡಬೇಕೆಂದು ಹೊರಟಿದ್ದೆ ಎಂದರೆ, ಏನು ಕೊ-ಆಪರೇಟಿವ್ ಎಲೆಕ್ಷನ್ಸ್ ನಡೆಸುವುದಕ್ಕೆ ಹೊರಟಿದ್ದೀರಿ, ಅದನ್ನು ದಯವಿಟ್ಟು ಮಾಡಬೇಡಿ. ಏಕೆಂದರೆ, ನೂರಕ್ಕೆ 99 ಜನ ಕೋ-ಆಪರೇಟೀವ್ ಸದಸ್ಯರು ಡಿಫಾಲ್ಟರ್ಸ್ ಆಗಿದ್ದಾರೆ; ಡೈರೆಕ್ಟರ್ಸ್ ಡಿಫಾಲ್ಟರ್ಸ್ ಆಗಿದ್ದಾರೆ. ಹೀಗಿರಬೇಕಾದರೆ ಕೋ-ಆಪರೇಟೀವ್ ಎಲೆಕ್ಷನ್ಸ್ ಹೇಗೆ ಮಾಡುತ್ತೀರಿ ? ಅಲ್ಲೇನು ಬಡಿದಾಡಲಿ, ಇನ್ನೂ ಯಾರಾದರೂ ಬಂದು ಅಲ್ಲಿರುವುದನ್ನು ಖಾಲಿ ಮಾಡಲಿ ಎಂತಲೇ ? ಆದ್ದರಿಂದ ನಾನು ತಮಗೆ ಸಲಹೆ ಕೊಡುವಂಥಾದ್ದು ಏನೆಂದರೆ, ರೈತನ ಸಾಲ ಮನ್ನಾ ಮಾಡಿ ಆತನನ್ನು ಋಣಮುಕ್ತನನ್ನಾಗಿ ಮಾಡಿ ಅವನು ಸದಸ್ಯನಾಗಿ ಕೊ-ಆಪರೇಟೀವ್ ಸೊಸಾಯಿಟಿಯಲ್ಲಿ ಓಟು ಕೊಡುವಂಥ ಅಧಿಕಾರ ಅವನಿಗೆ ಬರುವವರೆಗೆ ಕೊ-ಆಪರೇಟೀವ್ ಎಲೆಕ್ಷನ್ಸ್‌ನ್ನು ಮಾಡಬೇಡಿ. ಏಕೆಂದರೆ, ಕೊ-ಆಪರೇಟೀವ್ ಸೊಸಾಯಿಟಿಗಳಲ್ಲಿ ಇವತ್ತು ದುಡ್ಡಿಲ್ಲ, ಇರುವ ಸಾಮಗ್ರಿಗಳನ್ನು ಮಾರಿಕೊಳ್ಳುವಂಥ ಸ್ಥಿತಿಗೆ ಅವರು ಬಂದಿದ್ದಾರೆ. ಅಲ್ಲಿ ಸಿಬ್ಬಂದಿಗೆ ಸಂಬಳ ಕೊಡುವಂಥ ಸ್ಥಿತಿ ಇಲ್ಲ. ಇಂತಹ ಸಂದರ್ಭದಲ್ಲಿ ನಾನು ಒತ್ತಾಯ ಮಾಡತಕ್ಕದ್ದು ಏನೆಂದರೆ ದಯಮಾಡಿ ಕೋ-ಆಪರೇಟೀವ್ ಎಲೆಕ್ಷನ್ಸ್ ಅನ್ನು ಮಾಡಬೇಡಿ. ಇವತ್ತು ಮೊದಲನೆಯದಾಗಿ ಸರ್ಕಾರಕ್ಕೆ ನನ್ನ ಒತ್ತಾಯ ಏನೆಂದರೆ, ಇವತ್ತು ಈ ರೀತಿ ಕೋ- ಆಪರೇಟೀವ್ ಎಲೆಕ್ಷನ್ಸ್ ಮಾಡುವುದನ್ನು ಕೈಬಿಟ್ಟು ರೈತರ ಸಮಸ್ಯೆ ಬಗೆಹರಿದು, ಅವನ ಸಾಲ ಮನ್ನಾ ಆದಮೇಲೆ ಚುನಾವಣೆಗಳನ್ನು ಮಾಡಿ; ಅಲ್ಲಿಯವರೆಗೆ ಕೋ-ಆಪರೇಟೀವ್ ಚುನಾವಣೆಯನ್ನು ಮುಂದೂಡಿ. ತಾವು ಇದಕ್ಕೆ ಯಾವ ರೀತಿ ಆಲೋಚನೆ ಮಾಡಬೇಕೋ ಮಾಡಿ. ಆದ್ದರಿಂದ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರ ಹೊರಡಿಸಿರುವ ಸೂಚನೆಗಳು ಏನಿವೆಯೆಂದರೆ, ತಮಗೆ ಗೊತ್ತಿರುವ ಹಾಗೆ, ಅವನ ಬೆಳೆ ಎಂಟಾಣೆಗಿಂತ ಕಡಿಮೆಯಾಗಿರಬೇಕು, 2–10–89ರ ಒಳಗೆ ಎಂಟಾಣೆಗಿಂತ ಯಾರ ಬೆಳೆ ಕಡಿಮೆಯಾಗಿದೆ, ಮತ್ತು 2–10–89ರ ವರೆಗೆ ಡಿಫಾಲ್ಟರ್ ಆಗಿರಬೇಕು, ಅವರಿಗೆ ಮಾತ್ರ ಇದು ಅನ್ವಯಿಸುತ್ತದೆ ಎಂದು ಹೇಳಿರುವುದರಿಂದ ಹೋದವರ್ಷ ಯಾವುದೇ ಸಹಕಾರ ಸಂಸ್ಥೆಯಲ್ಲಿ ಸಾಲ ತೆಗೆದುಕೊಂಡಂಥ ರೈತರಿಗೆ ಇದು ಅನುಕೂಲವಾಗುವುದಿಲ್ಲ. ಇವತ್ತು ಬ್ಯಾಂಕುಗಳು ಅಥವಾ ಬೇರೆ ಯಾವುದೇ ಸಂಸ್ಥೆಯಿಂದ ಸಾಲ ಪಡೆದಿರಬಹುದು. ಆದರೆ ಈ ಒಂದು ಕಂಡೀಶನ್ ಇರುವುದರಿಂದ, ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗುವುದಿಲ್ಲ. ಮೈಸೂರ ಬ್ಯಾಂಕ್, ವೈಶ್ಯ ಬ್ಯಾಂಕ್, ನ್ಯಾಶನಲೈಸ್ಡ್ ಬ್ಯಾಂಕ್ಸ್ ಅಲ್ಲ. ಶಿಕಾರಿಪುರದಲ್ಲಿ ಒಬ್ಬರು ಕರ್ನಾಟಕ ಬ್ಯಾಂಕ್‌ನಿಂದ ಸಾಲ ಪಡೆದಿದ್ದಾರೆ. ಮೈಸೂರ ಬ್ಯಾಂಕ್‌ನಿಂದ ಸಾಲ ಪಡೆದಿದ್ದಾರೆ. ಅವರಿಗೆ ಸಾಲ ಮನ್ನಾ ಆಗುತ್ತದೆ, ಇವರಿಗೆ ಮನ್ನಾ ಆಗುವುದಿಲ್ಲ ಇದು ಈ ಸರ್ಕಾರದ ಜವಾಬ್ದಾರಿ ತಾನೇ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವ ಪ್ರಯತ್ನವನ್ನು

ಯಾರೂ ಮಾಡಿಲ್ಲ. ಆ ಯೋಜನೆಯ ಪ್ರಯೋಜನ ನಮ್ಮ ರೈತರಿಗೆ ಆಗಿಲ್ಲ. ಅದಕ್ಕೋಸ್ಕರ ಈ ಕಂಡೀಶನ್ಸ್ ಅನ್ನು ತೆಗೆದುಹಾಕುವಂತೆ ಇಲ್ಲಿ ಮುಖ್ಯಮಂತ್ರಿಗಳು ಒಂದು ರೆಸಲ್ಯೂಷನ್ ಮೂವ್ ಮಾಡಿ...

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷಿಣಿಯರೇ, ಇಲ್ಲಿ ಪತ್ರಿಕಾ ಸ್ನೇಹಿತರೆಲ್ಲ ಏಕೋ ಎದ್ದು ಹೊರಟುಹೋಗಿದ್ದಾರೆ. ಏನಾದರೂ ತೊಂದರೆಯಾಯಿತೇ ಎಂದು ದಯವಿಟ್ಟು ತಾವು ವಿಚಾರಿಸಬೇಕು.

ಚೇರ್ಮನ್ :– ಶ್ರೀ ಯಡಿಯೂರಪ್ಪನವರೇ, ತಾವು ಮುಂದುವರೆಸಿ.

ಶ್ರೀ ಕೆ. ಹೆಚ್. ಪಾಟೀಲ್ :– ಹೇಳಿದ್ದನ್ನೇ ಹೇಳುತ್ತಿದ್ದೀರಿ ಎಂದು ನಾನು ಆಗಲೇ ಹೇಳಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಶ್ರೀ ಕೆ. ಹೆಚ್. ಪಾಟೀಲರವರೇ, ಇವತ್ತು ಏನಾಗಿದೆ ಗೊತ್ತೇ ? ರೈತರ ವಿಷಯ ಬಂದಾಗ ಅದು ನಗೆಪಾಟಲಿನ ವಿಷಯ ಆಗುತ್ತದೆ. ಇವತ್ತು ಪತ್ರಿಕಾ ಪ್ರತಿನಿಧಿಗಳು ಹೊರಗಡೆ ಹೋದರು ಎಂದು ನಾನು ಅವರನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಯಡಿಯೂರಪ್ಪ ಎದ್ದು ಮಾತನಾಡುವಾಗ, ಬಿ. ಜೆ. ಪಿ. ಯವರು ನಾಲ್ಕು ಜನರು ಇರುವುದು ನಿಮಗೆ ಬೇಡವಾದಾಗ, ನಾನು ಅವರಿಗೆ ಏಕೆ ಬೇಕಾಗುತ್ತೇನೆ ? ಅವರಿಗೆ ಊಟದ ಸಮಯ ಮತ್ತು ಅವರು ಸಹಜವಾಗಿ ಹೋಗುವಂಥ ವೇಳೆ, ಇದು ಕಾರಣ ಇರಬಹುದೇ ಹೊರತು ಬೇರೆ ಉದ್ದೇಶ ಇದೆಯೆಂದು ಹೇಳುವುದಕ್ಕೆ ನಾನು ಇಚ್ಛೆ ಪಡುವುದಿಲ್ಲ. ಆದರೆ ಇಲ್ಲಿ ಯಾರು ಇದ್ದಾರೆ ? ಇಲ್ಲೂ ಯಾರೂ ಇಲ್ಲ. ಅಂತಹ ಸಂದರ್ಭ ಒದಗಿ ಬಂದಿದೆ. ಆದ್ದರಿಂದ ಅದನ್ನು ಈಗ ಎತ್ತಿ ಮಾತನಾಡುವ ಅಗತ್ಯ ಇಲ್ಲ. ಶ್ರೀ ವೀರೇಂದ್ರ ಪಾಟೀಲರು ಇದೇ ಸದನದಲ್ಲಿ ನಿಂತುಕೊಂಡು ಒಂದು ಮಾತನ್ನು ಹೇಳಿದ್ದರು. ನೀವು ಇದು ನೆಪ ಇರಬಹುದು ಎಂದು ಹೇಳಬಹುದು. ರೈತರ ಸಾಲದ ಬಗ್ಗೆ ಸಮಗ್ರ ಒತ್ತಡಕ್ಕೆ ದೆಹಲಿಗೆ ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಹೋಗಲಿಕ್ಕೆ ನಾನು ಸಿದ್ಧನಿದ್ದೇನೆ ಎಂದು ಅವರು ಹೇಳಿದ್ದು ಜನವರಿ 24, 1990ರ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ನಾವು ಇಲ್ಲಿ ಧರಣಿ ಕುಳಿತುಕೊಂಡಿದ್ದಾಗ ಸನ್ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದರು. ಅದಕ್ಕೋಸ್ಕರ ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಿ ಬಹುಶಃ ಬೇರೆ ಯಾವುದೇ ರಾಜ್ಯ ಮಾಡದೇ ಇರಬಹುದು. ಒಂದು ಯುನಾನಿಮಸ್ ರೆಸಲ್ಯೂಷನ್ ಮಾಡಿ ಕೇಂದ್ರ ಸರ್ಕಾರ ತಂದಿರುವ ಸಾಲ ಮನ್ನಾ ಮಾಡುವ ಯೋಜನೆಯಿಂದ ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗುವುದಿಲ್ಲ; ಈ ಕಂಡೀಷನ್ಸ್ ತೆಗೆದುಹಾಕುವಂಥ ಒಂದು ಯೋಜನೆಯನ್ನು ನಾವು ತೆಗೆದುಕೊಂಡು ಬರುತ್ತೇವೆ. ಅದನ್ನು ತೆಗೆದು ಹಾಕಿ, ವಿಶೇಷ ಸಂದರ್ಭ ಬಂದಿರುವುದರಿಂದ ರಾಜ್ಯಕ್ಕೆ ಅನುಕೂಲ ಮಾಡಿಕೊಡಿ. ಎಂದು ಅವರಿಗೆ ಹೇಳಿ. ಅದು ಆಗಲಿಲ್ಲವೆಂದರೆ, ರಾಜ್ಯ ಸರ್ಕಾರ ಮಾಡಿತೋ, ಕೇಂದ್ರ ಸರ್ಕಾರ ಮಾಡಿತೋ ಎಂದು ನಮ್ಮ ರೈತರಿಗೆ ಗೊತ್ತಿಲ್ಲ. ನೀವು ಬಂದಾಗ ಕೇಂದ್ರ ಸರ್ಕಾರವನ್ನು ನೋಡಿ ಅವನು ಓಟು ಕೊಡಲಿಲ್ಲ. ನಾವು ಹಿಂದೆ ಮಾಡಿದ ತಪ್ಪನ್ನು ಮಾಡುವುದಿಲ್ಲ, ನಿಮ್ಮ ಒಂದು ವಿಶ್ವಾಸಕ್ಕೆ ಪಾತ್ರರಾಗುತ್ತೇವೆ, ಹಿಂದೆ ನಾವು ತಪ್ಪು ಮಾಡಿದ್ದಕ್ಕೆ ಎರಡು ಸಾರಿ ಶಿಕ್ಷೆ ಕೊಟ್ಟಿದ್ದೀರಿ, ಆ ತಪ್ಪನ್ನು ಮನ್ನಿಸಿ, ನಿಮ್ಮ ಹಿತ ಕಾಪಾಡುತ್ತೇವೆ ಎಂದು ವೀರೇಂದ್ರ ಪಾಟೀಲರು ರಾಜ್ಯದ ಉದ್ದಗಲಕ್ಕೆ ಓಡಾಡಿಕೊಂಡು ಬಂದರು. ಅದರ ಆಧಾರದ ಮೇಲೆ ಮೊಟ್ಟಮೊದಲ ಬಾರಿಗೆ ನೀವು 186 ಜನ ಶಾಸಕರು ಕುಳಿತಿದ್ದೀರಿ. ಈಗಲಾದರೂ ರೈತನಿಗೆ ಅನಾನುಕೂಲವಾಗುವಂತಹ ಕಂಡೀಷನ್ ತೆಗೆದು, ಸಾಲ ಮನ್ನಾ ಮಾಡುವಂಥ ಯೋಚನೆ ಮಾಡಿ. ಇದು ಆಗಲಿಲ್ಲ ಎಂದರೆ, ಬಹುಶಃ ಈ ರಾಜ್ಯದಲ್ಲಿ ಅನಿವಾರ್ಯವಾಗಬಹುದು. ಜೈಲುಗಳನ್ನು ಭರ್ತಿ ಮಾಡುತ್ತೇವೆ, ಯಾರು ಬರಗಾಲಕ್ಕೆ ತುತ್ತಾಗಿ, ಕೈಗೆ ಕೆಲಸ ಕೊಡದೇ ಇರತಕ್ಕ ಸ್ಥಿತಿ ಇರಬೇಕಾದರೆ, ಮನೆಯಲ್ಲಿ ಕುಳಿತು ಏನು ಮಾಡೋಣ ಇವತ್ತು ಈ ರಾಜ್ಯದ ರೈತ ಸಮೂಹಕ್ಕೆ ಈ ಸದನದ ಮೂಲಕ ಕರೆ ಕೊಡುತ್ತೇನೆ. ಯಾವುದೇ ಕಾರಣಕ್ಕೂ 10 ಸಾವಿರದ ವರೆಗಿನ ಸಾಲವನ್ನು ಕಟ್ಟಬೇಡಿ, ಒಂದು ಸಾರಿ ತೀರ್ಮಾನವಾಗಲಿ, ಈ ಸರ್ಕಾರ ರೈತರ ಪರ ಆಗುವವರೆಗೆ, 10 ಸಾವಿರ ಸಾಲ ಕಟುವುದಿಲ್ಲ. ಈ ಹೋರಾಟ ಮುಂದುವರೆಯುತ್ತದೆ, ಜೈಲುಗಳನ್ನು ಭರ್ತಿ ಮಾಡುತ್ತೇವೆ. ಜನ ಇವತ್ತು ಜಾಗೃತರಾಗಿದ್ದಾರೆ ಇವತ್ತು ರೈತರ ಪ್ರತಿನಿಧಿಯಾಗಿ, ಹಿಂದುಳಿದ ವರ್ಗದ ಜನರ ಬಗ್ಗೆ ಕಳಕಳಿ ಇರುವ ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು, ರೈತರ ಸಾಲ ಮನ್ನಾ ಮಾಡುವಂಥ ಧೈರ್ಯ, ಶಕ್ತಿ ಇರುವಂಥವರು ಅವರು ಕೃಷಿ ಮಂತ್ರಿಗಳಾಗಿದ್ದಾಗ ಹೇಳಿದ್ದಾರೆ. ಅವರ ಸ್ಪಷ್ಟವಾದ ಅಭಿಪ್ರಾಯ ಇದೆ. ಪ್ರಧಾನಿಯವರಿಗೆ ಮನದಟ್ಟು ಮಾಡುವ ಪ್ರಯತ್ನ ಮಾಡಿದ್ದಾರೆ. ಇವತ್ತು ಎಲ್ಲಾ ಶಾಸಕರೂ ಸನ್ಮಾನ್ಯ ಮುಖ್ಯಮಂತ್ರಿಗಳ ಕೈ ಬಲಪಡಿಸಿ, ಈ ರಾಜ್ಯದ ರೈತನನ್ನು ಋಣಮುಕ್ತನನ್ನಾಗಿ ಮಾಡುವಂಥ ಕಾರ್ಯಕ್ರಮವನ್ನು ಮೂಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ದಯಮಾಡಿ, ಈ ರೈತನ ಶಾಪಕ್ಕೆ ತಾವು ತುತ್ತಾಗಬೇಡಿ. ನಾನು ರಾಮನ ಆಣೆ ಇಟ್ಟು ಹೇಳಿದ್ದೇನೆ, ಇವತ್ತು ರಾಮನ ಆಣೆ ಏಕೆ ಹೇಳುತ್ತಿದ್ದೇನೆ ಎಂದರೆ ಆ ಪಾಪಕ್ಕೆ ನೀವು ಪ್ರಾಯಶ್ಚಿತ್ತ ಅನುಭವಿಸಬೇಕಾಗುತ್ತದೆ. ನಿಮ್ಮ ಸರ್ಕಾರ ಉಳಿಯುವುದಿಲ್ಲ, ಈ

ಹೋರಾಟ ಎಲ್ಲಿಯವರೆಗೆ ಮುಂದುವರಿಯುತ್ತದೆಂದರೆ, ಈ ಸದನದಲ್ಲಿ, ರಾಜ್ಯದ ರೈತನ ಬಗ್ಗೆ ಸರಿಯಾದ, ದೃಢ ನಿರ್ಧಾರವನ್ನು ನೀವು ತೆಗೆದುಕೊಳ್ಳದೇ ಹೋದರೆ, ಬಹುಶಃ ರಾಜ್ಯದಲ್ಲಿ ಜನ, ರೈತರು, ಬೀದಿಗೆ ಇಳಿಯುವುದಕ್ಕೆ ಸಿದ್ಧನಿದ್ದಾರೆ. ಅವರ ಜೊತೆಗೆ ಕೈಜೋಡಿಸುವುದಕ್ಕೆ ನಾವು ಮತ್ತು ಇತರೆ ಪಕ್ಷದವರೂ ಸಿದ್ಧರಿದ್ದೇವೆ. ಈ ಹೋರಾಟ ನಿಮ್ಮ ಅಧಿಕಾರ ಕಿತ್ತುಕೊಂಡು ನೀವು ಮನೆಗೆ ಹೋಗುವವರೆಗೆ ಮುಂದುವರಿಯುತ್ತದೆ. ಈ ಸದನದಲ್ಲಿ ಧರಣಿ ನಿಂತಿದೆ. ಇವತ್ತು ಪತ್ರಿಕೆಯವರು ಬಾಯ್‌ಕಾಟ್ ಮಾಡಿಲ್ಲ, ಅವರು ಊಟಕ್ಕೆ ಹೋಗಿದ್ದಾರೆ......

ಶ್ರೀ ಎಲ್. ಆರ್. ಶಿವರಾಮೇಗೌಡ :– ಇವತ್ತು ಏನು ವಾತಾವರಣ ನಿರ್ಮಾಣವಾಗಿದೆ ಎಂದರೆ, ಮಾನ್ಯ ಯಡಿಯೂರಪ್ಪನವರಿಗೆ ರೈತರ ಬಗ್ಗೆ ಬಹಳ ಕಾಳಜಿ ಇದೆ, ಇದು ಗಂಭೀರ ವಿಚಾರ, ಇದರ ಬಗ್ಗೆ ಎರಡನೇ ಮಾತು ಇಲ್ಲ. ಹಿರಿಯ ಸಚಿವರಾದ ಕೆ. ಹೆಚ್. ಪಾಟೀಲರು ಹೇಳಿದಹಾಗೆ, ಹಾಡಿದ್ದೇಹಾಡುತ್ತಾ ಇದ್ದರೆ, ಎಲ್ಲಿಯವರೆಗೆ ಇದನ್ನು ಕೇಳುವುದು ಇದಕ್ಕೆ ಟೈಮ್ ನಿಗದಿ ಮಾಡಿ ಅವರು ಹೇಳಿರತಕ್ಕ ವಿಚಾರದ ಬಗೆ ಯಾರೂ ಎರಡು ಮಾತಾಡುವುದಿಲ್ಲ. ಆದರೆ, ಎಷ್ಟು ಹೊತ್ತು ಚರ್ಚೆ ಮಾಡಬೇಕು. ಈಗ ಪತ್ರಿಕೆಯವರೂ ಇಲ್ಲ, ಮಾನ್ಯ ಸಿಂಧ್ಯರವರು ಈಗಾಗಲೇ ಇದನ್ನು ಹೇಳಿದ್ದಾರೆ. ತಾವು ಅಧ್ಯಕ್ಷರು ಒಂದು ತೀರ್ಮಾನ ಮಾಡಬೇಕು. ಅವರು ಮಾತನಾಡಿದ ಮೇಲೆ ನಮಗೆ ಎಷ್ಟು ಟೆಮ್ ಕೊಡುತ್ತೀರಿ, ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಎಲ್ಲಿಯವರೆಗೆ ಅವಕಾಶ ಇದೆ. ಹೊರಗಡೆ ಹಳ್ಳಿಗಳಲ್ಲಿ, ಕರ್ನಾಟಕ ರಾಜ್ಯದ ಉಳಿಕೆ ಶಾಸಕರು ಸುಮ್ಮನೆ ಇದ್ದಾರೆ, ಕೆಲವು ಸ್ನೇಹಿತರು ಮಾತ್ರ ರೆತರ ಬಗ್ಗೆ ವಿಧಾನ ಸೌಧದಲ್ಲಿ ಹೋರಾಟ ಮಾಡುತ್ತಾರೆ ಎಂಬ ಭಾವನೆ ಬರುತ್ತದೆ. ನಮಗೂ ರೆತರ ಬಗ್ಗೆ ನಿಜವಾದ ಕಾಳಜಿ ಇದೆ, ದಯಮಾಡಿ ನಮಗೆ ಅವಕಾಶ ಕೊಡಿ, ತಾವು ಒಂದು ತೀರ್ಮಾನ ಮಾಡಬೇಕು. ಮಾನ್ಯ ಯಡಿಯೂರಪ್ಪನವರಿಗೆ 4 ದಿವಸ ಚರ್ಚೆ ಮಾಡುವುದಕ್ಕೆ ಟೆಮ್ ಕೊಡಿ, ನಮಗೆ 4 ದಿವಸ ಅವಕಾಶ ಕೊಡಿ. ನಾವೂ ಕೂಡ ರೆತರಿಂದಲೇ ಬಂದಿರುವುದು. ಇದಕ್ಕೆ ಒಂದು ಟೆಮ್ ನಿಗದಿ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ನಾನು ಅವರನ್ನು ಮಾತನಾಡಬೇಡಿ ಎಂದು ಹೇಳಿಲ್ಲ, ನನ್ನ ಮಾತು ಮುಗಿಸುತ್ತಿದ್ದೇನೆ. ಇವತ್ತು ರೆತರ ಸಾಲ ಮನ್ನಾ ಮಾಡುವಂಥ ವಿಷಯ ಬಂದಾಗ ನಾನು ನಿಲುವಳಿ ಸೂಚನೆ ಕಳುಹಿಸಿದ್ದೇನೆ, ಅವರನ್ನು ಕಳುಹಿಸಬೇಡಿ ಎಂದು ಹೇಳಿದ್ದೇನೆಯೇ. ನಾವು ಇಲ್ಲಿ ಧರಣಿ ಕುಳಿತುಕೊಂಡಾಗ, ನನಗೆ ಬೆಂಬಲ ಕೊಡಬೇಡಿ ಎಂದು ಹೇಳಿದ್ದೇನೆಯೇ. ಅಥವಾ ನಾನು ಪ್ರಸ್ತಾಪ ಮಾಡುವುದಕ್ಕೆ ಮುಂದೆ, ನೀವು ಪ್ರಸ್ತಾಪ ಮಾಡಬೇಡಿ ಎಂದು ಹೇಳಿದ್ದೇನೆಯೇ. ಯಾವುದೇ ಸಂದರ್ಭದಲ್ಲಿ, ಈ ಸದನದಲ್ಲಿ ಕುಳಿತು, ರೈತರ ಬಗ್ಗೆ ಪ್ರಸ್ತಾಪ ಮಾಡದೇ ಈ ಸ್ಥಿತಿಗೆ ತಂದಿರತಕ್ಕ ಸಂದರ್ಭ ಬಂದಿದೆ. ಇವತ್ತು ಗೋಸುಂಬಿ ಆಟ ಯಾರು ಮಾಡುತ್ತಾರೆ ಎನ್ನುವುದು ಜನತೆಗೆ ಗೊತ್ತಿದೆ. ಒಳಗಡೆ ರೈತರ ಪರವಾಗಿ ಮಾತನಾಡುವ ಪ್ರಯತ್ನ ಮಾಡುವುದು, ಮಾನ್ಯ ಮುಖ್ಯಮಂತ್ರಿಗಳು ಎದ್ದುನಿಂತು ನಿಯೋಗ ಹೋಗಲು ಪ್ರಯತ್ನ ಮಾಡುತ್ತೇವೆ ಎನ್ನುವ ಮಾತುಗಳನ್ನು ಹೇಳುವಂಥ ಸಂದರ್ಭ ಬಂದಾಗ, ಯಾರು ಅಡ್ಡಿ ಬಂದರು ಎನ್ನುವುದನ್ನು ಈ ರಾಜ್ಯದ ಜನ ನೋಡುತ್ತಿದ್ದಾರೆ. ನಾವು, ನೀವೂ ಮರೆತರೂ ಸಹ, ಚುನಾಯಿತ ಪ್ರತಿನಿಧಿಗಳು ರೈತನ ಹಿತವನ್ನು ಮರೆತರೂ ಸಹ, ಈ ರಾಜ್ಯದ ರೈತ, ಯಾರು ಯಾವರೀತಿ ನಡೆದುಕೊಳ್ಳುತ್ತಾರೆ, ಸದನದೊಳಗೆ ಯಾವರೀತಿ ನಡೆದುಕೊಳ್ಳುತ್ತಾರೆ, ಹೊರಗಡೆ ಸುಳ್ಳು ಆಶ್ವಾಸನೆ ಕೊಟ್ಟು ಯಾವರೀತಿ ದ್ರೋಹ ಮಾಡುತ್ತಿದ್ದಾರೆ, ಎಂದು ನೋಡುತ್ತಿದ್ದೇನೆ. ಇವರಿಗೆ ನಮ್ಮ ವೋಟಿನ ಮೇಲೆ ಕಣ್ಣಿದೆಯೇ ಹೊರತು, ರೈತನ ಹಿತದ ಬಗ್ಗೆ ಗಮನವಿಲ್ಲವೆಂದು ಅವರಿಗೆ ಮನವರಿಕೆಯಾಗಿದೆ. ನಾವೆಲ್ಲರೂ ನಮ್ಮ, ನಮ್ಮ ಕ್ಷೇತ್ರಗಳಿಗೆ ಹೋದರೆ, ಇದು ಮನದಟ್ಟಾಗುತ್ತದೆ. ಇದೇ ಇಷ್ಯೂ ಬಗ್ಗೆ ನಿಮ್ಮ ಸರ್ಕಾರಕ್ಕೆ ಧೈರ್ಯ ಇದ್ದರೆ ವಿಧಾನ ಸಭೆಯನ್ನು ವಿಸರ್ಜನೆ ಮಾಡಿ ಹೋಗಿ. ರೈತನಿಗೆ ಯಾವರೀತಿ ದ್ರೋಹ ಮಾಡಿದ್ದೀರಿ, ಅದಕ್ಕೆ ತಕ್ಕ ಪಾಠವನ್ನು ಕಲಿಸುವುದಕ್ಕೆ ಅವನು ಸಿದ್ಧನಾಗಿದ್ದಾನೆ. ಅದಕ್ಕೋಸ್ಕರ ಇವತ್ತು ಸ್ಪಷ್ಟವಾಗಿ ಕೇಂದ್ರ ಸರ್ಕಾರವನ್ನು ತೋರಿಸದೇ ರಾಜ್ಯ ಸರ್ಕಾರದವರು ಸಂಪೂರ್ಣವಾಗಿ ಜವಾಬ್ದಾರಿಯನ್ನು ತೆಗೆದುಕೊಳ್ಳಿ. ಇಲ್ಲದೇ ಹೋದರೆ ಕೇಂದ್ರ ಸರ್ಕಾರಕ್ಕೆ ಕೊಡುತ್ತಿರುವ ಬೆಂಬಲ ವಾಪಸ್ ತೆಗೆದುಕೊಳ್ಳಿ. ಇವತ್ತು ರೈತನ ಅನುಕೂಲವಾದ ದೃಷ್ಟಿಯಿಂದ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಇಲ್ಲ ಎಂದರೆ ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ಮುಂದುವರಿಯುತ್ತದೆ, ಹೋರಾಟ ಮುಂದುವರಿಯುತ್ತದೆ. ಈ ಒಂದು ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುತ್ತಾ, ಹಿರಿಯ ಸಚಿವರಾದ ಕೆ. ಹೆಚ್. ಪಾಟೀಲರು ಹೇಳಿದ್ದರ ಬಗ್ಗೆ ಹೇಳುತ್ತೇನೆ. ಸ್ವಾಮಿ, ನಾನು ಒಬ್ಬ ರೈತನ ಮಗ, ಬುದ್ಧಿವಂತ ಅಲ್ಲ. ಏನೋ ಮಾಡಿ ಹಳ್ಳಿಯಲ್ಲಿ ರೈತನ ಜೊತೆ ಕೆಲಸ ಮಾಡಿದ್ದೇನೆ. ನಾಲ್ಕು ಅಕ್ಷರ ಕಲಿತಿದ್ದೇನೆ. ಸೈಂಟಿಫಿಕ್ ಮೆಥೆಡ್, ಅಂಕಿ ಅಂಶ ಎಂದು ಹೇಳುತ್ತೀರಿ. ಬೆಂಕಿ ಹಾಕಿತು ನಿಮ್ಮ ಅಂಕಿ ಅಂಶ ತೆಗೆದುಕೊಂಡು. ಸ್ವಾತಂತ್ರ್ಯ ಬಂದು 43 ವರ್ಷದಲ್ಲಿ ಬುದ್ಧಿವಂತರು ಸೇರಿಕೊಂಡು ಅಂಕಿ ಅಂಶ, ಇದರ ಬಗ್ಗೆ ಚರ್ಚೆ ಮಾಡಿ ಮುಗಿಸಿದರೇ ಹೊರತು ಬಡ ರೈತನಿಗೆ ನೆರವು ಕೊಡುವಂತಹ ಏನು ಕಾರ್ಯಕ್ರಮ ರೂಪಿಸಿದಿರಿ ? ತಜ್ಞರಿಲ್ಲವೇನು ? ಇವತ್ತು ಬುದ್ಧಿವಂತಿಕೆ ಮಾತಿನಿಂದ ರೈತನ ಸಮಸ್ಯೆ ಬಗೆಹರಿಯುವುದಿಲ್ಲ. ನೇರವಾಗಿ

ಸಮಸ್ಯೆ ಬಗೆಹರಿಸುವುದಕ್ಕೆ ದೃಢ ನಿಲುವನ್ನು ತೆಗೆದುಕೊಳ್ಳಿ, ಇಲ್ಲದೇ ಹೋದರೆ ನಿಮ್ಮ ಸರ್ಕಾರ ಸರ್ವನಾಶ ವಾಗುತ್ತದೆ. ಅಧಿಕಾರ ಕಿತ್ತುಕೊಂಡು ಹೋಗುತ್ತದೆ. ಮತ್ತೆ ಕಾಂಗ್ರೆಸ್ ತಲೆ ಎತ್ತದಿರುವಂತಹ ಕಾಲ ಬರಬಾರದು ಎಂದು ಇದ್ದರೆ ನೇರವಾದ ಸ್ಪಷ್ಟವಾದ ಉತ್ತರವನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಈ ರೀತಿ ದೃಢ ನಿಲುವನ್ನು ಸನ್ಮಾನ್ಯ ಕೋ-ಆಪರೇಟೀವ್ ಮಿನಿಸ್ಟರ್‌ರವರು ತೆಗೆದುಕೊಳ್ಳಬೇಕು. ಒಂದು ವಿಷಯ ನಡೆಯುತ್ತಿದೆ. ರೈತರ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿಬಿಟ್ಟು ಹೇಗೊ ತೇಪೆ ಹಾಕೋಣ ಎಂದು ನಡೆಯು-ಯುತ್ತಿದೆ. ಆ ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ. ರೈತನ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವುದರಿಂದ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ. 10 ಸಾವಿರದ ವರೆಗಿನ ಸಾಲವನ್ನು ಮನ್ನಾ ಮಾಡಿ. ಯಾವುದೇ ಸಣ್ಣ ರೈತ ಇರಬಹುದು, ದೊಡ್ಡ ರೈತ ಇರಬಹುದು, ಕೃಷಿ ಕಾರ್ಮಿಕ ಇರಬಹುದು, ಮೀನುಗಾರ ಇರಬಹುದು, ನೇಕಾರ ಇರಬಹುದು,. ಒಂದು ಸಾವಿರ ಮೀನುಗಾರರ ಕುಟುಂಬದವರು, ಒಂದು ಸಾವಿರ ಜನ ನೇಕಾರರು ನಮ್ಮ ವಿಷಯ ಪ್ರಸ್ತಾಪ ಮಾಡುತ್ತಿಲ್ಲವೆಂದು ನಮಗೆ ಪತ್ರ ಬರೆದಿದ್ದಾರೆ. ಅದು ಪತ್ರಿಕೆಯಲ್ಲಿ ಬರುತ್ತಿಲ್ಲ. ಈ ರೀತಿ ಕೃಷಿ ಕಾರ್ಮಿಕರ, ಮೀನುಗಾರರ, ನೇಕಾರರ ಸಾಲ ಮನ್ನಾ ಮಾಡುವಂತಹ ಒಂದು ಯೋಜನೆಯನ್ನು ರೂಪಿಸಬೇಕು. ಅದನ್ನು ಸರ್ಕಾರದ ಬೊಕ್ಕಸದಿಂದ ತುಂಬಿಕೊಟ್ಟು ಸರ್ಕಾರ ರೈತನ ನೆರವಿಗೆ ಬರದೇ ಇದ್ದರೆ ರಾಜ್ಯದಲ್ಲಿ ಮತ್ತೆ ರೈತ ಬೀದಿಗೆ ಇಳಿಯಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುತ್ತಾ, ಸನ್ಮಾನ್ಯ ಅಧ್ಯಕ್ಷಿಣಿಯವರೆ, ಇಷ್ಟೊಂದು ಸಮಯ ಕೊಟ್ಟದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಚೇರ್ಮನ್ :— ಮಾನ್ಯ ಸಹಕಾರ ಮಂತ್ರಿಗಳು

ಶ್ರೀ ಕೆ. ಹೆಚ್. ಪಾಟೀಲ್ :— ಸನ್ಮಾನ್ಯ ಅಧ್ಯಕ್ಷಣಿಯವರೇ...

ಶ್ರೀ ಸಿ. ಬೈರೇಗೌಡ :— ಏನು ಉತ್ತರ ಕೊಡುತ್ತಿದ್ದೀರಾ, ನಾವು ಮಾತನಾಡುವುದು ಬೇಡವೇ.

(ಗೊಂದಲ)

ಚೇರ್ಮನ್ :— ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ನಿಂತುಕೊಂಡು ಮಾತನಾಡಿದರೆ ಯಾರದ್ದೂ ಕೇಳುವುದಿಲ್ಲ. ಎಲ್ಲರೂ ಕೂಡಿ. ಸನ್ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ಈಗ ಮಾತ-ನಾಡಬೇಕು.

ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮೀಣ) :— ಮಾನ್ಯ ಅಧ್ಯಕ್ಷಣಿಯವರೇ, ತಾವು ಗಮನಿಸಿರಬೇಕು. ಈ ವಿಷಯದ ಬಗ್ಗೆ ನಾನು ಹೆಚ್ಚಾಗಿ ಮಾತನಾಡುವುದಿಲ್ಲ. ಸಾಲ ರದ್ದು ಮಾಡಿ ಎಂದು ಯಾರನ್ನೂ ಕೇಳುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮಂತ್ರಿಗಳು) :— ಪ್ರೊಫೆಸರ್ ನಂಜುಂಡಸ್ವಾಮಿಯವರು ಮಾತ-ನಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅವರು ಮಾತನಾಡಬೇಕು. ಅವರು ಮಾತನಾಡಿದರೇ ರೈತರ ಸಮಸ್ಯೆ ಗಳು ಹೊರಗೆ ಬರುವುದು. ಮಾನ್ಯ ಯಡಿಯೂರಪ್ಪನವರ ಭಾಷಣ ಕೇಳಿದೆವು. ಅವರು ಬಹಳ ಲೆಂಥಿಯಾಗಿ ಮಾತನಾಡಿದರು. 10 ಸಾವಿರದವರೆಗಿನ ಸಾಲ ಮನ್ನಾ ಮಾಡಬೇಕೆಂಬ ಸ್ಲೋಗನ್ ಬಿಟ್ಟರೆ ರೈತರ ಸಮಸ್ಯೆ ಬಗ್ಗೆ ರೈತರ ಚಿಂತನೆ ಬಗ್ಗೆ ಏನೂ ಮಾತನಾಡಿದ ಹಾಗೆ ಕಾಣುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :— ನೀವು ಇರಲಿಲ್ಲ. ನೀವು ಏನು ಹೇಳುವುದು ಬೇಜವಾಬ್ದಾರಿ ಯುತವಾದ ಮಾತು ಇದು. ರೈತರ ಬಗ್ಗೆ ಬೇಜವಾಬ್ದಾರಿಯುತವಾದ ಮಾತನಾಡುವುದು ಬಿಟ್ಟುಬಿಡಿ. ದಯವಿಟ್ಟು ರೆಕಾರ್ಡ್ ತೆಗೆದು ನೋಡಿರಿ. ನೀವು ಲೂಟಿ ಮಾಡುತ್ತಿದ್ದೀರಿ, ದ್ರೋಹ ಮಾಡುತ್ತಿದ್ದೀರಿ.

(ಗೊಂದಲ)

ಚೇರ್ಮನ್ :— ಎಲ್ಲರೂ ಕುಳಿತುಕೊಳ್ಳಿ. ಸುಮ್ಮನೆ ಎಲ್ಲರೂ ಎದ್ದು ನಿಂತುಕೊಳುತ್ತಿದ್ದೀರಲ್ಲ. ನೀವೂ ಕುಳಿತುಕೊಳ್ಳಿ, ನೀವೂ ಕುಳಿತುಕೊಳ್ಳಿ. ನಾನು ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರನ್ನು ಮಾತ-ನಾಡಲು ಕರೆದಿದ್ದೇನೆ. ಅವರು ಮಾತ್ರ ಭಾಷಣ ಮಾಡಬೇಕು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಯಾರನ್ನು ಕರೆದಿದ್ದೇನೆ ಅವರು ಮಾತನಾಡಬೇಕು, ದಯವಿಟ್ಟು ಬೇರೆ ಯಾರೂ ಮಾತನಾಡಬಾರದು.

ಶ್ರೀ ಕೆ. ಹೆಚ್. ಪಾಟೀಲ್ :— ಯಾರು ಮಾತನಾಡಿದರೂ ತಮ್ಮ ಹೊಣೆಗಾರಿಕೆಯನ್ನು ಅರಿತು ಮಾತನಾಡುತ್ತಾರೆಂದು ನನ್ನ ಭಾವನೆ.

ಆ ದೃಷ್ಟಿಯಿಂದ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ನಂಜುಂಡಸ್ವಾಮಿಯವರು ಮಾತನಾಡಲಿ. ಆದರೆ ತಮ್ಮಲ್ಲಿ ನನ್ನದೊಂದು ಪ್ರಾರ್ಥನೆ ಇದೆ. ಈ ವಿಷಯದ ಬಗ್ಗೆ ಚರ್ಚೆ ಎಷ್ಟು ಹೊತ್ತಿಗೆ ಮುಗಿಯುತ್ತದೆ. ಇವತ್ತು ಆರು ಗಂಟೆಗೋ ಅಥವಾ ನಾಳೆ ಮುಂಜಾನೆ ನಡೆಯುತ್ತದೋ ನಾನಂತೂ ಉತ್ತರ ಕೊಡಲಿಕ್ಕೆ ತಯಾರಿದ್ದೇನೆ. ಯಾವಾಗ ತಾವು ಚರ್ಚೆ ಮುಗಿಸುತ್ತೀರಿ ಆಗ ನಾನು ಉತ್ತರ ಕೊಡುತ್ತೇನೆ. ದಯಮಾಡಿ ಎಷ್ಟು ಹೊತ್ತಿಗೆ ಚರ್ಚೆ ಮುಗಿಯುತ್ತದೆ ಎನ್ನುವುದನ್ನು ಹೇಳಿದರೆ ಒಳ್ಳೆಯದು.

ಶ್ರೀ ಬಿ. ಎಸ್. ಯಡಿಯೂರಪ್ಪ :– ಈಗ ನಾವು ಸದನವನ್ನು ಮುಂದೂಡಿ ಬೇಕಾದರೆ ಈ ಚರ್ಚೆಯನ್ನು 26 ನೇ ತಾರೀಖಿಗೆ ಮುಂದುವರಿಸೋಣ

ಛೇರ್ಮನ್ :– ಈ ಸಬ್ಜೆಕ್ಟ್ ಈಗ ಮುಗಿಯಲೇಬೇಕು.

ಶ್ರೀ ಬಿ. ಎಚ್. ಬನ್ನಿಕೋಡ್ :– ಮಾನ್ಯ ಅಧ್ಯಕ್ಷರೇ, ನಾವು ಚರ್ಚೆಯಲ್ಲಿ ಭಾಗವಹಿಸಿ ಸರ್ಕಾರಕ್ಕೆ ಸಲಹೆ ಕೊಡತಕ್ಕಂಥ ಅವಶ್ಯಕತೆ ಇಲ್ಲ ಎಂದಾದರೆ ಇವತ್ತೇ ಮುಗಿಯಲಿ. ಸರ್ಕಾರದ ತೀರ್ಮಾನ ಈಗಾಗಲೇ ಸಿದ್ಧವಾಗಿದೆ. ಸರ್ಕಾರ ಒಂದು ನಿರ್ಣಯಕ್ಕೆ ಬಂದಿದೆ. ನಾವು ಸಲಹೆಗಳನ್ನು ಕೊಡುವುದರಿಂದ ಪ್ರಯೋಜನ ವಿಲ್ಲವೆಂದು ಅರ್ಥವಾಗುತ್ತದೆ.

ಛೇರ್ಮನ್ :– ಈಗ ಸದನದಲ್ಲಿ ನಿಯಮ 68ರ ಪ್ರಕಾರ ಅಭಿವೃದ್ಧಿ ಚರ್ಚೆಗೆಂದು ಈ ಒಂದು ವಿಷಯ ವನ್ನು ತೆಗೆದುಕೊಂಡು ಅದರ ಮೇಲೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ಮಾತನಾಡಿ ಸವಿಸ್ತಾರವಾಗಿ ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಇದಾದಮೇಲೆ ಮಾನ್ಯ ಸದಸ್ಯರು ಅನೇಕರು ಈ ಚರ್ಚೆಯಲ್ಲಿ ಭಾಗವಹಿಸುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ಸದನ ಇನ್ನೂ ಎಷ್ಟು ಸಮಯ ಕುಳಿತುಕೊಳ್ಳಬೇಕು ಎನ್ನುವ ಬಗ್ಗೆ ನಾನು ಸಭೆಯನ್ನು ಕೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ......

ಛೇರ್ಮನ್ :– ಮಾನ್ಯ ಯಡಿಯೂರಪ್ಪನವರೆ ತಾವು ಮಾತನಾಡಿದ್ದೀರಿ, ಕುಳಿತುಕೊಳ್ಳಿ. ನೀವು ಮಾತೆತ್ತಿದರೆ ಆವೇಶಭರಿತರಾಗಿ ಮಾತನಾಡುತ್ತೀರಿ. ಇಲ್ಲಿ ಆವೇಶ ಪಡಬೇಕಾದ ಆವಶ್ಯಕತೆ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ತಾವು ನಮ್ಮ ಪರವಾಗಿದ್ದೀರಿ ರೈತರ ಪರವಾ-ದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಛೇರ್ಮನ್ :– ತಾವು ಎಲ್ಲವನ್ನೂ ಹೇಳಿದ್ದೀರಿ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಈಗ ಇನ್ನೂ ಯಾರದು ಊಟ ಆಗಿಲ್ಲ, ಆದ್ದರಿಂದ ಈಗ ಸದನ ವನ್ನು ಮುಂದೂಡಿ 26 ನೇ ತಾರೀಖು ಈ ವಿಷಯ ತೆಗೆದುಕೊಳ್ಳೋಣ. ನಾವು ಇವತ್ತು ಬೆಳಿಗ್ಗೆ 9–00 ಗಂಟೆಗೆ ಬಂದು ಕುಳಿತುಕೊಂಡಿದ್ದೇವೆ. ಇನ್ನು ಊಟ ಆಗಿಲ್ಲ......

ಛೇರ್ಮನ್ :– ತಾವು ಕುಳಿತ ಕೊಳ್ಳಿ.

ಶ್ರೀ ಕೆ. ಹೆಚ್. ಪಾಟೀಲ್ :– ಇದ ನಿಯಮ 68ರ ಪ್ರಕಾರ ಅಲ್ಪಕಾಲಾವಧಿ ಚರ್ಚೆ. ಮೊದಲು ನಾವು ಮಾತನಾಡುವಾಗ ಸೆಲ್ಫ ಡಿಸಿಪ್ಲಿನ್ ಇಟ್ಟುಕೊಳ್ಳದಿದ್ದರೆ ಉಳಿದದ್ದನ್ನು ಯಾವ ರೀತಿ ಮಾಡುತ್ತೇವೆ. ನಿಯಮ 68ರ ಪ್ರಕಾರ ಈ ಚರ್ಚೆ ಮಾಡಲು ಒಪ್ಪಿದಮೇಲೆ ನಿಯಮ 68ರ ಪ್ರಕಾರ ಚರ್ಚೆ ಎಷ್ಟು ಹೊತ್ತು ಆಗಬೇಕು ಎನ್ನುವುದನ್ನು ತಾವು ರೆಗ್ಯುಲೇಷನ್ ಮಾಡಿಕೊಳ್ಳಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ :– ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಇನ್ನೂ ಬಹಳ ಜನ ಮಾನ್ಯ ಸದಸ್ಯರು ಭಾಗವಹಿಸುವವರಿದ್ದಾರೆ. ನಾವು ಮಾತನಾಡಬೇಕೆಂದು ನಮ್ಮ ಪಕ್ಷದ ವಿಪ್‌ಗೆ ಹೇಳಿದ್ದೇವೆ. ಅವರು ತಮಗೆ ಬರೆದು ಕಳುಹಿಸಿದ್ದಾರೆ. ಆದ್ದರಿಂದ ನಾವು ಮಾತನಾಡಬೇಕಾಗುತ್ತದೆ. ದಯವಾಡಿ ತಾವು ರೈತರ ವಿಚಾರ ಬಂದ್ಗಾಗ, ರೈತರ ಸಾಲ ಮನ್ನಾ ವಿಚಾರ ಬಂದಾಗ ಪ್ಯಾರಾ ಮೀಟರ್ ಫಿಕ್ಸ್ ಮಾಡಬೇಡಿ. ಸಾಕಷ್ಟು ಅವಕಾಶ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ಪತ್ರಿಕೆಯವರು ಊಟ ಮಾಡಬೇಕು ಅವರು ಸಹ ಬೆಳಿಗ್ಗೆ 9–00 ಗಂಟೆಗೆ ಬಂದಿರುತ್ತಾರೆ. ನಾವು ಸಹ ಊಟ ಮಾಡಬೇಕು. ಪತ್ರಿಕೆಯವರು ಊಟ ಮಾಡಲು ಹೊರಗಡೆ ಹೋದರೆ ಅವರು ಇಲ್ಲ ಎಂದು ನಾವು ಹೇಳುತ್ತೇವೆ...

ಶ್ರೀ ಎಲ್. ಆರ್. ಶಿವರಾಮೇಗೌಡ :– ಬೇರೆ ವಿಚಾರಗಳು ಬಂದಾಗ ಈ ಸದನದ ಸಮಯ ಹಾಳು ಮಾಡುತ್ತೇವೆ. ಆದರೆ ರೈತರ ವಿಷಯ ಬಂದಾಗ ಸ್ವಲ್ಪ ಹೆಚ್ಚಿಗೆ ಸಮಯ ಕೊಡುವುದಿಲ್ಲವೆಂದರೇನು ?

ಶ್ರೀ ಕೆ. ಬಿ. ಕೋಳಿವಾಡ್ :– ಮಾನ್ಯ ಅಧ್ಯಕ್ಷರೇ, ಟೈಮ್ ಫಿಕ್ಸ್ ಮಾಡುವ ಅಧಿಕಾರ ತಮಗೇ ಇದ್ದೆ

ಛೇರ್ಮನ್ :– ಈ ವಿಷಯವನ್ನು ಇವತ್ತೇ ಮುಗಿಸಬೇಕು, ಊಟಕ್ಕೆ ಮುಂಚೆ ಮುಗಿಸಬೇಕು. ಇದಕ್ಕೆ ತಮ್ಮೆಲ್ಲರ ಸಹಕಾರ ಅತ್ಯಗತ್ಯ.

ಶ್ರೀ ಎಂ. ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರೊಫೆಸರ್‌ರವರು ಈಲ್ಡ್ ಆಗಿದ್ದಾರೆ. ಈ ಸದನದಲ್ಲಿ ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ, ಅದು ಒಬ್ಬರಿಗೆ ಮಾತ್ರ ಸೀಮಿತವಲ್ಲ ಎಂದು ನಾನು ಮಾನ್ಯ ಸದಸ್ಯರಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹಿರಿಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ಇಷ್ಟು ಆವೇಶದಿಂದ ಮಾತನಾಡುವುದರಿಂದ ಪ್ರಯೋಜನವಾಗುವುದಿಲ್ಲ ಅವರಲ್ಲಿ ನಾನು ಮತ್ತೊಮ್ಮೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ರೈತರು ಇರಬಹುದು. ಆದರೆ ನಾವು ಹುಟ್ಟು ರೈತರು ಇದ್ದೇವೆ. ಹತ್ತು ಸಾವಿರ ರೂಪಾಯಿ ಮನ್ನಾ ಮಾಡಬೇಕೆಂಬ ಮನೋಭಾವದಲ್ಲಿ ಬೆಳೆಯುವರಲ್ಲ. ಇವತ್ತು 10 ಸಾವಿರ ರೂಪಾಯಿ ರೈತರ ಸಾಲ ಮನ್ನಾ ಮಾಡಿದರೆ ಹಳ್ಳಿಗಳಲ್ಲಿರತಕ್ಕಂಥ ಸೊಸಾಯಿಟಿಗಳಿಗೆ ಇವತ್ತು ಕೀಲಿ ಹಾಕಿ, ಸಹಕಾರ ಸಂಘಗಳನ್ನು ಮುಚ್ಚಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಕೆ. ಹೆಚ್. ಪಾಟೀಲರು ತಮ್ಮ ಅಭಿಪ್ರಾಯ ಹೇಳಬೇಕು. ಪರಿಸ್ಥಿತಿ ಇವತ್ತು ಏನಾಗಿದೆ ಎಂದರೆ, ಈ 10 ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡುವುದನ್ನು ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ಒಪ್ಪುವುದಿಲ್ಲವೆಂದು ನನಗನಿಸುತ್ತದೆ. ನಾವು ಕೇಳುವುದೇನೆಂದರೆ, ಸರಿಯಾದ ವಿಷಯವನ್ನು ಪ್ರಸ್ತಾಪ ಮಾಡೋಣ. ರೈತರಿಗೆ ಏನು ಬೇಕಾಗಿದೆ ಅದನ್ನು ಹೇಳೋಣ. ಆದರೆ ಹೇಳುವುದಕ್ಕೆ ಒಂದು ಪದ್ಧತಿ ಇದೆ. ಈ ಸದನ ಒಬ್ಬರಿಗೆ ಮಾತ್ರ ಸೀಮಿತವಾಗಿಲ್ಲವೆನ್ನತಕ್ಕಂಥಾದ್ದನ್ನು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

1–40 ಪಿ. ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ :– ನಾನು ಒಬ್ಬನೇ ಮಾತನಾಡುತ್ತಿದ್ದೇನೆ ಎಂದು ಹೇಳಿದ್ದೇನೆಯೇ. ರೈತರ ಬಗ್ಗೆ ಮಾತನಾಡುವುದಕ್ಕೆ ಬೇರೆಯವರು ಸಿದ್ಧವಿಲ್ಲ. ಇದರ ಬಗ್ಗೆ ಅಡ್ಜರ್ನಮೆಂಟ್ ಮೋಷನ್‌ಗೆ ಸಹಿ ಮಾಡುವುದಕ್ಕೆ ಯಾರು ಸಿದ್ಧರಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಇದೆ. ನಿಯಮ 68ರ ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ ಒಂದು ತಾಸಿನ ತನಕ ಚರ್ಚೆ ಮಾಡಬೇಕೆಂದು ಇದೆ. ಈಗಾಗಲೇ ಎರಡು ತಾಸು ಚರ್ಚೆಯಾಗಿದೆ. ಮಾನ್ಯ ನಂಜುಂಡಸ್ವಾಮಿಯವರನ್ನು ಇದರ ಬಗ್ಗೆ ಕೇಳೋಣ. ಅವರು ಶಾಸ್ತ್ರೋಕ್ತವಾಗಿ ಹೇಳುತ್ತಾರೆ. ನಿಯಮ 68ರ ಪ್ರಕಾರ ನಾವು ನಿಶ್ಚಿತವಾದ ಟೈಮ್ ಒಳಗೆ ಮುಗಿಸಬೇಕು ಇಲ್ಲದಿದ್ದರೆ ಅನಾವಶ್ಯಕವಾಗಿ ಎಲ್ಲರಿಗೂ ತೊಂದರೆಯಾಗುವ ಹಾಗೆ ಮಾಡುವುದು ಸರಿಯಲ್ಲ.

† ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಮಾನ್ಯ ಸಹಕಾರ ಮಂತ್ರಿಗಳು ನಾನು ರೈತರ ಸಮಸ್ಯೆಯನ್ನು ಶಾಸ್ತ್ರೋಕ್ತವಾಗಿ ಹೇಳುತ್ತೇನೆಂದು ಈಗ ತಾನೆ ಹೇಳಿದ್ದಾರೆ. ಶಾಸ್ತ್ರೋಕ್ತವಾಗಿ ಹೇಳುತ್ತೇನೆ. ಮೊದಲನೆ ವಿಷಯ ನಾನು ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ನಾವು ಇಲ್ಲಿ ಬಂದಿರುವಂಥ ಎಲ್ಲರೂ ರೈತರ ಮಕ್ಕಳೆಂದು, ಮೊದಲನೇ ಅಧಿವೇಶನದಿಂದ ಎಲ್ಲಾ ಮಾನ್ಯ ಸದಸ್ಯರೂ ಹೇಳುತ್ತಲೇ ಇದ್ದಾರೆ. ಆದರೆ, ಆ ಒಂದು ಹೇಳಿಕೆಯನ್ನು ಶಾಸ್ತ್ರೋಕ್ತವಾಗಿ ಸ್ವಲ್ಪ ಪರೀಕ್ಷೆ ಮಾಡಿದರೆ ನಮ್ಮ ರೈತರ ಮಕ್ಕಳ ಸ್ವಲ್ಪ ಗೊಂದಲದಲ್ಲಿ ಇದ್ದಾರೆ ಎಂದು ನನಗನ್ನಿಸುತ್ತದೆ. ನಾನು ಬಂದಾಗಿನಿಂದ ಹೇಳುತ್ತಿರುವಂಥ ಮಾತು, "ರೈತರ ಯಾವತ್ತೂ ಬೇಡಿದವರಲ್ಲ, ರೈತರ ಯಾವತ್ತೂ ನೀಡಿದವರು." ಆದ್ದರಿಂದ, ಇಲ್ಲಿ ಭಿಕ್ಷೆ ಕೇಳುವಂಥ ಪ್ರಶ್ನೆ ಬರುವುದಿಲ್ಲ. ಈ ದೇಶದ ರೈತರು ಅದರಲ್ಲೂ ವಿಶೇಷವಾಗಿ ನಮ್ಮ ರಾಜ್ಯದ ರೈತರು ಹೋರಾಟ ಮಾಡುತ್ತಿರುವುದು ಅವರ ಹಕ್ಕಿಗಾಗಿ. ಸಂವಿಧಾನದಲ್ಲಿ ನಾವು ಯಾವ ಹಕ್ಕುಗಳನ್ನು ಬರೆದಿದ್ದೇವೋ ಆ ಹಕ್ಕುಗಳಿಗೋಸ್ಕರ ಹೋರಾಟ ಮಾಡುತ್ತಿದ್ದಾರೆ. ಅವರ ಪರವಾಗಿ ಬಂದಂಥ ನನ್ನಂಥ ಸದಸ್ಯರು ಇಲ್ಲಿ ಹಕ್ಕನ್ನು ಬೇಡುವವರಲ್ಲ. ನಾನು ರೈತರ ಪರವಾಗಿ ಈ ಸದನದೊಳಗೆ ಹಕ್ಕನ್ನು ಬೇಡುವವನಲ್ಲ. ಆ ಹಕ್ಕನ್ನು ಎಲ್ಲಿ ಕಸಿದುಕೊಳ್ಳಬೇಕೋ ಅದನ್ನು ಕಸಿದುಕೊಳ್ಳುವ ಕಾರ್ಯಕ್ರಮ ನನ್ನದು, ಅದು ಸದನದ ಹೊರಗಡೆ ಇದೆ. ಅದು ಬೇರೆ ವಿಚಾರ. ರೈತರ ಪರವಾಗಿ ಸದನದ ಒಳಗೆ ನಾನು ಏನು ಮಾಡಬಹುದೆಂದರೆ, ಈ ರೈತರ ಮಕ್ಕಳು ಎಂದು ಯಾರು ಹೇಳಿಕೊಳ್ಳುತ್ತಾರೆ, ಈ ಸದನದ ಸದಸ್ಯರು. ಅವರು ಆತ್ಮಸಾಕ್ಷಿಗೆ ಮನವಿ ಮಾತಾ ಕೊಳ್ಳಬಹುದಷ್ಟೇ. ನಿಮ್ಮ ಬೇರುಗಳು ನಿಮಗೆ ನೆನಪಿದೆಯೇ ಅಥವಾ ನಿಮ್ಮ ಬೇರುಗಳನ್ನು ಮರೆತಿದ್ದೀರಾ ಎನ್ನುವುದು ನನ್ನ ಮನವಿ. Whether you are remenmbering your roots ? ಮತ್ತೆ ಆ ಬೇರಿಗೆ ಯಾವ ಸ್ಥಾನಮಾನ, ಯಾವ ಗೌರವ ದೊರಕಿಸಿಕೊಡಬೇಕೆಂಬ ಬಗ್ಗೆ ನಿಮಗೆ ಕಾಳಜಿ ಇದೆಯೇ ? ಇದನ್ನೇ ನಾನು ಕೇಳುತ್ತಿರುವುದು; ನಿಮ್ಮ ಬೇರಿಗೆ, ನಿಮಗೆ ವೋಟ್ ಕೊಟ್ಟು ಕಳುಹಿಸಿದವರಲ್ಲ, ನಿಮ್ಮನ್ನು ಈ ಜಗತ್ತಿಗೆ ಕಳುಹಿಸಿಕೊಟ್ಟರಲ್ಲಾ ನಿಮ್ಮ ತಂದೆ ತಾಯಿಗಳು, ಆ ಬೇರುಗಳು, ಅವರಿಗೆ ಸಂವಿಧಾನದಲ್ಲಿ ಸಿಗಬೇಕಾದಂಥ ಸ್ಥಾನ ಮಾನ ದೊರಕಿಸಿಕೊಡತಕ್ಕಂಥ ಶ್ರದ್ಧೆ, ಶಿಸ್ತು ನಿಮ್ಮಲ್ಲಿ ಇದೆಯೇ ? ಇದು ರೈತರ ಪರವಾಗಿ ನಾನು ಕೇಳುವ ಪ್ರಶ್ನೆ. ಮುಖ್ಯಮಂತ್ರಿಗಳಿಂದ ಹಿಡಿದು ಇಡೀ ಸಚಿವ ಸಂಪುಟ ಮತ್ತು ಈ ಸದನದ

ಎಲ್ಲಾ ಸದಸ್ಯರಿಗೆ ಕೇಳುವಂಥ ಪ್ರಶ್ನೆ ಇದೊಂದೆ. ಇದಕ್ಕೆ ಕಾರಣ ಇಷ್ಟೆ. ಸಂವಿಧಾನದಲ್ಲಿ ಸಮಾನತೆ ಎನ್ನು-ವಂತಹ ಒಂದು ಹಕ್ಕನ್ನು ನಾವು ಬರೆದಿದ್ದೇವೆ. ನಿಮ್ಮ ಬೇರುಗಳಿಗೆ ಆ ಸಮಾನತೆ ದೊರಕಿಸುವಂತಹ ಒಂದು ಕೆಲಸವನ್ನು ಮಾಡುತ್ತೀರಾ ? ಇದನ್ನು ಹಲವಾರು ಚರ್ಚೆಗಳಲ್ಲಿ ವಿವರವಾಗಿ ನಾವು ಚರ್ಚೆ ಮಾಡಿದ್ದೇವೆ. ಆದರೆ ಈ ರೈತರ ಮಕ್ಕಳು, ರೈತನಿಗೆ ಸಾಲ ಬರುವುದಕ್ಕೆ ಕಾರಣಗಳೇನು ಎನ್ನುವುದನ್ನು ಚರ್ಚೆ ಮಾಡುವಷ್ಟು ಧೈರ್ಯವನ್ನು ತೋರಿಸುತ್ತಿಲ್ಲ. ಆ ಕಾರಣದಿಂದ ರೈತರ ಮಕ್ಕಳು ಎಂದು ಈ ಸದನಕ್ಕೆ ಯಾರು ಬಂದಿದ್ದಾರೆ, ಅವರ ಬಗ್ಗೆ ರೈತರಿಗೆ ಅನುಮಾನಗಳು ಪ್ರಾರಂಭ ಆಗಿದೆ. ಏನು ಅನುಮಾನ ಅಂದರೆ, ರೈತರಿಗೆ ವಿರುದ್ಧವಾದ ಯಾವ ಯಾವ ಕಾನೂನುಗಳು ಇವೆಯೋ, ಬ್ರಿಟೀಷರ ಕಾಲದಿಂದ ಯಾವ ಯಾವ ಕಾನೂನುಗಳು ಉಳಿದು ಕೊಂಡು ಬಂದಿವೆಯೋ, ಆ ಕಾನೂನುಗಳನ್ನು ರಕ್ಷಣೆ ಮಾಡಿಕೊಂಡು ಹೋಗುತ್ತಿರುವ ಈ ಸರ್ಕಾರಗಳು, ಭಾರತೀಯ ಸರ್ಕಾರಗಳೋ ಅಥವಾ ಆಂಗ್ಲಗ್ಲೋ ಇಂಡಿಯನ್ ಸರ್ಕಾರಗಳೋ, ಸ್ವಾತಂತ್ರ್ಯ ಬಂದ ಮೇಲೆ ಭಾರತೀಯ ಕಾನೂನು ಸಿದ್ಧಾಂತ ಜಾರಿಗೆ ಬಂದಿದೆಯೋ ಅಥವಾ ಆಂಗ್ಲೋ ಇಂಡಿಯನ್ ಜುರಿಸ್‌ಫ್ರುಡ್‌ನ್ಸ್ ಮುಂದುವರೆದಿದೆಯೋ ಎಂದು ನಮಗೆ ಒಂದು ಸ್ಪಷ್ಟವಾಗಿದೆ. ನಮ್ಮ ದೇಶದಲ್ಲಿ ಈಗ ಇರುವಂತಹ ಕಾನೂನು ವ್ಯವಸ್ಥೆ ಭಾರತೀಯ ಕಾನೂನು ಸಿದ್ಧಾಂತದ ಮೇಲೆ ಅಲ್ಲ, It is operating on Anglo Indian JJurisprudence ಎಂದು ಸ್ಪಷ್ಟವಾಗಿದೆ. ಒಂದೊಂದೇ ಉದಾಹರಣೆ ಕೊಡಬಹುದು. ಬೆಲೆ ನಿಗದಿ ಬಗ್ಗೆ ಮೊನ್ನೆ ತಾನೇ ಇಲ್ಲಿ ಹಾಜರು ಇರುವಂತಹ ಮಾನ್ಯ ಸಹಕಾರ ಸಚಿವರ ಜೊತೆ ಕಬ್ಬಿನ ಬೆಲೆ ಬಗ್ಗೆ ನಡೆದ ಮಾತುಕತೆಯಲ್ಲಿ ನಾನು ಸಹ ಭಾಗವಹಿಸಿದ್ದೆ. ರೈತರ ಮಕ್ಕಳಾದ ಮಾನ್ಯ ಸಹಕಾರ ಸಚಿವರು ಒಂದು ಟನ್ ಕಬ್ಬು ಬೆಳೆಯಬೇಕಾದರೆ ವ್ಯವಸಾಯದ ಖರ್ಚು ಎಷ್ಟು ಬರುತ್ತದೆ ಎಂದು ಗೊತ್ತಿರುವವರು. ಆದರೆ ಕಬ್ಬಿನ ಬೆಲೆಯನ್ನು ನಿಗದಿ ಮಾಡುವಾಗ ಆ ಅಂಶವನ್ನು ಸಂಪೂರ್ಣವಾಗಿ ಮರೆತು ನಾವು ಬೆಲೆಯನ್ನು ನಿಗದಿ ಮಾಡುತ್ತಿದ್ದೇವೆ. ಇಂತಹ ಒಂದು ಧೋರಣೆಯನ್ನು ಯಾವ ಆಧಾರದ ಮೇಲೆ ನೀವು ಸಮರ್ಥನೆ ಮಾಡಿಕೊಳ್ಳುತ್ತೀರಿ ?

Even in calculating the cost of cultivation of crop, why are you hesitationng to adopt the same methodology that is adopted in endustry or Commerence ? ನೀವು ಏಕೆ ಹೆಸಿಟೇಟ್ ಮಾಡುತ್ತಿದ್ದೀರಿ ? ಇಷ್ಟು ದಿವಸ ನಡೆಯಿತು. ಆದರೆ ಈಗ ರೈತರಿಗೆ ಪ್ರಜ್ಞೆ ದಬಂದಿದೆ. ತಿಳುವಳಿಕೆ ಬಂದಿದೆ. ನೀವು ತಿಳುವಳಿಕೆ ಇಲ್ಲದವರು ಎಂದು ಅವನು ತಿಳಿದಿಲ್ಲ. ನೀವು ಸರ್ಕಾರ ನಡೆಸುತ್ತಿರು-ವವರು ತಿಳುವಳಿಕೆ ಇರುವವರೇ, ತಿಳುವಳಿಕೆ ಇದ್ದೂ ಸಹ ಈ ಕೆಲಸ ಮಾಡುತ್ತಿದ್ದೀರಿ ಎನ್ನುವುದು ಅವನಿಗೆ ಗೊತ್ತಾಗುತ್ತಿದೆ. ಅದಕ್ಕೆ ಅವನಿಗೆ ಅನುಮಾನ ಬಂದಿರುವುದು.

Whether this is Anglo-Indian Government or a Native Government ಎಂದು ಅನುಮಾನಗಳು ಬರುತ್ತಾ ಇವೆ. ನಾವು ಈ ಸದನದಲ್ಲಿರುವಂತಹ ಶಾಸಕರುಗಳು, ರೈತನ ಮಕ್ಕಳೋ ಅಥವಾ ರೈತ ವಿರೋಧಿ ಕಾನೂನಿಗಳಿಗೆಲ್ಲಾ ಘೋಷಣೆ ಕೊಡುತ್ತಿರುವವರೋ ರೈತರನ್ನು ಯಾರು ಮೋಸ ಮಾಡುತ್ತಿದ್ದಾರೆ, ಆ ದಲ್ಲಾಳಿಗಳ ಮಕ್ಕಳೋ ಎಂದು ಅನುಮಾನ ಬಂದಿದೆ. ಈ ಅನುಮಾನವನ್ನು ನಾವು ನಿವಾರಣೆ ಮಾಡಬೇಕು.

The farmrr is looking at us as children of Dalals, as the children of industrialists who are looting the farmers. ಮೊನ್ನೆ ನಡೆದ ಕಬ್ಬಿನ ಬೆಲೆ ನಿಗದಿ ಮಾಡುವ ಸಭೆಯ ನಂತರ ನನಗೆ ಅನುಮಾನ ಬರುತ್ತಿದೆ. ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಯಿಂದ ಒಂದು ನೂರು ಕಿಲೋಮೀಟರ್ ಆಚೆಗೆ ಹೋದರೆ ಒಂದು ಟನ್ ಕಬ್ಬಿಗೆ 620 ರೂಪಾಯಿಯನ್ನು ನಮಗೆ ಕೊಡುತ್ತಾರೆ. ಮಹಾರಾಷ್ಟ್ರದ ಕಬ್ಬಿಗೂ ನಮ್ಮ ಕಬ್ಬಿಗೂ ಏನು ವ್ಯತ್ಯಾಸ ಇಲ್ಲ. 120 ಕಿ. ಮೀ. ದೂರದ ಸಾಗಾಣಿಕೆ ವೆಚ್ಚವನ್ನು ಕೂಡ ಆ ಕಾರ್ಖಾನೆಯವರು ಕೊಡುತ್ತಾರೆ ಎಂಬುದು ನಿಮಗೆ ಗೊತ್ತಿದೆಯೋ ? ಆದರೆ ನಿಮಗೆ ಆ ಖಾಸಗಿ ಕಾರ್ಖಾನೆಯ ಮಾಲೀಕರಿಗೆ, ರೈತರಿಗೆ 620 ರೂಪಾಯಿ ಗಳ ದರವನ್ನು ಕೊಡಿ ಎಂದು ಹೇಳುವಂಥ ಧೈರ್ಯ ಇಲ್ಲ ಎಂದು ನಾನು ತಿಳಿದಿಲ್ಲ. ನಿಮ್ಮ ಮೇಲೆ ನನಗೆ ಅನುಮಾನ ಬರುತ್ತಾ ಇದೆ. ಖಾಸಗಿ ಕಾರ್ಖಾನೆಗಳ ಪರವಾಗಿ ಈ ಸರ್ಕಾರಗಳು ಕೆಲಸ ಮಾಡುತ್ತಿವೆಯೋ ಅಥವಾ ರೈತರ ಪರವಾಗಿ ಕೆಲಸ ಮಾಡುತ್ತಾ ಇದೆಯೋ ಎಂಬ ಅನುಮಾನ ಈಗಾಗಲೇ ರೈತರುಗಳಿಗೆ ಬಂದಿದೆ.

ಈವೊತ್ತು ನಾನು ಈ ಸದನದಲ್ಲಿ ಒತ್ತಾಯ ಮಾಡುತ್ತಾ ಇದ್ದೇನೆ. ಆರ್ಟಿಕಲ್ 14 ರಿಂದ ನನ್ನ ಮಾತನ್ನು ಪ್ರಾರಂಭ ಮಾಡಿದ್ದೆ, ಸಮಾನತೆ ಕುರಿತು ಹೇಳಿದೆ. ಈಗ ಆರ್ಟಿಕಲ್ 301 ಕ್ಕೆ ಬರುತ್ತೇನೆ. ನಾನು ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳ ಕಬ್ಬು ಬೆಳೆಗಾರರ ಪರವಾಗಿ ತಮ್ಮಲ್ಲಿ ನಾನು ಒತ್ತಾಯ ಮಾಡುತ್ತಾ ಇದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಆರ್ಟಿಕಲ್ 301ರ ಪ್ರಕಾರ, ಬೆಳೆದಂಥ ವಸ್ತುಗಳನ್ನು ಈ ದೇಶದಲ್ಲಿ ಎಲ್ಲಿಗೆ ಬೇಕಾದರೂ, ಸಾಗಾಣಿಕೆ ಮಾಡುವಂಥ ಸ್ವಾತಂತ್ರ್ಯ ಈ ದೇಶದ ಎಲ್ಲ ಪ್ರಜೆಗಳಿಗೆ ಇದೆ. ಸಂವಿಧಾನದ ಆರ್ಟಿಕಲ್ 301 ಅನ್ನು ದಯವಿಟ್ಟು ತೆಗೆದು ನೋಡಬೇಕು. ಬಿಜಾಪುರದ ಕಾರ್ಖಾನೆ.

ಸಮೀರವಾಡಿ ಸಕ್ಕರೆ ಕಾರ್ಖಾನೆಗೆ ಅಥವಾ ಉಗಾರ ಸಕ್ಕರೆ ಕಾರ್ಖಾನೆಗೆ ಅವರು ಕೇಳಿದ ಬೆಲೆಗೆ ನಾನು ಕಬ್ಬು ಕೊಡುವುದಕ್ಕೆ ತಯಾರಿಲ್ಲ. ನಾನು ಬೆಳೆದುದನ್ನು ಏನು ಬೇಕಾದರೂ ಮಾಡುವ ಸ್ವಾತಂತ್ರ್ಯ ನನಗಿದೆ. ನಾನು ಬೆಳೆದ ಕಬ್ಬನ್ನು ಒಣಗಿಸಿ ಅದರಲ್ಲಿ ನೀರು ಕಾಯಿಸಿ ಸ್ನಾನ ಮಾಡುವ ಸ್ವಾತಂತ್ರ್ಯ ನನಗಿದೆ. ಅಥವಾ ಕಾಶ್ಮೀರದ ಪ್ರದೇಶಕ್ಕೆ ಬೇಕಾದರೂ ತೆಗೆದುಕೊಂಡು ಹೋಗಿ ಅಲ್ಲಿ ಮಾರಾಟ ಮಾಡುವಂಥ ಸ್ವಾತಂತ್ರ್ಯ ಕೂಡ ಸಂವಿಧಾನದಲ್ಲಿ ನನಗೆ ಇದೆ. ಆ ಒಂದು ಹಕ್ಕನ್ನು ನಾನು ಕೇಳುತ್ತಾ ಇದ್ದೇನೆ. ಕಬ್ಬಿಗೆ ಬೆಲೆ ಕೊಡಿ ಎಂದು ನಾನು ಇಲ್ಲಿ ಭಿಕ್ಷೆಯನ್ನು ಬೇಡುತ್ತಾ ಇಲ್ಲ.

I am demanding that I should be allowed to enjoy the benefit of the open market Why are you derying it.

ನಿಮ್ಮನ್ನು ಹುಟ್ಟಿಸಿದಂಥ ತಂದೆ–ತಾಯಿಗಳಿಗೆ ಏಕೆ ಮೋಸ ಮಾಡುತ್ತಾ ಇದ್ದೀರಿ ? ಸಂವಿಧಾನದತ್ತ ಹಕ್ಕನ್ನು ನೀವು ನಿಮ್ಮ ತಂದೆ–ತಾಯಿಗಳಿಗೆ ದೊರಕಿಸಿಕೊಡಿ ಎಂದು ನಾನು ಈ ಶಾಸನ ಸಭೆಯಲ್ಲಿ ಎಲ್ಲರಿಗೂ ಕೇಳಿ-ಕೊಳ್ಳುತ್ತಾ ಇದ್ದೇನೆಯೇ ಹೊರತಾಗಿ ಮತ್ತೇನೂ ಅಲ್ಲ. ನಿಗದಿ ಮಾಡುವುದರಲ್ಲಿ ಬೇರೆ ಕ್ಷೇತ್ರಗಳಲ್ಲಿ ಯಾವ ಮಾಪನ ಇಟ್ಟಿದ್ದೀರಿ ಆ ಮಾಪನವನ್ನು ಕೃಷಿಕ್ಷೇತ್ರಕ್ಕೂ ಅಳವಡಿಸಬೇಕು. ಬೇರೆ ಕ್ಷೇತ್ರಗಳ ಚಟುವಟಿಕೆಗಳಿಗೆ ಸಂವಿಧಾನದಲ್ಲಿ ಏನೇನು ಸ್ವಾತಂತ್ರ್ಯ ಇದೆ ಆ ಸ್ವಾತಂತ್ರ್ಯವನ್ನ ಕೃಷಿ ಕ್ಷೇತ್ರಕ್ಕೂ ದೊರಕಿಸಿಕೊಡಬೇಕು. ಅಂಥ ತಿದ್ದುಪಡಿಗಳನ್ನು ಇಲ್ಲಿ ಮಾಡಬೇಕು. ಮಾನ್ಯ ಕೃಷಿ ಸಚಿವರು ಈ ಬಗ್ಗೆ ಸ್ವಲ್ಪ ವಿವರವಾಗಿ ಮಾತನಾಡಬೇಕೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ಈ ಎರಡು ಕೆಲಸ ಮೊದಲು ಆಗಲಿ ಎಂದು.

Scientific calculation of the cost of cultivation This is inmpartant using the same The same cost-swing Mathodalogy that is beHng used in industry

ಆಗ ಮಾತ್ರ Party Price ಸಿಗುವುದು. ಆಗ ಸಮಾನತೆ ಸಿಗುತ್ತದೆ. ಇನ್ನೊಂದು ಕೆಲಸವನ್ನು ನಾವು ಮಾಡಬೇಕಾಗಿದೆ.

Reducing the area of druy cultivation and reducing the number of people dependent on agriculture.

ಅದನ್ನು ಮಾಡದೆ ನಿಮಗೆ ಗ್ರಾಮಾಂತರಗಳ ಸಮಸ್ಯೆಗಳನ್ನು ಬಗೆ ಹರಿಸುವುದಕ್ಕೆ ಸಾಧ್ಯ ಆಗುವುದಿಲ್ಲ. ಒಣ ಬೇಸಾಯದ ಪ್ರದೇಶವನ್ನು ಕಡಿಮೆ ಮಾಡುವುದು, ಬೇಸಾಯದ ಮೇಲೆ ಅವಲಂಬನೆ ಇರುವಂಥ ಜನಸಂಖ್ಯೆಯನ್ನು ಕಡಿಮೆ ಮಾಡುವುದು ಮುಂತಾಗಿ ಇದನ್ನು ನಾನು ಬಹಳ ಸಂಕ್ಷಿಪ್ತವಾಗಿ ಹೇಳುತ್ತಾ ಇದ್ದೇನೆ. ಇದಕ್ಕಾಗಿ ಒಂದು ವಿವರವಾದ ಕಾರ್ಯಕ್ರಮ ಹಾಕಬೇಕು.

Reducing the the area of dry cultivation and reducing the populatoin dependent on agriculture.

ಈ ಕೆಲಸವನ್ನು ಮಾಡದ ಹೊರತ , ನೀವು ಹಳ್ಳಿಯಿಂದ ಬಡತನವನ್ನು ಆಚೆಗೆ ಕಳುಹಿಸುವುದಕ್ಕೆ ಆಗುವುದಿಲ್ಲ. ಇದನ್ನು ಮಾಡಬೇಕಾದರೆ ರಾಜ್ಯದ ಸಂಪನ್ಮೂಲಗಳು ಏನೇನು ಇವೆ ಅದರಲ್ಲಿ ಶೇಕಡಾ 75 ರಷ್ಟು ಭಾಗ ಗ್ರಾಮಾಂತರ ಪ್ರದೇಶಕ್ಕೆ ಸಿಗಬೇಕೆಂಬ ಒಂದು ಪಾಲಿಸಿ ನಿರ್ಣಯ ಆಗಬೇಕು. ಸರ್ಕಾರದ ನೀತಿಯಾಗಬೇಕು. ಯಾವ್ಯಾವ ಸಂಪನ್ಮೂಲಗಳಿವೆ ಅದು ನೈಸರ್ಗಿಕ ಇರಬಹುದು, ಬೇರೆ ಇರಬಹುದು, ಆ ಎಲ್ಲ ಸಂಪನ್ಮೂಲಗಳು ಶೇಕಡ 75 ಭಾಗ ಗ್ರಾಮೀಣ ಪ್ರದೇಶದಲ್ಲಿರುವ ಸ್ವತ್ತು ಎಂದು ಸರ್ಕಾರಿ ನೀತಿ ಅಳವಡಿಸಿದರೆ ರೈತನ ಸಮಸ್ಯೆ ಬಗೆಹರಿಸಬಹುದು, ಬರೀ ಸಾಲದ ಸಮಸ್ಯೆಯಲ್ಲ, ಒಟ್ಟಾರೆ ಸಮಸ್ಯೆಯನ್ನು ಬಗೆಹರಿಸಬಹುದು. ಇದರ ಬಗ್ಗೆ ಸರ್ಕಾರ ಗಮನಕೊಡಬೇಕು. ಮತ್ತೊಂದುಸಾರಿ ಅವರಿಗೆ ನಾನು ಬೇರನ್ನು ನೆನಪು ಮಾಡಿಕೊಡಬೇಕು. ನಿಮ್ಮ ಬೇರುಗಳನ್ನು ಮರೆಯಬೇಡಿ; ನಿಮ್ಮನ್ನು ಯಾರು ಈ ಜಗತ್ತಿಗೆ ಕಳಿಸಿಕೊಟ್ಟರು ಅವರಿಗೆ ಸಂವಿಧಾನದಲ್ಲಿ ಎಂತಹ ಗೌರವ ಸ್ಥಾನವನ್ನು ದೊರಕಿಸಿಕೊಡಬೇಕೋ ಅದನ್ನು ದೊರಕಿಸಿಕೊಡುವುದು ನಿಮ್ಮ ಕರ್ತವ್ಯವೆಂದು ಹೇಳಿ, ಇನ್ನು ನಾಲ್ಕು ವರ್ಷ ಈ ಸದನದಲ್ಲಿ ಈ ವಿಷಯದ ಬಗ್ಗೆ ಮಾತನಾಡುವುದಿಲ್ಲವೆಂದು ಹೇಳುತ್ತೇನೆ, ನಮಸ್ಕಾರ.

† ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರ) .– ಮಾನ್ಯ ಅಧ್ಯಕ್ಷಿಣಿಯವರೆ, ರೈತರ ಸಾಲ ಮನ್ನಾ ವಿಚಾರದಲ್ಲಿ ಈಗಾಗಲೇ ವಿವರಗಳನ್ನು ಸಾಕಷ್ಟು ಹೇಳಿದ್ದಾರೆ. ಬೇರುಗಳನ್ನು ಮರೆತ ಜನ ತಂದೆ ತಾಯಿಗಳನ್ನು ಮರೆತ ಹಾಗೆ ಎಂದು ಮಾನ್ಯ ನಂಜುಂಡಸ್ವಾಮಿಯವರು ಹೇಳಿದರು. ನಾನು ಕೆಲವೊಂದು ವಿಚಾರಗಳನ್ನು ಸೂಚಿಸಲಿಕ್ಕೆ ಪ್ರಯತ್ನಿಸುತ್ತೇನೆ. ರೈತರ ಸಾಲ ಮನ್ನಾ ಏಕೆ ಮಾಡಬೇಕೆಂದು ಅನೇಕರು ಕೇಳುತ್ತಾರೆ ರೈತ ನಿರ್ಲಕ್ಷ್ಯದಿಂದ, ತನ್ನ ಕರ್ತವ್ಯ ಚ್ಯುತಿಯಿಂದ ಸಾಲಗಾರನಾಗಿದ್ದಾನೆ, ಆದ್ದರಿಂದ ಸಾಲ ಮನ್ನಾ ಮಾಡುವ ಅವಶ್ಯಕತೆ ಇಲ್ಲ ಎನ್ನುವರು. ಆದರೆ ಅದನ್ನು ಯಾರೂ ಕೇಳುತ್ತಿಲ್ಲ. ರೈತ ಬೆವರು ಸುರಿಸಿ ದುಡಿದಿದ್ದಾನೆ ಅನ್ನದಾತನಾಗಿ ದುಡಿದಿದ್ದಾನೆ, ಸರ್ಕಾರದ ಸಾಲ ನೀತಿಯಿಂದ, ಸರ್ಕಾರದ ಬೆಲೆ ನೀತಿಯಿಂದ ಇಂದು ಸಾಲಗಾರ

ನಾಗಿದ್ದಾನೆ. ಅವನ ಜವಾಬ್ದಾರಿಯನ್ನು ಸರ್ಕಾರ ಹೊರಬೇಕಾಗಿತ್ತು. ಈ ದೇಶಕ್ಕೆ ಅನ್ನ ಕೊಡಲಿಕ್ಕೆ ಅವನು ದುಡಿದಿದ್ದಾನೆ. ಅವನಿಗೊಂದು ನೀತಿ ರೂಪಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಫಲವಾಗಿವೆ. ದೇಶದಲ್ಲಿ ಹಸಿರುಕ್ರಾಂತಿ ಮಾಡಲು ಹೇಳಿದರು, ಸಾಲಗಳನ್ನು ಕೊಟ್ಟರು, ಹೆಚ್ಚು ಉತ್ಪತ್ತಿ ಮಾಡಿದರು. ಹೆಚ್ಚು ಹಣ ಬರಬಹುದೆಂದು ರೈತ ಸಾಲ ಮಾಡಿದ. ನೀರಾವರಿಗಾಗಿ ಸಾಲ ಮಾಡಿದ, ಬೀಜ, ಗೊಬ್ಬರಕ್ಕಾಗಿ ಸಾಲ ಮಾಡಿದ. ಆದರೆ ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗಲಾರದೆ ಹೋಯಿತು. ಆ ಬಗ್ಗೆ ವಿಚಾರ ಮಾಡಲಿಲ್ಲ. ಪಂಚವಾರ್ಷಿಕ ಯೋಜನೆಗಳಲ್ಲಿ ರೈತನ ಬಗ್ಗೆ ವಿಚಾರ ಮಾಡಲಿಲ್ಲ. ಅವನು ಹಸಿರುಕ್ರಾಂತಿ ಸಾಧಿಸಬೇಕು, ಉದ್ದಿಮೆಗಳಿಗೆ ಹತ್ತಿ, ಕಬ್ಬು ಮುಂತಾದ ಕಚ್ಚಾ ವಸ್ತುಗಳನ್ನು ಉತ್ಪಾದಿಸಿಕೊಡಬೇಕು ಹಾಗೂ ಆಹಾರ ಧಾನ್ಯವನ್ನೂ ಬೆಳೆದುಕೊಡಬೇಕು. ಆದರೆ ಇಂತಹ ರೈತನ ಅಭಿವೃದ್ಧಿಯ ಬಗ್ಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಯೋಚನೆಯನ್ನೂ ಮಾಡಲಿಲ್ಲ, ಯಾವ ಯೋಜನೆಯನ್ನೂ ಹಾಕಲಿಲ್ಲ. ನಾವು ಎರಡು ಅಂಶಗಳನ್ನು ಗಮನಿಸಬೇಕು. ಎಲ್ಲರೂ ಗ್ರೋ ಮೋರ್ ಎಂದು ಕರೆಕೊಡುತ್ತಾರೆ. ಅದು ಈ ದೇಶದಲ್ಲಿ ಸಾಧ್ಯವಿದೆ. ಹಿಂದೆ ನಮ್ಮ ಪ್ರಧಾನಿಯಾಗಿದ್ದ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರು ದೇಶದಲ್ಲಿ ಅನ್ನದ ಅಭಾವ ಇರುವುದರಿಂದ ಒಪ್ಪೊತ್ತು ಊಟಮಾಡಿ ಎಂದು ಈ ದೇಶದ ಜನತೆಗೆ ಮನವಿ ಮಾಡಿದ್ದರು. ಅದಕ್ಕಾಗಿ ಹಸಿರುಕ್ರಾಂತಿಯಾಗಬೇಕು, ಜೈ ಕಿಸಾನ್ ಎಂದು ಹೇಳಿದರು. ಆದರೆ ಆ ಘೋಷಣೆ ಅನುಸರಿಸಿ ಯಾವ ಕಾರ್ಯಕ್ರಮವೂ ಬರಲಿಲ್ಲ. ಅವನು ಬೆಳೆದ ಬೆಳೆಗೆ ವೈಜ್ಞಾನಿಕವಾದ ಬೆಲೆ ಕೊಡುವಂಥ ವಿಚಾರವನ್ನು ಈ ದೇಶದಲ್ಲಿ ಯಾವುದೇ ಸರ್ಕಾರಗಳು ಮಾಡಲಿಲ್ಲ. ಅವನು ಬೆಳೆದಂಥ ಬೆಳೆಗೆ ಅವನು ದುಡಿದಂಥ ಶ್ರಮಕ್ಕೆ ತಕ್ಕ ಪ್ರತಿಫಲ ಕೊಡುವಂಥ ವಿಚಾರವನ್ನು ಮಾಡಿದ್ದರೆ, ಆ ಬಗ್ಗೆ ಯೋಜನೆಯನ್ನು ಯಾವುದೇ ಸರ್ಕಾರ ಹಾಕಿಕೊಂಡಿದ್ದರೆ ಇಂದು ರೈತ ಸಾಲಗಾರನಾಗುತ್ತಿರಲಿಲ್ಲ. ಸರ್ಕಾರದ ತಪ್ಪು ನೀತಿಯಿಂದಾಗಿ ರೈತನನ್ನು ಸಾಲಗಾರನನ್ನಾಗಿ ಮಾಡಿರುವುದರಿಂದ ರೈತನ ಹತ್ತು ಸಾವಿರ ರೂಪಾಯಿಗಳವರೆಗಿನ ಸಾಲವಲ್ಲ, ರೈತನ ಸಂಪೂರ್ಣ ಸಾಲವನ್ನೂ ಮನ್ನಾ ಮಾಡಬೇಕಾಗಿದೆ. ಆದರೆ ದೇಶದ, ರಾಜ್ಯದ ಇಂದಿನ ಹಣಕಾಸಿನ ಪರಿಸ್ಥಿತಿಯನ್ನು ಗಮನಿಸಿ 10 ಸಾವಿರದವರೆಗಿನ ಸಾಲ ಮನ್ನಾ ಮಾಡಿ ಎಂದು ಬೇಡಿಕೆ ಇಟ್ಟಿದ್ದೇವೆ. ಇವತ್ತು ದನ ಸಂಪತ್ತು ರೈತನಿಗೆ ಬಹಳ ಪ್ರಾಮುಖ್ಯವಾದದ್ದು. ಆ ದನಗಳ ಚಿಕಿತ್ಸೆಗಾಗಿ ಹಳ್ಳಿಗಳಲ್ಲಿ ಇವತ್ತು ಪಶುವೈದ್ಯ ಶಾಲೆಗಳನ್ನು ತೆರೆಯುವುದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ. ಒಂದು ತಾಲ್ಲೂಕಿನಲ್ಲಿ ಎರಡು–ಮೂರು ಪಶುವೈದ್ಯ ಶಾಲೆಗಳು ಇವೆ. ಇವತ್ತಿನ ಪರಿಸ್ಥಿತಿಯಲ್ಲಿ ರೈತನು ತನ್ನ ಪಶುಗಳನ್ನು ಜೋಪಾನ ಮಾಡಲಿಕ್ಕೆ ಎಷ್ಟೊಂದು ಕಷ್ಟ ಇದೆ, ಅದನ್ನು ನೋಡಬೇಕಾಗುತ್ತದೆ. ಅದಕ್ಕಾಗಿ ಸರ್ಕಾರ ಈಗಲಾದರೂ ಯಾವುದಾದರೂ ಕಾರ್ಯಕ್ರಮವನ್ನು ಇದುವರೆಗೂ ಹಾಕಿಕೊಂಡಿಲ್ಲ. ಒಂದು ಜಿಲ್ಲೆಗೆ ನಾಲ್ಕಾರು ಪಶುವೈದ್ಯ ಶಾಲೆಗಳನ್ನು ಕೊಟ್ಟರೆ ಅದರಿಂದ ಏನು ಪ್ರಯೋಜನವಾಗುತ್ತದೆ ? ಇವತ್ತು ರೈತನಿಗೆ ಪಶು ಸಂಪತ್ತು ಬಹಳ ಮಹತ್ವವಾದದು. ಅದನ್ನು ಜೋಪಾನ ಮಾಡಬೇಕಾಗುತ್ತದೆ. ಅದಕ್ಕಾಗಿ ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಠಪಕ್ಷ ಪ್ರತಿಯೊಂದು ಮಂಡಳಕ್ಕಾದರೂ ಒಂದು ಪಶುವೈದ್ಯ ಶಾಲೆಯನ್ನು ತೆರೆಯುವಂಥ ಯೋಜನೆಯನ್ನು ಸರ್ಕಾರ ಹಾಕಿಕೊಳ್ಳಬೇಕು. ಪಶುವೈದ್ಯ ಶಾಲೆಗಳ ಸೌಲಭ್ಯ ಇಲ್ಲದೇ ಇರುವುದರಿಂದ ಇವತ್ತು ಬೆಲೆ ಬಾಳುವಂಥ ಪಶುಗಳು, ಅವುಗಳು ಎತ್ತುಗಳಾಗಿರಬಹುದು, ಹಸುಗಳಾಗಿರಬಹುದು, ಅವುಗಳು ಸತ್ತು ಹೋಗಿವೆ. ಪಶುವೈದ್ಯ ಶಾಲೆಗಳು ಇಲ್ಲದೇ ಈ ಪರಿಸ್ಥಿತಿ ಉಂಟಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಈ ರೀತಿಯ ಒಂದು ಅನ್ಯಾಯವಾಗಿದೆ. ಅದಕ್ಕಾಗಿ ಪಶುವೈದ್ಯ ಶಾಲೆಗಳನ್ನು ಪ್ರತಿಯೊಂದು ಮಂಡಳಕ್ಕಾದರೂ ಸಿಗತಕ್ಕಂಥ ಯೋಜನೆಯನ್ನು ಸರ್ಕಾರದವರು ಹಾಕಿಕೊಳ್ಳಬೇಕು. ಇನ್ನು ಇಡೀ ಜಗತ್ತಿನಲ್ಲಿ ಯಾವುದೇ ವ್ಯಕ್ತಿ ಸೃಷ್ಟಿ ವಿಕೋಪಕ್ಕೆ ಒಳಗಾದಲ್ಲಿ ಅವನ ಸಹಾಯಕ್ಕಾಗಿ ಬರತಕ್ಕದ್ದು, ಅವನಿಗೆ ಪರಿಹಾರವನ್ನು ಕೊಡ-ತಕ್ಕಂಥದ್ದು ಆಯಾ ಸರ್ಕಾರಗಳ ಜವಾಬ್ದಾರಿ. ಇವತ್ತು ನ್ಯಾಚುರಲ್ ಕೆಲಾಮಿಟಿಯಿಂದಾಗಿ ಅಂದರೆ ಸೃಷ್ಟಿಯ ವಿಕೋಪಕ್ಕೆ ಒಳಗಾಗಿ ಸಿಡಿಲು ಹೊಡೆದು ಸತ್ತರೆ ಅಥವಾ ಮತ್ತೆ ಯಾವುದಾದರೂ ದುರಂತಕ್ಕೆ ಸಿಕ್ಕಿದರೆ ಅವರಿಗೆ ಪರಿಹಾರ ಕೊಡುತ್ತಿದ್ದಾರೆ. ಇವತ್ತು ರಾಜ್ಯದಲ್ಲಿ ಬರಗಾಲ ಇದೆ. 100 ತಾಲ್ಲೂಕುಗಳಲ್ಲಿ ಬೆಳೆ ಬಂದಿಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ಜನರಿಗೆ ಕೆಲಸ ಕೂಡಾ ಇಲ್ಲ. ಈ ರೀತಿಯ ಒಂದು ಪರಿಸ್ಥಿತಿ ಇರುವಾಗ ವ್ಯವಸಾಯಕ್ಕಾಗಿ ವೆಚ್ಚ ಮಾಡಿದಂಥ ಹಣವನ್ನು, ಸಾಲವನ್ನು ತೀರಿಸುವುದಕ್ಕೆ ಅವರು ಹಣವನ್ನು ಎಲ್ಲಿಂದ ತರಬೇಕು. ಹೀಗಿರುವಾಗ ರಾಜ್ಯ ಸರ್ಕಾರ ಈ ಸಾಲವನ್ನು ಮನ್ನಾ ಮಾಡಲಿಕ್ಕೆ ಇವತ್ತು ಹಿಂದೆ ಮುಂದೆ ನೋಡತಕ್ಕಂಥದ್ದು ಈ ರೈತನ ದುರ್ದೈವ. ರೈತರ ಪ್ರತಿನಿಧಿಗಳಾಗಿರುವವರು ಇವತ್ತು ಈ ಸದನದಲ್ಲಿ ಕುಳಿತು ಸಾಲ ಮನ್ನಾ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಆ ರೈತರು ಎಲ್ಲಿಂದ ಸಾಲವನ್ನು ತಂದು ತೀರಿಸಬೇಕು. ಅವನು ಹೊಲದಲ್ಲಿ ಬಿತ್ತಿದಂಥ ಬೆಳೆ ಬಂದಿಲ್ಲ. ಅವನು ಸಾಲವನ್ನು ಮರುಪಾವತಿ ಮಾಡಲಿಕ್ಕೆ ಬೇರೆ ಉತ್ಪಾದನೆಗಳ ಮಾರ್ಗ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಇವತ್ತು ರೈತರ ಸಾಲವನ್ನು ಏತಕ್ಕೆ ಮನ್ನಾ ಮಾಡಬೇಕು ಎಂದು ಕೇಳುವುದು ಅಷ್ಟೊಂದು ಸೂಕ್ತವಾದುದಲ್ಲ. ಬಹುತೇಕವಾಗಿ ನನಗನಿಸುತ್ತದೆ, ರೈತರ ಸಾಲವನ್ನು ಮನ್ನಾ ಮಾಡಬೇಕು. ಆದರೆ ರಾಜ್ಯ ಸರ್ಕಾರದಲ್ಲಿ ಹಣ ಇಲ್ಲ, ಕೇಂದ್ರಕ್ಕೆ ಇದರ ಬಗ್ಗೆ ಕೇಳಬೇಕು. ಕೇಂದ್ರ

ಸರ್ಕಾರ ರಾಜ್ಯದ ಮೇಲೆ, ರಾಜ್ಯ ಸರ್ಕಾರ ಕೇಂದ್ರದ ಮೇಲೆ, ಈ ರೀತಿ ಜವಾಬಾರಿಯನ್ನು ಒಬ್ಬರ ಮೇಲೆ ಒಬ್ಬರು ಹಾಕತಕ್ಕಂಥದ್ದನ್ನು ಮಾಡಿದರೆ ರೈತ ಕೇಳಲಾರ, ಅದನ್ನು ಸಹಿಸಲಾರ, ಇವತ್ತು ರಾಜ್ಯ ಸರ್ಕಾರವೇ ಇರಲಿ, ಕೇಂದ್ರ ಸರ್ಕಾರವೇ ಇರಲಿ, ವಿಚಾರ ಮಾಡಿ ಈ ದಿಶೆಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರದ ತಪ್ಪು ನೀತಿಯಿಂದಾಗಿ ಬಂದಿರತಕ್ಕಂಥ ಈ ದುರ್ಬರ ಪ್ರಸಂಗವನ್ನು ಹೋಗಲಾಡಿಸಬೇಕು. ಸಾಲವನ್ನು ಮರು ಪಾವತಿ ಮಾಡಲಿಕ್ಕೆ ಶಕ್ತಿ ಇಲ್ಲದಂತೆ ಈ ಸರ್ಕಾರಗಳು ಅವನನ್ನು ಮಾಡಿವೆ. ಆದ್ದರಿಂದ ಆ ಶಕ್ತಿಯನ್ನು ತುಂಬಿ ಕೊಡತಕ್ಕಂಥದ್ದು ಸರ್ಕಾರದ ಕೆಲಸ; ಈ ದೇಶಕ್ಕೆ ಅನ್ನ ಹಾಕತಕ್ಕಂಥ ರೈತರನ್ನು ಶಕ್ತಿಹೀನರನ್ನಾಗಿ ಮಾಡಿದ್ದಕ್ಕೆ 44 ವರ್ಷಗಳ ಕಾಲ ಈ ಪ್ರಜಾಪ್ರಭುತ್ವದಲ್ಲಿ ರೈತನಿಗೆ ಸಿಗತಕ್ಕಂಥ ಪ್ರತಿಫಲಸಿ ಗದಿರುವುದರಿಂದ ಇವತ್ತು ರೈತ ಸಾಲಗಾರನಾಗಿ ಅವನ ವಸ್ತುಗಳನ್ನು ಹರಾಜು ಹಾಕತಕ್ಕಂಥ ಪರಿಸ್ಥಿತಿಯಾಗುತ್ತಿದೆ. ಅವನ ಮನೆಯನ್ನು ಜಪ್ತಿ ಮಾಡುತ್ತಿದ್ದಾರೆ, ಅವನ ಜಮೀನನ್ನು ಜಪ್ತಿ ಮಾಡುತ್ತಿದ್ದಾರೆ. ಏತಕ್ಕೆ ಈ ಜಪ್ತಿ ಕಾರ್ಯಕ್ರಮ ?

ಶ್ರೀ ಎಂ. ಮಹದೇವ್ :– ನಲವತ್ತು ವರ್ಷಗಳಿಂದ ರೈತರ ಅಭಿವೃದ್ಧಿಗಾಗಿ, ನೀರಾವರಿಗಾಗಿ ಎಷ್ಟು ಹಣವನ್ನು ಸರ್ಕಾರಗಳು ಖರ್ಚು ಮಾಡಿವೆ, ಎಷ್ಟೊಂದು ಸೌಕರ್ಯಗಳನ್ನು ಮಾಡಿಕೊಟ್ಟಿದೆ, ಅದನ್ನು ನೀವು ಮರೆತು ಬಿಡುತ್ತೀರಿ. ಕೋಟ್ಯಾಂತರ ರೂಪಾಯಿಗಳನ್ನು ಇರಿಗೇಷನ್‌ಗಾಗಿ ಖರ್ಚು ಮಾಡಿದೆ. ರೈತರ ಅಭಿವೃದ್ಧಿಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿದೆ. ಅದನ್ನೂ ತಾವು ಸೇರಿಸಿಕೊಂಡು ಹೇಳಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ :– ಈ ಸರ್ಕಾರಗಳು ಎಷ್ಟು ಪರ್‌ಸೆಂಟ್ ಹಣವನ್ನು ಹೊಡೆದಿದೆ ಎಂಬುದು ನಿಮಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಎಂ. ಮಹದೇವ್ :– ಏನೂ ಅಭಿವೃದ್ಧಿ ಮಾಡಿಲ್ಲ ಎಂದು ಹೇಳುತ್ತೀರಿ. ಅಭಿವೃದ್ಧಿ ಮಾಡಿರುವುದನ್ನು ಮರೆತುಬಿಡುತ್ತೀರಿ. ಬೇರೆ ವಿಚಾರದ ಬಗ್ಗೆ ಮಾತ್ರ ಟೀಕೆ ಮಾಡುತ್ತೀರಿ. 40 ವರ್ಷಗಳಲ್ಲಿ ಎಷ್ಟು ಕೋಟಿ ರೂಪಾಯಿಗಳ ಪ್ರಾಜೆಕ್ಟ್ಸ್ ಆಗಿದೆ, ಅದರ ಬಗ್ಗೆಯೂ ಹೇಳಬೇಕು.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ :– ಮಾನ್ಯ ಸದಸ್ಯರು ಕೊಟ್ಟಂಥ ಸೂಚನೆಯನ್ನು ಗಮನಿಸುತ್ತೇನೆ. ಅದನ್ನು ಸಹಿತ ನಾನು ಹೇಳುವುದಕ್ಕೆ ಬಯಸುತ್ತೇನೆ. ಅದಕ್ಕಾಗಿ ಇವೊತ್ತು ಸೃಷ್ಟಿ ವಿಕೋಪಕ್ಕೆ ಒಳಗಾಗಿ ಅನಾವೃಷ್ಟಿಯಿಂದ, ಅತಿವೃಷ್ಟಿಯಿಂದ ಯಾವ ರೈತರ ಬೆಳೆ ಹಾನಿ ಆಗಿದೆ, ಅದನ್ನು ತುಂಬಿಕೊಡುವುದಕ್ಕೆ ರಾಜ್ಯ ಸರ್ಕಾರದಲ್ಲಿ ಏನು ಕಾನೂನು ಇದೆ ಎಂದರೆ ಇಲ್ಲ. ಅತಿವೃಷ್ಟಿಯಿಂದ ಅನಾಹುತ ಆದರೆ ರಾಜ್ಯ ಸರ್ಕಾರದಲ್ಲಿ ಪರಿಹಾರ ಕೊಡುವುದಕ್ಕೆ ಏನೋ ಅವಕಾಶ ಇದೆ. ಅದನ್ನು ಸಹ ಪೂರ್ಣವಾಗಿ ತುಂಬಿಕೊಡುವುದಿಲ್ಲ. ಇವತ್ತು ಅನಾವೃಷ್ಟಿಯಿಂದ, ಸೃಷ್ಟಿ ವಿಕೋಪಕ್ಕೆ ಒಳಗಾಗಿ, ರೈತರ ಬೆಳೆ ಹಾಳಾದರೆ ಈ ದೇಶದಲ್ಲಿ ಯಾವ ಕಾನೂನು ಇದೆ, ಇಲ್ಲ. ಅದಕ್ಕೆ ಪರಿಹಾರ ಇಲ್ಲ. ಇನ್‌ಶ್ಯೂರೆನ್ಸ್ ಎಂದು ಹೇಳುತ್ತಾರೆ. ಯಾರಿಗೂ ಸಿಕ್ಕದಂತಹ ಯೋಜನೆ ಅದು. ಇವತ್ತು ತಂದಿರತಕ್ಕಂಥ ಇನ್‌ಶ್ಯೂರೆನ್ಸ್ ಯೋಜನೆ, ಬೆಳೆ ವಿಮೆ ಯೋಜನೆ 'ಬಿಸಿಲು ಕುದುರೆ' ಇದ್ದ ಹಾಗೆ. ಇನ್‌ಶ್ಯೂರೆನ್ಸ್ ಯೋಜನೆ, ಬೆಳೆ ವಿಮಾ ಯೋಜನೆ ಇವತ್ತು ಬಿಸಿಲು ಕುದುರೆ ಇದ್ದಹಾಗೆ. ಯಾರಿಗೂ ಲಾಭ ಸಿಕ್ಕದ ರೀತಿಯಲ್ಲಿ ತಂದಿದ್ದಾರೆ. ತಾಲ್ಲೂಕುಕ್ ಅನ್ನು ಒಂದು ಯೂನಿಟ್ ಎಂದು ಮಾಡಿದ್ದಾರೆ. ಪ್ರತಿಯೊಂದು ಗ್ರಾಮವನ್ನು ಒಂದು ಯೂನಿಟ್ ಎಂದು ಮಾಡಿ ಇನ್‌ಶ್ಯೂರೆನ್ಸ್ ತಂದರೆ ಅದರ ಪ್ರಯೋಜನವನ್ನು ಪಡೆಯಬಹುದಾಗಿತ್ತು; ಆದರೆ ಆ ಯೋಜನೆ ಇಲ್ಲ. ಮೊಟ್ಟಮೊದಲನೆಯದಾಗಿ ನಾನು ವಿಚಾರವನ್ನು ಹೇಳುತ್ತಿದ್ದೇನೆ. ನಾನು ಕೆಲವೊಂದು ವಿಚಾರಗಳನ್ನು ಕೆಲವೊಂದು ಸೂಚನೆಗಳನ್ನು ಮಾಡಬೇಕೆಂದು ಇದ್ದೇನೆ. ಮಾನ್ಯ ಸಭಾಧ್ಯಕ್ಷಿಣಿಯವರು ಸಮಯಕೊಟ್ಟರೆ ಮಾತನಾಡುತ್ತೇನೆ. ಕೆಲವು ಸ್ನೇಹಿತರು ರೈತರಿಗೆ ಅನ್ಯಾಯವಾಗಿದೆ, ಆದ್ದರಿಂದ ಅವರಿಗೆ ಬಡ್ಡಿ ಮನ್ನಾ ಮಾಡಿ ಎಂದು ಹೇಳಿದರು. ಈ ದೇಶದಲ್ಲಿ ಈ ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡುವುದು ಹಾಸ್ಯಾಸ್ಪದ ಎಂದು ಗೇಲಿ ಮಾಡುತ್ತಿದ್ದರು. ರೈತರ ಸಾಲವನ್ನು ಮನ್ನಾ ಮಾಡಿದರೆ, ಬಡ್ಡಿ ಮನ್ನಾ ಮಾಡಿದರೆ ರಾಜ್ಯ ಸರ್ಕಾರ ಉಳಿದೀತೆ ಎಂದು ಕೇಳುತ್ತಿದ್ದರು. ಅಂತಹ ಸಂದರ್ಭದಲ್ಲಿ ಮೊಟ್ಟಮೊದಲಬಾರಿಗೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಇದ್ದಂತಹ ಆಗಿನ ಜನತಾ ಪಕ್ಷದ ಸರ್ಕಾರ, ಜನತಾದಳ ರಾಜ್ಯದಲ್ಲಿ ರೈತರ ಸಾಲದ ಬಗ್ಗೆ ಬಡ್ಡಿಯನ್ನು ಮನ್ನಾ ಮಾಡಿ ಸ್ವಲ್ಪಮಟ್ಟಿಗಾದರೂ ರೈತರ ಸಹಾಯಕ್ಕೆ ಬಂದರು. ನೀರು ಬೀಳದೇ ಇದ್ದಂತಹ ವಿಫಲ ಬಾವಿಗಳ ಸಾಲವನ್ನು ಮನ್ನಾ ಮಾಡಿದರು. ಅದೇ ರೀತಿಯಾಗಿ ತಕಾವಿ ಸಾಲಗಳನ್ನು ಮನ್ನಾ ಮಾಡಿದರು. ದೇಶಕ್ಕೆ ಆದರ್ಶಪ್ರಾಯವಾಗಿ, ಐಡಿಯಲ್ ಆಗಿ ಮಾಡಿದರು. ರೈತರು ಸಾಲವನ್ನು ಮನ್ನಾ ಮಾಡಿ ಎಂದು ಕೇಳತಕ್ಕದ್ದು ಅವರ ಹಕ್ಕು. ಅವರ ಸಾಲವನ್ನು ಮನ್ನಾ ಮಾಡುವುದು ಸರ್ಕಾರದ ಕರ್ತವ್ಯವೆಂದುವಿ ಕರ್ನಾತಟಕ ಸರ್ಕಾರ ತಿಳಿದುಕೊಳ್ಳುವುದು ಅವಶ್ಯಕ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಅಲ್ಲಿ ಮಾನ್ಯ ಜಾಲಪ್ಪನವರು ಇದ್ದಾರೆ, ಅವರನ್ನೇ ಕೇಳಿ ಸಾಲ ಮನ್ನಾ ಮಾಡಿದರೆ ಏನು ಆಗುತ್ತದೆ ಎಂದು ಅವರೇ ಹೇಳಲಿ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಮಾನ್ಯ ಮಲ್ಲಾರಿಗೌಡರು ಈ ರೀತಿ ಹೇಳುತ್ತಾರೆಂದು ನಾನು ಭಾವಿಸಿರಲಿಲ್ಲ. ಇವತ್ತು ವಕೀಲಿ ವೃತ್ತಿ ಮಾಡತಕ್ಕವರ ಬಗ್ಗೆ, ಡಾಕ್ಟರ್ ವೃತ್ತಿ ವರಾಡತಕ್ಕವರ ಬಗ್ಗೆ ನಾನು ಮಾತನಾಡುತ್ತಿಲ್ಲ. ಯಾರು ಕೇವಲ ವ್ಯವಸಾಯವನ್ನು ಅವಲಂಬಿಸಿದ್ದಾರೆ, ಅವರ ಬಗ್ಗೆ ಮಾತನಾಡುತ್ತಿದ್ದೇನೆ. ಅವರು ಯಾವ ರೀತಿ ಸಾಲವನ್ನು ಮರು ಪಾವತಿ ಮಾಡಬೇಕು ? ಈ ಒಂದು ವಿಚಾರದಲ್ಲಿ ಹಿಂದಿನ ಸರ್ಕಾರ ಏಳು ರೂಪಾಯಿ ಬಡ್ಡಿಯನ್ನು ಮನ್ನಾ ಮಾಡಿತು. ಇವತ್ತು ಈ ಸರ್ಕಾರ ಬಂದಮೇಲೆ ಕಡಿಮೆ ಬಡ್ಡಿ ದರದ ಸಾಲವನ್ನು ಕೊಡುವಂತಹ ಯೋಜನೆಯೂ ನಿಂತುಹೋಗಿದೆ. ಬಡ್ಡಿ ಮನ್ನಾ ಮಾಡುವ ಯೋಜನೆಯಬಗ್ಗೆ ಸುದ್ದಿಯೇ ಇಲ್ಲ. ಇಂತಹ ದುರ್ಬರ ಪರಿಸ್ಥಿತಿಯಲ್ಲಿ ಇದೊಂದುದೇ ವರ್ಷ ಅಲ್ಲ ಬರಗಾಲ ಇದ್ದದ್ದು; ಸತತವಾಗಿ ಎಂಟು ಹತ್ತು ವರ್ಷಗಳಿಂದ ಈ ರಾಜ್ಯದಲ್ಲಿ ಬರಗಾಲ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿ ಇವತು ದೇಶದಲ್ಲಿ ಕಾನೂನು ಇದೆ, ಸತತವಾಗಿ ಮೂರು ವರ್ಷಗಳ ಕಾಲ ಬರಗಾಲ ಇದ್ದರೆ ಸಾಲವನ್ನು ಮನ್ನಾ ಮಾಡಬೇಕೆಂದು ಕಾನೂನು ಇದ್ದರೂ ಸಹ ಸರ್ಕಾರ ಅದನ್ನು ಅನುಸರಿಸುತ್ತಾ ಇಲ್ಲ. ಅದೇ ರೀತಿ ಇವತ್ತು ನಾವು ನೀರಾವರಿ ಬಗ್ಗೆ ಹೇಳುವುದಾದರೆ; ನೀರಾವರಿ ಈ ರಾಜ್ಯದಲ್ಲಿ ಈ ದೇಶದಲ್ಲಿ ಎಷ್ಟು ಇದೆ, ಮೂರನೇ ಒಂದಂಶ ಭಾಗ ಸಹ ರಾಜ್ಯದಲ್ಲಿ ನೀರಾವರಿ ಮಾಡಿಲ್ಲ. ರಾಜ್ಯದಲ್ಲಿ ಇರತಕ್ಕ ನೀರನ್ನು ಬಳಸಲಿಕ್ಕೆ ಆಗಿಲ್ಲ. ಎರಡು ಸಾವಿರ ಇಸವಿ ಹೊತ್ತಿಗೆ ಬಚಾವತ್ ಆಯೋಗದ ಪ್ರಕಾರ ಇರತಕ್ಕ ನೀರಿನ ಹಕ್ಕು ಹಾಳಾಗಿ ಹೋಗುತ್ತದೆ, ನಷ್ಟವಾಗಿ ಹೋಗುತ್ತದೆ. ಸರ್ಕಾರದವರು ಬರೇರೀ ಮೊಸಳೆ ಕಣ್ಣೀರನ್ನು ಸುರಿಸುತ್ತಿದ್ದಾರೆ. ಕಾವೇರಿ ಯೋಜನೆ, ಕೃಷ್ಣಾ ಯೋಜನೆ ಎಂದು ಹಿಂದಿನ ವರ್ಷದ ಬಜೆಟ್ ಭಾಷಣದಲ್ಲಿ ಅಷ್ಟು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಎಷ್ಟು ಖರ್ಚು ಮಾಡಿದ್ದೀರಿ ? ಯಾವ ಪ್ರಗತಿಯನ್ನು ಸಾಧಿಸಲಾಗಿದೆ ? ಧಾರವಾಡ ಜಿಲ್ಲೆಯಲ್ಲಿ 5–6 ತಾಲ್ಲೂಕುಗಳಿಗೆ ನೀರಾವರಿ ಆಗತಕ್ಕ ಅಪ್ಪರ್ ತುಂಗಾ ಯೋಜನೆ ಬಗ್ಗೆ ನಾನು ಪದೇ ಪದೇ ಹೇಳುತ್ತಿದ್ದೇನೆ. ಅಲ್ಲಿ ಬರಗಾಲ ಇದೆ, ಈ ಯೋಜನೆ ತೆಗೆದುಕೊಳಿ ಎಂದು ಹೇಳಿದ್ದೆ. ಒಂದು ವರ್ಷ ಆದರೂ ಸಹಿತ ಈ ಯೋಜನೆಯನ್ನು ಕೇಂದ್ರಕ್ಕೆ ಕಳಿಸುವಂತಹ ಒಂದ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ. ಇನ್ನು ಈ ಯೋಜನೆಯನ್ನು ಮಾಡಿ ಮುಗಿಸಲು ಎಷ್ಟು ವರ್ಷಗಳು ಬೇಕಾಗಬಹುದು ? ಸರ್ಕಾರ ಕಾಗದದಲ್ಲಿ ಮಾಡಬೇಕಾದ ಕೆಲಸವನ್ನು ಒಂದು ವರ್ಷವಾದರೂ ಮಾಡಿಲ್ಲ. ನಾನು ಈ ಯೋಜನೆಯನ್ನು ಕೇಂದ್ರಕ್ಕೆ ಕಳಿಸಿ ಎಂದು ಹೇಳಿದರೂ ಕೇಂದ್ರಕ್ಕೆ ಕಳುಹಿಸುವಂತಹ ಒಂದು ವ್ಯವಸ್ಥೆ ಆಗಿಲ್ಲ. ನಾನು ಸ್ಪಷ್ಟವಾಗಿ ಒಂದು ಮಾತನ್ನು ಹೇಳುತ್ತಿದ್ದೇನೆ. ನೀರಾವರಿ ಬಗ್ಗೆ ಈ ರಾಜ್ಯದಲ್ಲಿ ಇಲ್ಲಿಯವರೆಗೆ ಮಲತಾಯಿ ಧೋರಣೆ ನಡೆದಿದೆ. ಉತ್ತರ ಕನ್ನಡ ಜಿಲ್ಲೆಗಳಿಗೆ ನೀರಾವರಿ ಯೋಜನೆಗಳಿಗೆ ಅತೀ ಕಡಿಮೆ ಹಣವನ್ನು ಕೊಟ್ಟಿದ್ದಾರೆ. ಹಳೇ ಮೈಸೂರಿನ ಭಾಗ ಎಂದು ಏನು ಹೇಳುತ್ತೇವೆ ಅಲ್ಲಿಗೆ ಸುಮಾರು ಮುಕ್ಕಾಲು ಭಾಗ ಹಣವನ್ನು ಖರ್ಚು ಮಾಡುತ್ತಾ ಬಂದಿದ್ದಾರೆ. ಈ ಮಲತಾಯಿ ಧೋರಣೆಯನ್ನು ನಿಲ್ಲಿಸಬೇಕು. ತುಂಗಾ ಮೇಲ್ದಂಡೆಯಂತಹ ಸಣ್ಣ ಯೋಜನೆ ಸುಲಭವಾದ ಯೋಜನೆಯನ್ನು ಕೈಗೆತ್ತಿಕೊಂಡರೆ ಅಲ್ಲಿ ಬರಗಾಲ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ರೈತರಿಗೇ ಸಹಾಯ ಆಗುತ್ತದೆ. ತೀವ್ರವಾಗಿ ತುಂಗಾ ಮೇಲ್ದಂಡೆ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂಬ ಮಾತನ್ನು ಹೇಳುತ್ತಿದ್ದೇನೆ.

ಛೇರ್ಮನ್ :– 15 ನಿಮಿಷ ಆಯಿತು, ಮುಗಿಸಿ.

2–10 ಪಿ. ಎಂ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಬೆಳಗಾಂ ಜಿಲ್ಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ, ಧಾರವಾಡ ಜಿಲ್ಲೆಯಲ್ಲಿ ರಾಜ್ಯದ 100 ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ಸಾರಿದ್ದಾರೆ, ಅದೇ ರೀತಿ ಉಳಿದ ತಾಲ್ಲೂಕುಗಳಲ್ಲಿಯೂ ಸಹಿತ ಬರಗಾಲ ಇದೆ. ಆದರೆ ಆ ತಾಲ್ಲೂಕುಗಳನ್ನು ಸರ್ಕಾರ ಬರಗಾಲ ಎಂದು ಸಾರಿಲ್ಲ. ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇರುವಾಗ ಈ ಒಂದು ಸಹಕಾರ ಸಂಘಗಳ ಪರಿಸ್ಥಿತಿ ಏನಾಗಿದೆಯೆಂದರೆ……

ಛೇರ್ಮನ್ :– ಮಾನ್ಯ ಬನ್ನಿಕೋಡ್ ಅವರಿಗೆ 15 ನಿಮಿಷಗಳ ಕಾಲ, ಕಾಲಾವಕಾಶ ಕೊಟ್ಟಿತ್ತು, ನಾನು ಮೂರು ಸಾರಿ ಬೆಲ್ ಬಾರಿಸಿದ್ದೇನೆ. ತಾವು ಈ ರೀತಿ ಮಾತನಾಡಿದರೆ ಬೇರೆಯವರಿಗೆ ಅವಕಾಶ ಸಿಕ್ಕುವುದಿಲ್ಲ. ಆದ್ದರಿಂದ ನೀವು ರೈತರಿಗೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಹೇಳಿ ಬೇಗ ಮುಗಿಸಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಮಾನ್ಯ ಕೆ. ಹೆಚ್. ಪಾಟೀಲರು ಇವತ್ತು ಸಹಕಾರ ಮಂತ್ರಿಗಳಾಗಿದ್ದಾರೆ. ಸಹಕಾರ ಸಂಘಗಳು ದುಸ್ಥಿತಿಯಲ್ಲಿವೆ, ಇದಕ್ಕೆ ಕಾರಣ ಯಾರು. ಇವೊತ್ತು ಸಹಕಾರ ಸಂಘಗಳು ದಿವಾಳಿ ಸ್ಥಿತಿಯಲ್ಲಿವೆ. ಇವೊತ್ತು ಅಲ್ಲಿರತಕ್ಕಂಥ ಕಾರ್ಯದರ್ಶಿಗಳಿಗೆ ಸಂಬಳ ಇಲ್ಲ. ಅವರು ಸತ್ಯಾಗ್ರಹ ಮಾಡಿದರು. ಅಲ್ಲಿ ಸಾಲ ವಸೂಲಿಯಾಗುವುದಿಲ್ಲ. ಸಂಬಳ ಇಲ್ಲ. ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ಸರ್ಕಾರಿ ನೌಕರರಂತೆ ಸಂಬಳ ಕೊಡುವ ವ್ಯವಸ್ಥೆಯನ್ನಾದರೂ ಮಾಡಬೇಕು. ಇಲ್ಲದೇ ಇದ್ದರೆ, ಸಹಕಾರ ಸಂಘಗಳಿಗೆ ಮೈಂಟೆನೆನ್ಸ್ ಗ್ರ್ಯಾಂಟ್ಸ್ ಕೊಟ್ಟು ಆ ಕಾರ್ಯದರ್ಶಿಗಳಿಗೆ ಒಂದು ಸಹಾಯವನ್ನು ಮಾಡಬೇಕು

ಆ ಸಹಕಾರ ಸಂಘಗಳು ಉಳಿಯುವ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಈ ಸಾಲ ಮನ್ನಾ ಮಾಡುವ ಪೂರ್ವದಲ್ಲಿ, ಬರಗಾಲದಲ್ಲಿ ತೀವ್ರವಾಗಿ ವಸೂಲಿ ನಡೆದಿದೆ. ಜಪ್ತಿ ಮಾಡತಕ್ಕದ್ದು ನಮ್ಮ ಕ್ಷೇತ್ರದಲ್ಲಿ ನಡೆದಿದೆ, ನಮ್ಮ ಜಿಲ್ಲೆಯಲ್ಲಿ ನಡೆದಿದೆ, ಬೈಲಹೊಂಗಲ ತಾಲ್ಲೂಕಿನಲ್ಲಿ ನಡೆದಿದೆ. ಇವೊತ್ತು ಹರಾಜು ಹಾಕುತ್ತಿದ್ದಾರೆ ಇದು ಯಾವ ನೀತಿ. ಇದು ಸರ್ಕಾರದ ರೈತ ವಿರೋಧ ನೀತಿ ಅಲ್ಲವೇನು. ಬರಗಾಲ ಎಂಬು ಒಂದು ಕಡೆ ಹೇಳುತ್ತಾರೆ, ಇನ್ನೊಂದು ಕಡೆ ರೈತನಿಗೆ ಹರಾಜು ಹಾಕುತ್ತಿದ್ದಾರೆ. ಇವತ್ತು ರೈತನನ್ನು ಹರಾಜು ಮಾಡಲಿಕ್ಕೆ ಪ್ರಜಾಪ್ರಭುತ್ವ ಬಂದಿಲ್ಲ. ಇವೊತ್ತು ರೈತನ ಬಗ್ಗೆ ಮಲತಾಯಿ ಧೋರಣೆ ತಾಳ ತಕ್ಕದ್ದನ್ನು ದಯಮಾಡಿ ಸರ್ಕಾರ ನಿಲ್ಲಿಸಬೇಕು. ರೈತನಿಗೆ ನ್ಯಾಯವಾದಂಥ ಒಂದು ವ್ಯವಸ್ಥೆಯನ್ನು ಮಾಡ ಬೇಕು. ಇವೊತ್ತು ಕಾಲ ಸಮೀಪಿಸುತ್ತಿದೆ. ಸಮಯೋಚಿತವಾಗಿ ಈ ನ್ಯಾಯವನ್ನು ದೊರಕಿಸಿಕೊಡದೇ ಹೋದರೆ, ಈ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ರೈತರ ಕ್ರಾಂತಿಯಾಗುತ್ತದೆ. ಆಗ ದೇಶಕ್ಕೆ ಗಂಡಾಂತರ ತಪ್ಪಿದ್ದಲ್ಲ. ಈ ರಾಜ್ಯಕ್ಕೆ ಗಂಡಾಂತರ ತಪ್ಪಿದ್ದಲ್ಲ. ಇವತ್ತು ಹಳ್ಳಿಗಾಡಿನಲ್ಲಿರತಕ್ಕ ಜನ ಶಾಂತಿಯಿಂದ ತಾಳ್ಮೆಯಿಂದ ಇದ್ದಾರೆ, ಅವರ ಬಗ್ಗೆ ಕಾಳಜಿ ವಹಿಸಬೇಕು. ಇದರ ಬಗ್ಗೆ ನನ್ನ ಕೊನೆಯ ಮನವಿ ಅಂದರೆ, ಕನಿಷ್ಟಪಕ್ಷ, ಈ ಸದನದಲ್ಲಿ ಒಂದು ಸರ್ವಾನುಮತದ ನಿರ್ಣಯವನ್ನು ಮಾಡಿ, ಇವೊತ್ತು ಕರಾರು ರಹಿತವಾಗಿ, 10 ಸಾವಿರ ರೂಪಾಯಿ ವರೆಗಿನ ಸಾಲ ವನ್ನು ಮನ್ನಾ ಮಾಡಬೇಕು; ಕರಾರನ್ನು ತೆಗೆದುಹಾಕಬೇಕೆಂದು ಸರ್ವಸಮ್ಮತವಾದ ನಿರ್ಣಯವನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸೋಣ. ಕೇಂದ್ರ ಮತ್ತು ರಾಜ್ಯ ಕೂಡಿ, ಈಸಲ ಮನ್ನಾ ಯೋಜನೆಯಲ್ಲಿ ಭಾಗವಹಿಸಿ, 10 ಸಾವಿರ ರೂಪಾಯಿವರೆಗೆ ಇರತಕ್ಕ ರೈತರನ್ನು ಸಾಲದಿಂದ ಋಣಮುಕ್ತ ರನ್ನಾಗಿ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ನಾರಾಯಣಸ್ವಾಮಿ :– (ಬೇತಮಂಗಲ) ಮಾನ್ಯ ಸಭಾಧ್ಯಕ್ಷಿಣಿಯವರೆ, ಈಗ ನಾವೆಲ್ಲರೂ ಕೂಡ ರೈತರನ ಬಗ್ಗೆ ಚಿಂತನೆ ಮಾಡಿದ್ದೇವೆ. ಆ ಚಿಂತನೆಯಲ್ಲಿ ನಾನು ಕೂಡ ಪಾಲ್ಗೊಳ್ಳುತ್ತಿದ್ದೇನೆ. ಭಾರತದ ಇತಿಹಾಸದಲ್ಲಿ, ಸುಮಾರು 43 ವರ್ಷಗಳಿಂದ ಯಾವುದೇ ಸರ್ಕಾರ ಬಂದರೂ ಕೂಡ ರೈತನನ್ನು ಸರಿಯಾದಂಥ ವ್ಯವಸ್ಥೆಯ ಲ್ಲಿ ಕಾಣಲಿಲ್ಲ. ರೈತನಿಗೆ ಬೇಕಾಗಿರತಕ್ಕ ಸವಲತ್ತುಗಳನ್ನು ಒದಗಿಸಿ ಕೊಡಲಿಲ್ಲ. ಆದರೆ ಅನೇಕ ಸರ್ಕಾರಗಳು ಹೇಳುತ್ತವೆ, ಕೇಂದ್ರ ಸರ್ಕಾರ ಹೇಳುತ್ತದೆ, ಒಂದು ಕಡೆ ಜೈ ಕಿಸಾನ್, ಇನ್ನೊಂದು ಕಡೆ ಜೈಜವಾನ್ ಎಂದು. ಈಗ ಏನಾಗಿದೆ ಎಂದರೆ, ದೇಶಕ್ಕೆ ಅನ್ನವನ್ನು ಕೊಡತಕ್ಕ ಅನ್ನದಾತನಿಗೆ ಜೈ ಕಿಸಾನ್ ಎಂದು ಹೇಳು-ತ್ತಾರೆ. ಆ ಕಡೆ ನಮ್ಮ ದೇಶವನ್ನು ರಕ್ಷಣೆ ಮಾಡತಕ್ಕ ಜನರಿಗೆ ಜೈ ಜವಾನ್ ಎಂದು ಹೇಳುತ್ತಾರೆ. ಇದು ಬರೀ ಮಾತಿನ ಧಾಟಿಯಲ್ಲಿದೆ; ಬರೀ ಘೋಷಣೆಯಲ್ಲಿದೆ. ಬರೀ ಪೊಳ್ಳು ಘೋಷಣೆಯಿಂದ ರೈತರಿಗೆ ಪ್ರಯೋ-ಜನ ವಾಗಲಿಲ್ಲ. ಅವರಿಗೆ ಅನುಕೂಲ ಮಾಡಿ ಕೊಡುವ ಬಗ್ಗೆ ಯಾರೂ ಯೋಚನೆ ಮಾಡಲಿಲ್ಲ. ಅಂತಹ ಒಂದು ವ್ಯವಸ್ಥೆಯಲ್ಲಿ ಜನತಾಪಕ್ಷ, ಜನತಾದಳ ಸರ್ಕಾರ ಇತ್ತು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಪಕ್ಷಬೇಧ ಇಲ್ಲದೆ ಪ್ರಾಮಾಣಿಕ ಪ್ರಯತ್ನವನ್ನು ಕನಿಷ್ಟಪಕ್ಷ 1983, 1984 ಮತ್ತು 1988 ರಲ್ಲಿ ರೈತರ ಸಾಲದ ಬಡ್ಡಿ ಮನ್ನಾ ವ್ಯವಸ್ಥೆಯನ್ನು ಮಾನ್ಯ ಹೆಗಡೆಯವರ ಸರ್ಕಾರ ಮಾಡಿತು. ಮಾನ್ಯ ವಿ. ಪಿ. ಸಿಂಗ್ ಅವರ ಸರ್ಕಾರ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಈ ಮನ್ನಾ ವಿಚಾರದಲ್ಲಿ ರೈತರಿಗೆ ಬಡ್ಜೆಟ್ಟಿನಲ್ಲಿ ಪ್ರಾವಿಜನ್ ಮಾಡಿದೆ. ನಾನು ವೈಯಕ್ತಿಕವಾಗಿ ಒಂದೆರಡು ಮೂರು ಸಲಹೆಗಳನ್ನು ಒಪ್ಪುತ್ತೇನೆ. ಈಗ ಮಾನ್ಯ ಕೆ. ಹಚ್. ಪಾಟೀಲರು ಹೇಳಬಹುದು. ಅಥವಾ ಸರ್ಕಾರ ಹೇಳಬಹುದು. ಅದೇನೆಂದರೆ, ಸಾಲ ಮನ್ನಾ ಮಾಡುವ ಒಂದು ಅಭ್ಯಾಸ ಕಲಿಸಿದಾಗ, ಸಾಲ ಮನ್ನಾ ಮಾಡುತ್ತಿರುವ ಸಂದರ್ಭದಲ್ಲಿ ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ, ಏರು ಪೇರಿ ಆಗುತ್ತದೆ, ಹಣಕಾಸಿನ ಪರಿಸ್ಥಿತಿ ಹದಗೆಡುತ್ತದೆ ಎನ್ನತಕ್ಕಂಥ ಒಂದು ವಿಚಾರ ಹೇಳಬಹುದು. ಅದೂ ಕೂಡ ನಿಜವಿರಬಹುದು. ಹಣಕಾಸಿನ ಪರಿಸ್ಥಿತಿ ಏರು ಪೇರು ಆಗದ ರೀತಿಯಲ್ಲಿ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಳ್ಳಬೇಕು. ರೈತನಿಗೆ ಎಲ್ಲಿ ಕಷ್ಟ ಬರುತ್ತದೆಂದು ತಾವು ಗಮನಿಸಿರಬಹುದು. ತಾವು ಗ್ರಾಮಾಂತರ ಪ್ರದೇಶದಿಂದ ಬಂದಿರುವವರು. ರೈತ ಹಣವನ್ನು ಎಲ್ಲಿ ಹಾಕುತ್ತಾನೆ, ಅವನು ಎಲ್ಲಿ ಸಾಲಗಾರನಾಗುತ್ತಾನೆ ಎಂದು ಅವನ ಮೂಲ ವಿಚಾರವನ್ನು ಗಮನಕ್ಕೆ ತೆಗೆದುಕೊಂಡಾಗ, ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಅವನು ಹಣಕಾಸಿನ ಹೀನ ಸ್ಥಿತಿಗೆ ಬಲಿಬೀಳುತ್ತಾನೆ; ಆಗ ಸಾಲಗಾರನಾಗುತ್ತಾನೆ. ಒಂದು ಕಡೆ ವಿದ್ಯುಚ್ಛಕ್ತಿ ಕೊರತೆಯಿಂದ ಸಾಲಗಾರನಾಗುತ್ತಾನೆ, ಇನ್ನೊಂದು ಕಡೆ ಅವನು ಮಾಡಿದ ಉತ್ಪಾದನೆಗೆ ಸರಿಯಾದ ಬೆಲೆ ಸಿಕ್ಕದೇ ಹೋದಾಗ ಸಾಲಗಾರನಾಗುತ್ತಾನೆ. ಸರ್ಕಾರದವರು ಈ ಬಗ್ಗೆ ಒಂದು ಮಾಹಿತಿಯನ್ನು ತರಿಸಿ ಕೊಂಡರೆ ಗೊತ್ತಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಕೊಡತಕ್ಕ ಪಂಪುಸೆಟ್ಟುಗಳಿಗೆ ಕೇವಲ 28 ಪರ್ಸೆಂಟ್ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದೀರಿ, ಆದರೆ ಅದೇ ಪಟ್ಟಣದಲ್ಲಿರತಕ್ಕ ಕೈಗಾರಿಕೆಗಳಿಗೆ ಸುಮಾರು 72 ಪರ್ಸೆಂಟ್ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳಿಗೆ ಒದಗಿಸುತ್ತಿರುವ ವಿದ್ಯುಚ್ಛಕ್ತಿಯನ್ನು ನೋಡಿದರೆ 32 ಪರ್ಸೆಂಟ್ ಆದರೆ, ಅದೇ ಪಟ್ಟಣಗಳಿಗೆ 68 ಪರ್ಸೆಂಟ್ ಒದಗಿಸುತ್ತಿದ್ದೀರಿ. ಇದರ ಜೊತೆಗೆ ವಿದ್ಯುಚ್ಛಕ್ತಿಯ ಪೂರೈಕೆ ಸರಿಯಾಗಿ ಆಗದೇ ಇರುವುದರಿಂದ ವೋಲ್ಟೇಜ್ ಇರುವುದಿಲ್ಲ. ಇವತ್ತು ಸಾಮಾನ್ಯವಾಗಿ ಒಂದು ಬಾವಿಯನ್ನು ತೆಗೆದು ನೀರಾವರಿ ಸೌಲಭ್ಯವನ್ನು ಒದಗಿಸಿಕೊಳ್ಳ

ಬೇಕಾದರೆ, ಪಂಪುಸೆಟ್ಟು ಹಾಕಿಕೊಳ್ಳಬೇಕಾದರೆ ಒಬ್ಬ ರೈತನಿಗೆ ಕನಿಷ್ಠ 50 ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ಅವನು ಬೇರೆಯವರ ಹತ್ತಿರ ಸಾಲವನ್ನು ತಂದರೂ ಕೂಡ ತನ್ನ ಕೈಯಿಂದ ಸುಮಾರು 20–30 ಸಾವಿರ ರೂಪಾಯಿ ಬಂಡವಾಳ ಹೂಡಬೇಕಾಗುತ್ತದೆ. ಇಷ್ಟು ಬಂಡವಾಳ ಹೂಡಿದಮೇಲೆ ನೀವು ಸರಿಯಾಗಿ ವಿದ್ಯುಚ್ಛಕ್ತಿಯನ್ನು ರೈತನಿಗೆ ಒದಗಿಸದೇ ಹೋದರೆ ಇಡೀ ವ್ಯವಸ್ಥೆಯೇ ಹಾಳಾಗುತ್ತದೆ. ಈ ರೀತಿಯ ತೊಂದರೆಯಿಂದ ರೈತ ಪದೇ ಪದೇ ಹಾಳಾಗಿ ಸಾಲಗಾರನಾಗತಕ್ಕ ಸಂದರ್ಭ ಬಹಳ ಹೆಚ್ಚಾಗುತ್ತದೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಗ್ರೌಂಡ್‌ನಟ್ ಬೆಳೆಯನ್ನು ವಿಮಾ ಯೋಜನೆ ತಂದಿದ್ದರು. ಇದೇ ರೀತಿ ಪ್ರತಿಯೊಂದು ಬೆಳೆಗೂ ವಿಮಾ ಯೋಜನೆಯ ಪಾಲಿಸಿಯನ್ನು ತರಲು ಯೋಚನೆ ಮಾಡಬೇಕಾಗುತ್ತದೆ. ಬರಗಾಲ ಬಂದಾಗ ಆಣೆವಾರಿಯನ್ನು ಡಿಕ್ಲೇರ್ ಮಾಡುವ ಸಂದರ್ಭದಲ್ಲಿ ನಿಮ್ಮ ಸರ್ಕಾರಿ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಡದೆ, ಕೇವಲ ಸುಳ್ಳು ಮಾಹಿತಿಗಳನ್ನು ಕೊಡುತ್ತಾರೆ. ಇದರಿಂದಾಗಿ ಇಡೀ ತಾಲ್ಲೂಕಾಗಲಿ, ಜಿಲ್ಲೆಯಾಗಲಿ ಅಥವಾ ರಾಜ್ಯವೇ ಆಗಲಿ ಪೂರ್ಣವಾಗಿ ಬಲಿಯಾಗತಕ್ಕ ಪರಿಸ್ಥಿತಿ ಬಹಳ ಇದೆ. ಬಂಗಾಲ ರಾಜದಲ್ಲಿ ಎಷ್ಟು ಪರ್ಸೆಂಟ್ ಇದೆ ಎಂಬುದನ್ನು ನೋಡದೆ ಕೇವಲ ಸುಳ್ಳು ಮಾಹಿತಿಗಳನ್ನು ಕಲೆ ಹಾಕಿ ಸರ್ಕಾರಕ್ಕೆ ವರದಿ ಕೊಡುತ್ತಾರೆ. ಆ ವರದಿಯ ಆಧಾರದ ಮೇಲೆ ಆಣೆವಾರಿ ಡಿಕ್ಲೇರ್ ಆಗುತ್ತದೆ. ಇದರಲ್ಲಿ ಅನೇಕ ಲೋಪದೋಷಗ ಳಿರುತ್ತವೆ. ರೈತರ ಬಗ್ಗೆ ಸರ್ಕಾರದ ದಿಟ್ಟ ಹೆಜ್ಜೆ ಇಲ್ಲ. 10–2–90ರ ವರೆಗೆ ಏನು ಸುಸ್ತಿ ಸಾಲ ಇದೆ, ಅದನ್ನು ಸರ್ಕಾರ ಮನ್ನಾ ಮಾಡಲೇಬೇಕು. ಜೊತೆಗೆ 89ರ ಸಾಲಿನಲ್ಲಿ ಏನು ಸಾಲವನ್ನು ತೆಗೆದುಕೊಂಡಿದ್ದಾರೆ ಆ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ ಅನುಕೂಲ ಮಾಡಿಕೊಡಬೇಕು. ಜೊತೆಗೆ ಪರಿವಸರ ವಿಕೋಪದಲ್ಲಿ ರೈತನಿಗೆ ಏನು ಅನ್ಯಾಯವಾಗುತ್ತದೆ, ಅದು ಕಬ್ಬು ಬೆಳೆಗಾಗಲಿ, ರಾಗಿಗಾಗಲಿ, ಭತ್ತಕ್ಕಾಗಲಿ, ಆಲೂಗಡ್ಡೆಗಾಗಲಿ ಯಾವುದೇ ಬೆಳೆ ಇದ್ದರೂ ಕೂಡ ಅದಕ್ಕೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಮತ್ತು ಮುಂದಿನ ವರ್ಷಗಳಲ್ಲಿ ರೈತನಿಗೆ ಎಷ್ಟು ಹಣ ಬೇಕಾಗುತ್ತದೆಂಬುದನ್ನು ನೋಡಿ ಆ ಬಗ್ಗೆ ಒಂದು ಬಜೆಟ್‌ನ್ನು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳ ನಿಧಿ ಎಂದು ಏನಿದೆ ಅದೇ ರೀತಿಯಲ್ಲಿ ರೈತನಿಗೂ ಕೂಡ ಕಷ್ಟ ಬಂದಾಗ ಇರಲೆಂದು ಒಂದು ನಿಧಿಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರೈತನಿಗೋಸ್ಕರ ಪ್ರತ್ಯೇಕವಾದ ಒಂದು 50 ಕೋಟಿ ರೂಪಾಯಿಗಳ ಬಜೆಟ್‌ನ್ನು ಅಥವಾ ನಿಧಿಯನ್ನು ಮಾಡಿದರೆ ಮುಂದಿನ ವರ್ಷಗಳಲ್ಲಿ ರೈತನಿಗೆ ಇಂಥ ಅನಾಹುತಗಳಾದಾಗ, ಅನಾನುಕೂಲಗಳಾದಾಗ ಇದರಿಂದ ಸಹಾಯವಾಗುತ್ತದೆಂದು ನನ್ನ ಸಲಹೆ. ಆದ್ದರಿಂದ ಈ ವ್ಯವಸ್ಥೆಯನ್ನು ಮಾಡಬೇಕೆಂದು ನನ್ನ ಮನವಿ.

ಇನ್ನು ಮಾನ್ಯ ಸದಸ್ಯರಾದ ನಂಜುಂಡಸ್ವಾಮಿಯವರು ಹೇಳಿದರು; ಒಂದು ಕಡೆ ಅಂತರ್ ಜಿಲ್ಲಾ ಸಾಗಾಣಿಕೆ ಅಥವಾ ಅಂತರ್‌ರಾಜ್ಯ ಸಾಗಾಣಿಕೆ ವಿಚಾರದಲ್ಲಿ ವ್ಯವಸ್ಥೆ ಮಾಡುವಾಗ ಸರ್ಕಾರ ಒಂದು ನಿರ್ಬಂಧವನ್ನು ಹಾಕುತ್ತದೆ. ಬಂಗಾರಪೇಟೆಯಿಂದ ಕೋಲಾರಕ್ಕೆ ಭತ್ತವನ್ನು ತೆಗೆದುಕೊಂಡು ಹೋಗಬೇಕೆಂದರೆ ಬಂಗಾರಪೇಟೆಯಲ್ಲಿ ಒಂದು ನಿರ್ಬಂಧ ಇರುತ್ತದೆ. ಭತ್ತಕ್ಕೆ ಬೇರೇಕಡೆ ಒಳ್ಳೆಯ ಬೆಲೆ ಸಿಕ್ಕುವಂತಿದ್ದರೆ ಈ ವ್ಯವಸ್ಥೆಯನ್ನು ಸಡಿಲಿಸಬೇಕಾಗುತ್ತದೆ. ರೈತನಿಗೆ ಒಳ್ಳೆಯ ಬೆಲೆ ಸಿಕ್ಕುವಾಗ ಅಂತರ್‌ಜಿಲ್ಲಾ ಅಥವಾ ಅಂತರ್ ರಾಜ್ಯ ಭತ್ತದ ಸಾಗಾಣಿಕೆಗೆ ವ್ಯವಸ್ಥೆ ಮಾಡಿಕೊಡಬೇಕು. ಮತ್ತೆ ಬೆಳೆಗೆ ಸರಿಯಾದ ದರವನ್ನು ನಿಗದಿಮಾಡಿ. ಎಂದರೆ ಅದು ನಮ್ಮ ಕೈಯಲ್ಲಿಲ್ಲ ಕೇಂದ್ರ ಸರ್ಕಾರ ಮಾಡಬೇಕೆಂದು ಹೇಳುತ್ತಾರೆ. ಆದರೆ ಇದುವರೆವಿಗೂ ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದಿರತಕ್ಕಂಥ ಪ್ರಕರಣಗಳು ಎಲ್ಲೂ ಇಲ್ಲ. ರಾಜ್ಯಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆದು ಒತ್ತಾಯ ಮಾಡಿ, ಪ್ರೈಮಿನಿಸ್ಟರ್ ಹತ್ತಿರ ಹೋಗಿ ಮಾತನಾಡಿ ಈ ದರವನ್ನು ನಿಗದಿ ಮಾಡಬೇಕು ಎಂದು ಹೇಳಿದ ಪ್ರಕರಣ ಇವತ್ತಿನವರೆಗೂ ನಡೆದಿಲ್ಲ. ಅದನ್ನು ಮಾಡಬೇಕೆಂದು ನನ್ನ ಮನವಿ.

ಇನ್ನು ದಳ್ಳಾಳಿಗಳ ವ್ಯವಸ್ಥೆ. ರೈತರು ಬೆಳೆದಿರತಕ್ಕಂಥ ಉತ್ಪಾದನೆಗೆ ದಳ್ಳಾಳಿಗಳು ಸೇರಿಕೊಂಡು ಒಂದು ಅವ್ಯವಸ್ಥೆಯಾಗಿದೆ. ಒಂದು ಕ್ವಿಂಟಾಲ್ ಕಡಲೆಕಾಯಿಯನ್ನು ಬೆಳೆಯಬೇಕಾದರೆ ಆ ರೈತನಿಗೆ ಸುಮಾರು 800 ರೂಪಾಯಿಗಳಿಂದ 900 ರೂಪಾಯಿಗಳ ವರೆಗೆ ಖರ್ಚು ಬರುತ್ತದೆ, ಅದನ್ನು ಮಾರಿದರೆ ಅವನಿಗೆ 600–650 ರೂಪಾಯಿಗಳೇ ಸಿಕ್ಕುವುದು. ಆದರೆ ಅದೇ ದಳ್ಳಾಳಿಗೆ ಸುಮಾರು 1500 ರೂಪಾಯಿಗಳ ವರೆಗೆ ಸಿಕ್ಕುತ್ತದೆ. ಈ ದೃಷ್ಟಿಯಿಂದಲೂ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ರೈತರ ಬಗ್ಗೆ ಮಾತನಾಡುತ್ತಿರುವಾಗ ಖುರ್ಚಿಗಳೆಲ್ಲ ಖಾಲಿ ಇವೆ. ಇದನ್ನು ನೋಡಿದರೆ ರೈತರ ಬಗ್ಗೆ ಎಷ್ಟೊಂದು ಕಳಕಳಿ ಇದೆ ಎನ್ನುವುದು ಅರ್ಥವಾಗುತ್ತದೆ. ರೈತರ ಬಗ್ಗೆ ಇಷ್ಟೊಂದು ಗಹನವಾಗಿ ಚರ್ಚೆಯಾಗುತ್ತಿರಬೇಕಾದರೆ ಈ ಪರಿಸ್ಥಿತಿಯಾದರೆ ಏನು ಪರಿಸ್ಥಿತಿ.

ಚೇರ್‌ಮನ್ :– ಮಾನ್ಯ ನಾಗರಾಜ್‌ರವರೇ ನಾನು ತಮ್ಮನ್ನು ಕರೆದಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ ತಮ್ಮಲ್ಲಿ ಮನವಿ. ಪ್ರತಿಸಾರಿ ನನಗೆ ಮಾತನಾಡಲು ಅವಕಾಶವನ್ನು ಕೊಡುತ್ತಿದ್ದಿರಿ. ಈ ಸಾರಿ ಅವಕಾಶವನ್ನು ಕೊಡುತ್ತಿಲ್ಲದಿರುವುದು ಗೊತ್ತಾಗುತ್ತಿಲ್ಲ.

ಚೇರ್‌ಮನ್ :– ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ಕೋರಮ್ ಇಲ್ಲ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ಎಲ್ಲ ಪಕ್ಷದವರಿಗೂ ಮಾತನಾಡಲಿಕ್ಕೆ ದಯವಿಟ್ಟು ಅವಕಾಶ ವನ್ನು ಮಾಡಿಕೊಡಿ. ಏತಕ್ಕೆಂದರೆ ಇದು ಬಹಳ ಮುಖ್ಯವಾದ ಸಮಸ್ಯೆ.

ಚೇರ್‌ಮನ್ :– ನೀವು ಮಾತನಾಡಬೇಕಾದರೆ ಬರೆದು ಕಳುಹಿಸಿಲ್ಲ. ಪದೇ ಪದೇ ಈ ರೀತಿ ಎದ್ದು ಮಾತನಾಡುವುದು ಇದು ಎಂಥ ನಿಯಮ. ನಿಯಮಾವಳಿಗಳನ್ನು ತಾವು ಪಾಲಿಸಬೇಕು.

ಶ್ರೀ ಕೆ. ಹೆಚ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ಈ ವಿಷಯವಾಗಿ ಕೆಲವು ಮಾನ್ಯ ಸದಸ್ಯರು ಮಾತ ನಾಡಿದ್ದಾರೆ. ಉಳಿದ ಸದಸ್ಯರೂ ಮಾತನಾಡಬೇಕೆಂದಿದ್ದಾರೆ. ಅದಕೆ ನಾನು ಉತ್ತರವನ್ನು ಕೊಟ್ಟಮೇಲೆ ಅವರಿಗೆ ಸಮಾಧಾನವಾಗದಿದ್ದರೆ ಅವರು ಕ್ಲಾರಿಫಿಕೇಷನ್ ರೂಪದಲ್ಲಿ ಕೇಳಬಹುದು. ಈ ದೃಷ್ಟಿಯಿಂದ ಮಾನ್ಯ ಬೈರೇಗೌಡರಾಗಲಿ ಅಥವಾ ಮಾನ್ಯ ಈಶ್ವರಪ್ಪನವರಾಗಲಿ ಕೇಳಲಿಕ್ಕೆ ಬರುತ್ತದೆ.

ಅಧ್ಯಕ್ಷರು :– ಮಾನ್ಯ ಈಶ್ವರಪ್ಪನವರೇ ತಾವು ಏನಾದರೂ ಹೇಳಬೇಕಾದರೆ ಪಾಯಿಂಟ್ಸ್ ಹೇಳಿಡಿಬಿ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ವಿನಂತಿ ಮಾಡಿ ಕೊಳುವುದೇನೆಂದರೆ ಇದು ಪ್ರಮುಖವಾದ ವಿಷಯ. ಇದು ರಾಜ್ಯದಲ್ಲಿರುವ ಸಮಸ್ಯೆಯಾಗಿದೆ. ಆದ್ದರಿಂದ ಇಲ್ಲಿ ಪಕ್ಷದ ಮುಖಂಡರು ಕೂಡ ದಯವಿಟ್ಟು ಮಾತನಾಡಲು ಅವಕಾಶವನ್ನು ಕೊಡಬೇಕು. ಮಾನ್ಯ ಯಡಿಯೂರಪ್ಪ ನವರು ಮಾತನಾಡಿದ ತಕ್ಷಣ ಮಾನ್ಯ ಕೆ. ಹೆಚ್. ಪಾಟೀಲ್‌ರವರು ಉತ್ತರವನ್ನು ಕೊಡುವುದಕ್ಕೆ ಹೇಳಿದ್ದಾರೆ

ಚೇರ್‌ಮನ್ :– ತಾವು ಸ್ಪಷ್ಟೀಕರಣ ಕೇಳಬಹುದು, ಮಾತನಾಡಲು ತಾವು ಬರೆದು ಕಳುಹಿಸಿಲ್ಲ.

ಶ್ರೀ ಸಿ. ಬೈರೇಗೌಡ :– ಇದು ಒಂದು ದೊಡ್ಡ ಸಮಸ್ಯೆಯಾಗಿರುವುದರಿಂದ ನಾನು ಹೆಚ್ಚಿಗೆ ಮಾತ ನಾಡುವುದಕ್ಕೆ ಹೋಗುವುದಿಲ್ಲ. ನಾನು ಅವರನ್ನು ಕೇಳಿಕೊಂಡು ಇಲ್ಲಿ ಮಾತನಾಡುವುದಕ್ಕೆ ಬಂದಿರುತ್ತೇನೆಯೇ?

† ಶ್ರೀ ಕೆ. ಎಸ್. ಈಶ್ವರಪ್ಪ :– (ಶಿವಮೊಗ್ಗ) ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ರಾಜ್ಯದ ರೈತರ ಸಾಲ ಮನ್ನಾ ಬಗ್ಗೆ ವಿಧಾನ ಸಭೆ ಇಂದು ಚರ್ಚೆ ಮಾಡುತ್ತದೆಂದು ನಿನ್ನೆ ಸಭಾಧ್ಯಕ್ಷರು ಸೂಚನೆ ಕೊಟ್ಟ ತಕ್ಷಣ ಇವತ್ತು ಈ ಸದನದಲ್ಲಿ ಏನಾಗಬಹುದೆಂದು ಇಡೀ ರಾಜ್ಯದ ರೈತರು ಎದುರು ನೋಡು ತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಹತ್ತು ಜನ ಸದಸ್ಯರಿಲ್ಲದೆ ಈ ಸಭೆ ನಡೆಯುತ್ತಿರುವುದು ತುಂಬಾ ಶೋಚ-ನೀಯ. ಕೋರಂ ಕೂಡ ಇಲ್ಲದ ಸಂದರ್ಭದಲ್ಲಿ ರಾಜ್ಯದ ರೈತರ ಸಮಸ್ಯೆ ಬಗ್ಗೆ ಚರ್ಚೆ ನಡೆಯುತ್ತಿರುವುದು ತುಂಬಾ ದುಃಖದ ಸಂಗತಿ. ಏತಕ್ಕೋಸ್ಕರ ಸಾಲ ಮನ್ನಾ ಮಾಡಬೇಕು, ಏತಕ್ಕೋಸ್ಕರ ವಸೂಲಿಯನ್ನು ನಿಲ್ಲಿಸಬೇಕೆಂಬುದನ್ನು ನಿನ್ನೆಯಿಂದಲೂ ಒತ್ತೊತ್ತಿ ಹೇಳುತ್ತಿದ್ದೇವೆ. ಒಂದೇ ಒಂದು ಉದಾಹರಣೆ ಕೊಡುವು ದಾದರೆ ಒಬ್ಬ ಸಣ್ಣ ರೈತ ಶಿವಮೊಗ್ಗದಲ್ಲಿ ಒಂದು ಎಕರೆ ಜಮೀನಿನಲ್ಲಿ ಕಬ್ಬು ಬೆಳೆದಿದ್ದಾನೆ. ಮೊನ್ನೆ ಆ ವ್ಯಕ್ತಿಗೆ 8 ಸಾವಿರ ರೂಪಾಯಿಗಳ ಒಂದು ಚೆಕ್ ಬಂತು. ಆತ ಆ 8 ಸಾವಿರ ರೂಪಾಯಿಗಳಲ್ಲಿ ಇಡೀ ವರ್ಷ ಬದುಕ ಬೇಕಾಗಿತ್ತು. ಆ 8 ಸಾವಿರ ರೂಪಾಯಿಗಳ ಚೆಕ್ಕನ್ನು ಬ್ಯಾಂಕಿಗೆ ಹಾಕಿದಾಗ, ಬಾಂಕಿನವರು ಇಲ್ಲಿ ನಿನ್ನ ಸಾಲ ಇದೆ ಎಂದು ಆ 8 ಸಾವಿರ ರೂಪಾಯಿಗಳನ್ನು ಅವನ ಲೆಕ್ಕಕ್ಕೆ ಜಮಾ ಮಾಡಿಕೊಂಡರು. ಹೀಗಾದರೆ ಇಡೀ ವರ್ಷ ರೈತ ಉಪವಾಸ ಇರಬೇಕೆ ? ಸರ್ಕಾರ ಇದರ ಬಗ್ಗೆ ಗಮನ ಕೊಡದಿದ್ದರೆ ರಾಜ್ಯದ ಅನೇಕ ಬಡರೈತರು ದುಸ್ಥಿತಿಗೊಳಗಾಗಿ ಉಪವಾಸ ಬೀಳುವ ಸ್ಥಿತಿ ಬರಬಹುದು. ಇದಕ್ಕೆ ರಾಜ್ಯ ಸರ್ಕಾರ ಅವಕಾಶ ಮಾಡಿಕೊಡ ಬಾರದು. ಈ ಬಗ್ಗೆ ತಕ್ಷಣ ಆದೇಶ ಹೊರಡಿಸಿ ಬದುಕುವುದಕ್ಕೆ ದಾರಿ ಮಾಡಿಕೊಡಬೇಕೆಂದು ನಾನು ಸರ್ಕಾರ ವನ್ನು ಒತ್ತಾಯಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರಾಷ್ಟ್ರದ ಪ್ರಧಾನ ಮಂತ್ರಿಗಳ ಜೊತೆ ಮಾತನಾಡಿ ದ್ದೇನೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಅರ್ಥ ರಾಜ್ಯದ ರೈತರ ಸಾಲ ಮನ್ನಾ ಮಾಡುತ್ತೇವೆಂದೂದೇ ಅಥವಾ ಸಾಲ ವಸೂಲಿ ಮಾಡುವುದಿಲ್ಲವೆಂದೋ ಅಥವಾ ಏನು ಎಂದು ಹೇಳಬೇಕು. ಇವತ್ತಿನ ದಿವಸ ರಾಜ್ಯದ ಅನೇಕ ರೈತರು ಸಾಲ ಮನ್ನಾ ಆಗಿಬಿಟ್ಟಿದೆ ಎಂದು ಅಂದುಕೊಂಡಿದ್ದಾರೆ. ಕೇಂದ್ರದವರು ಏನು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ ಅದನ್ನು ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತರುತ್ತದೆ ಎಂದು ಹೇಳುತ್ತಿರುವುದ ರಿಂದ ರಾಜ್ಯದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾ ಆಗಿದೆ ಎಂದು ರೈತ ಅಂದುಕೊಂಡಿ ದ್ದಾನೆ. ಇವತ್ತಿನ ದಿವಸ ಅನೇಕ ಕಡೆ ಸಾವಿರಾರು ಮಂದಿ ರೈತರಿಗೆ ನೋಟೀಸ್ ಇಷ್ಯೂ ಮಾಡಿ ಬಲಾತ್ಕಾರದ ವಸೂಲಿಗೆ ಬಂದಿದ್ದಾರೆ. ಬಲಾತ್ಕಾರವಾಗಿ ವಸೂಲ್ಮಾಡುವುದಿಲ್ಲವೆಂದು ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಈ ನೋಟೀಸಿಗೆ ಅರ್ಥವಿಲ್ಲ. ಸಾಲ ಮನ್ನಾ ಆಗಿದೆ ಎಂದು ಅವರು ಅಂದುಕೊಂಡಿದ್ದಾರೆ. ನೋಟೀಸ್ ಬಂದರೆ ನೀವು ಏನು ಮಾಡಬೇಕೆಂದು ಸದನದ ಮೂಲಕ ಇಡೀ ರಾಜ್ಯದ ರೈತರಿಗೆ ಸೂಚನೆ ಕೊಡುವುದಕ್ಕೆ

ಇಷ್ಟಪಡುವುದೇನೆಂದರೆ. ಎಲ್ಲಾ ನೋಟೀಸ್‌ಗಳನ್ನು ಹರಿದು ಹಾಕಿ ಮತ್ತು ಅದಕ್ಕೆ ಬೆಂಕಿಕೊಡಿ ಎಂದು. ಈ ಸದನದಲ್ಲಿ ಈ ನೋಟೀಸ್‌ಗಳಿಗೆ ಬೆಂಕಿ ಕೊಡುವುದಕ್ಕೆ ಅವಕಾಶ ಇಲ್ಲದಿರುವುದರಿಂದ ನಾನು ಕೂಡ ಈ ನೋಟೀಸ್‌ಗಳನ್ನು ಹರಿದು ಹಾಕುತ್ತೇನೆ. (ಮಾನ್ಯ ಸದಸ್ಯರು ನೋಟೀಸ್‌ಗಳನ್ನು ಹರಿದು ಹಾಕಿದರು) ಬಲಾತ್ಕಾರದ ವಸೂಲಿಗಾಗಿ ಬಂದಿರುವ ನೋಟೀಸ್‌ಗಳನ್ನು ಈ ರೀತಿ ಹರಿದು ಎಸೆಯಿರಿ ಎಂದು ಸದನದ ಮುಖಾಂತರ ರಾಜ್ಯದ ರೈತರಿಗೆ ಮತ್ತೊಮ್ಮೆ ಕರೆ ಕೊಡುತ್ತಾ ನಾನು ಕೂಡ ಇವುಗಳನ್ನು ಹರಿದು ಹಾಕುತ್ತಾ. ಕೆಲವು ಬಣ್ಣ ಬಣ್ಣದ ನೋಟೀಸ್‌ಗಳನ್ನು ಮುಖ್ಯಮಂತ್ರಿಗಳಿಗೆ ತಲುಪಿಸುತ್ತಿದ್ದೇನೆ. ಇಂಥವು ಲಕ್ಷಾಂತರ ಇವೆ. ಈ ದಿಸೆಯಲ್ಲಿ ಇವುಗಳನ್ನು ಹರಿದು ಹಾಕುವುದರ ಮೂಲಕ ರಾಜ್ಯದ ರೈತರಿಗೆ ನಾನು ಧೈರ್ಯ ಕೊಡುತ್ತಿದ್ದೇನೆ; ಮತ್ತು ಇದಕ್ಕೆ ಬೆಂಬಲವಾಗಿ ರಾಜ್ಯದ ಮಂತ್ರಿಗಳಿದ್ದಾರೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹತ್ತು ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾ ಮಾಡಬೇಕು, ರಾಜ್ಯದ ರೈತ ಕಣ್ಣೀರಿನಲ್ಲಿ ಕೈತೊಳೆಯುತ್ತಾನೆಂದು ಎಲ್ಲ ಪಕ್ಷಗಳ ಶಾಸಕರೂ ಹೇಳುತ್ತಿದ್ದರು. ಮುಖ್ಯಮಂತ್ರಿಗಳೂ ಹೇಳುತ್ತಿದ್ದರು. ಆದರೆ ಇವತ್ತು ನಿನ್ನೆಯಿಂದ ಬೇರೆ ಧಾಟಿ ಶುರುವಾಗಿದೆ. ಏತಕ್ಕೆ ಸಾಲ ಮನ್ನಾ ಮಾಡಬೇಕೆಂದು ಕೇಳುತ್ತಿದ್ದಾರೆ. ಇದರ ಅರ್ಥ; ರಾಜ್ಯದ ರೈತರ ಬಗ್ಗೆ ಸರ್ಕಾರಕ್ಕೆ ಕಳಕಳಿ ಇಲ್ಲವೆಂದು ಸ್ಪಷ್ಟವಾಗುತ್ತಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಏತಕ್ಕೋಸ್ಕರ ಇದನ್ನು ಹಾಕಿದರು ಎಂದು ಅರ್ಥವಾಗುವುದಿಲ್ಲ. ಪ್ರಧಾನ ಮಂತ್ರಿಗಳಿಗೆ ರೈತರ ಸಾಲ ಮನ್ನಾ ಮಾಡುವುದಕ್ಕೆ ಒತ್ತಾಯ ತರುತ್ತೇವೆಂದು ಪ್ರಣಾಳಿಕೆಯಲ್ಲಿ ಹಾಕಿದ್ದಾರೆ. ಆಗ ಚುನಾವಣೆ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಮಾತ್ರ ಬೇಕಾಗಿತ್ತು. ಚುನಾವಣೆ ಆಗಿ ಅಧಿಕಾರಕ್ಕೆ ಬಂದಮೇಲೆ ಹಟತ್ತು ಸಾವಿರ ರೂಪಾಯಿಗಳನ್ನು ಏಕೆ ಮನ್ನಾ ಮಾಡಬೇಕು ಎಂದು ಕೇಳುತ್ತಿದ್ದಾರೆ. ಸಹಕಾರ ಸಂಘಗಳ ಚುನಾವಣೆಯನ್ನು ಮಾಡುತ್ತೇವೆಂದು ಸರ್ಕಾರ ಹೇಳುತ್ತಿದೆ. 99 ಪರ್ಸೆಂಟ್ ರೈತರು ಈಗಾಗಲೇ ಡಿಫಾಲ್ಟರ್ ಆಗಿದ್ದಾರೆ. ಆದ್ದರಿಂದ ದಯವಿಟ್ಟು ಈ ಚುನಾವಣೆಯನ್ನು ಮುಂದೂಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮತ್ತೆ ಮೂರು ವರ್ಷಗಳಿಂದ ರೈತರು ಬೋರ್‌ವೆಲ್‌ಗಳನ್ನು ತೆಗೆದುಕೊಂಡು ಕಾಯುತ್ತಿದ್ದರೂ ಇವತ್ತಿನವರೆಗೆ ಕರೆಂಟ್ ಕೊಟ್ಟಿಲ್ಲ. ರೈತ ಬದುಕಬೇಕೋ ಅಥವಾ ಸಾಯಬೇಕೋ ಎಂಬ ತೀರ್ಮಾನವನ್ನು ಸರ್ಕಾರ ಮಾಡಬೇಕಾಗಿದೆ.

ಶ್ರೀ ಕೆ. ಹೆಚ್. ಪಾಟೀಲ :– ಇವರು ಏನು ಮಾತನಾಡುತ್ತಿದ್ದಾರೆ, ನನಗೆ ಅರ್ಥವಾಗಲಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ :– ಉದ್ದುದ್ದ ಹೇಳಿದರೆ ಏನು ಮಾತನಾಡುತ್ತಿದ್ದಾರೆಂದು ಕೇಳುತ್ತಾರೆ, ಸಂಕ್ಷಿಪ್ತವಾಗಿ ಹೇಳಿದರೆ ಇವರಿಗೆ ಕೋಪ ಬರುತ್ತದೆ. ಸ್ಪಷ್ಟವಾಗಿ ಒಂದು, ಎರಡು, ಮೂರು, ನಾಲ್ಕು ಎಂದು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಇನ್ನು ಕೃಷಿ ಇಲಾಖೆ ಬಗ್ಗೆ ಹೇಳುತ್ತೇನೆ. ಏತಕ್ಕೋಸ್ಕರ ಈ ಕೃಷಿ ಇಲಾಖೆ ಇದೆಯೋ ಗೊತ್ತಾಗುತ್ತಿಲ್ಲ. ಅವರು ಬೀಜ ಕೊಡುತ್ತಾರಂತೆ.

ಶ್ರೀ ಕೆ. ಹೆಚ್. ಪಾಟೀಲ್ :– ನಾವು ಏನು ವಿಚಾರ ಮಾಡುವುದಕ್ಕೆ ಹೊರಟಿದ್ದೇವೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ :– ಕೃಷಿ ಅಧಿಕಾರಿಗಳು ಹೊಲಕ್ಕೆ ಹೋಗುವುದಿಲ್ಲ. ಅವರು ಕೊಡುವ ಬೀಜ ಉಪಯೋಗವಾಗುತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಅವರು ಏನು ಹೇಳುತ್ತಿದ್ದಾರೆ ಎಂದರೆ, ಕೃಷಿ ಇಲಾಖೆ ಇದೆ ಅದು ರೈತರ ಹತ್ತಿರ ಬರುತ್ತಿಲ್ಲ, ಅವರು ಕೊಡುವ ಬಿತ್ತನೆ ಬೀಜ ಹುಟ್ಟುತ್ತಿಲ್ಲ, ಅವರು ಕೊಡುವ ಔಷಧಿ ಸಿಂಪಡಿಸಿದರೆ ರೋಗ ಹೋಗುತ್ತಿಲ್ಲ, ಆದ್ದರಿಂದ ಕೃಷಿ ಇಲಾಖೆಯನ್ನು ಮುಚ್ಚಿ. ಅವರು ಕೋಟಿಗಟ್ಟಲೇ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಅದರ ಅಗತ್ಯ ಇಲ್ಲ ಎಂದು ಹೇಳುತ್ತಿದ್ದಾರೆ. ರೈತರಿಗೂ ಕೃಷಿ ಇಲಾಖೆಗೂ ಸಂಬಂಧ ಇಲ್ಲವೆ ? ನಿಮ್ಮ ಮಾತಿನಲ್ಲಿ ಏನು ಅರ್ಥವೇ ಇಲ್ಲ ಎನ್ನುವ ರೀತಿಯಲ್ಲಿ ಮಂತ್ರಿಗಳು ಹೇಳಿದರು. ಕೃಷಿ ಇಲಾಖೆಯಲ್ಲಿ ಕೋಟಿಗಟ್ಟಲೇ ಸಂಬಳ ಕೊಡುತ್ತಿದ್ದಾರೆ.

ಛೇರ್ಮನ್ :– ನೀವು ಮುಗಿಸುತ್ತೀರೋ ಇಲ್ಲವೋ ?

ಶ್ರೀ ಕೆ. ಎಸ್. ಈಶ್ವರಪ್ಪ :– ಸರ್ಕಾರದವರು ಎಷ್ಟು ಬೇಜವಾಬ್ದಾರಿಯಿಂದ ಉತ್ತರ ಕೊಡುತ್ತಿದ್ದಾರೆ. ನೀವು ಹೇಳುವುದು ಅರ್ಥವಾಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಒಂದೊಂದೇ ಪಾಯಿಂಟ್ ಹೇಳುತ್ತಾ ಹೋದರೆ ಅವರಿಗೆ ಸಿಟ್ಟು ಬರುತ್ತದೆ. ನಾನು ಏನು ಮಾಡಬೇಕೆಂದು ನೀವೇ ಹೇಳಿ. ನಾನು ಏನು ಹೇಳುತ್ತಿದ್ದೇನೆ ಎಂದರೆ, ಕೃಷಿ ಇಲಾಖೆಯಿಂದ ಕೊಡತಕ್ಕ ಬೀಜ ಹುಟ್ಟುವುದಿಲ್ಲ, ಔಷಧಿ ಹಾಕಿದರೆ ರೋಗ ಹೋಗುವುದಿಲ್ಲ. ಮನುಷ್ಯ ಕುಡಿದರೆ ಮನುಷ್ಯನೂ ಸಾಯುವುದಿಲ್ಲ. ಏತಕ್ಕೋಸ್ಕರ ಕೃಷಿ ಇಲಾಖೆ ಇರುವುದು ? ಆದ್ದರಿಂದ ಕೃಷಿ ಇಲಾಖೆಯನ್ನು ಮುಚ್ಚಿಬಿಡಿ; ಆ ಹಣವನ್ನು ರೈತರಿಗೆ ಕೊಡಿ. ಅವನು ಬದುಕುತ್ತಾನೆ. ಇಲ್ಲದಿದ್ದರೆ ನೀರಾವರಿ ಯೋಜನೆಗಳಿಗೆ ಉಪಯೋಗ ಮಾಡಿ. ಇದೆಲ್ಲಾ ಮಾಡುವುದು ಬಿಟ್ಟು ಸಾಲ ಮನ್ನಾ ಮಾಡಿ ಎಂದರೆ ಏಕೆ ಮಾಡಬೇಕು ಎಂದು ಹೇಳುತ್ತಾ ಇರುವುದು ನಾಚಿಕೆಗೇಡಿನ ಸಂಗತಿ. ಹೀಗೇ ಆದರೆ ಮುಂದೆ

ಇವರು ರೈತರ ಹತ್ತಿರ ಹೋದರೆ ರೈತರು ಯಾವ ರೀತಿ ಒದ್ದಾಡುತ್ತಿದ್ದಾರೆ ಅದೇ ರೀತಿ ಇವರೂ ಒದ್ದಾಡುವಂಥ ಪರಿಸ್ಥಿತಿ ಬರಬಹುದೆಂದು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಾ ತಕ್ಷಣ ವಸೂಲಾತಿ ನಿಲ್ಲಿಸಬೇಕು. ಹಿಂದೆ ಮುಖ್ಯ-ಮಂತ್ರಿಗಳು ಈ ಸದನಕ್ಕೆ ಆಶ್ವಾಸನೆ ಕೊಟ್ಟಂತೆ, ಪತ್ರಿಕೆಗಳಲ್ಲಿ ಬಂದಂತೆ ಸರ್ವಪಕ್ಷ ನಿಯೋಗವನ್ನು ಕೇಂದ್ರಕ್ಕೆ ಕರೆದುಕೊಂಡು ಹೋಗಬೇಕು. ಇವರು ಏನು ಕೇಂದ್ರ ಸರ್ಕಾರದ ಮನವೊಲಿಸುವಲ್ಲಿ ವಿಫಲರಾಗಿದ್ದಾರೆ ಆ ಕಾರ್ಯವನ್ನು ಸರ್ವಪಕ್ಷ ನಿಯೋಗ ಖಂಡಿತ ಮಾಡುವುದಕ್ಕೆ ಸಾಧ್ಯವಿದೆ. ಆ ದಿಕ್ಕಿನಲ್ಲಿ, ರೈತರಿಗೆ ಸಹಾಯ ಮಾಡಬೇಕು ಎಂಬ ಆಸೆ ಇದ್ದರೆ, ಸಾಲ ಮನ್ನಾ ಮಾಡಿದರೆ ರೈತ ಬದುಕುತ್ತಾನೆ ಎಂಬ ನಂಬಿಕೆ ಅವರಿಗೆ ಇದ್ದರೆ ಸರ್ವಪಕ್ಷ ನಿಯೋಗವನ್ನು ತೆಗೆದುಕೊಂಡು ಹೋಗಬೇಕು. ಇಲ್ಲದೇ ಹೋದರೆ ಬಡರೈತರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಮತ್ತು ರಾಜಕೀಯ ಮಾಡುತ್ತಿದ್ದೀರಿ ಎಂದು ಭಾವನೆ ಬರುತ್ತದೆ. ಎಂದು ಹೇಳಿ ಒಂದೇ ಒಂದು ಮಾತು ಹೇಳುತ್ತೇನೆ. ಇದನ್ನು ಒಂದು ವರ್ಷದಿಂದ ಹೇಳುತ್ತಾ ಬಂದಿದ್ದೇವೆ. ಮಾನ್ಯ ಬಸವಲಿಂಗಪ್ಪನವರು ಯಾವುದೋ ಒಂದು ರಾಜಕೀಯಕ್ಕೆ ಹೋಲಿಸಿ ಈ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ಒಂದು ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶಿವಮೊಗ್ಗದಲ್ಲಿ ದೊಡ್ಡ ಜಾತ್ರೆ ಆಯಿತು. ಸಿಕ್ಕಾಪಟ್ಟೆ ಜನ ಸೇರಿದ್ದರು. ಏಕೆಂದರೆ, ಅಲ್ಲಿ ಗಂಡಹೆಂಡತಿ ಇಬ್ಬರು ಜಗಳ ಆಡುತ್ತಿದ್ದರು. ಹೆಂಡತಿ ಪ್ರತಿ ತಿಂಗಳು ಸೀರೆ ತಂದುಕೊಡು ಎಂದು ಕೇಳುತ್ತಿದ್ದಳಂತೆ. ಗಂಡನನ್ನು 'ಯಾಕಪ್ಪ ಜಗಳ ಆಡುತ್ತೀಯಾ' ಎಂದರೆ ಪ್ರತಿಂಗಳೂ ಸೀರೆ ತಂದುಕೊಡು ಎಂದು ಕೇಳುತ್ತಿದ್ದಾಳೆ. ನಾನು ಎಲ್ಲಿಂದ ತಂದುಕೊಡಲಿ ಎಂದು ಹೇಳಿದ. ಕೊನೆಗೆ ಯಾರೋ ಕೇಳಿದರು, ಒಂದು ವರ್ಷದಿಂದ ಸೀರೆ ಕೇಳುತ್ತಿದ್ದಾಳೆ ಎಂದು ಹೇಳುತ್ತಿದ್ದೀಯೆ ಎಷ್ಟು ಸೀರೆ ತಂದುಕೊಟ್ಟಿದ್ದೀಯ ಎಂದು. ಅದಕ್ಕೆ ಅವನು ಇವತ್ತಿನವರೆಗೂ ಒಂದೂ ತಂದುಕೊಟ್ಟಿಲ್ಲ ಎಂದು ಹೇಳಿದ.

ಛೇರ್ಮನ್ :– ಇದು ರೈತರ ಸಮಸ್ಯೆಯೆ ? ಏನು ಹೇಳುತ್ತೀರಿ ?

ಶ್ರೀ ಕೆ. ಎಸ್. ಈಶ್ವರಪ್ಪ :– ಸಾಲ ಮನ್ನಾ ಮಾಡಿದ್ದರೆ ಅವರು ಕೂಗುತ್ತಿರಲಿಲ್ಲ. ಏಕೆ ಸಾಲ ಮನ್ನಾ ಮಾಡಲಿಲ್ಲ ? ಮಧ್ಯಪ್ರದೇಶದಲ್ಲಿ, ಹಿಮಾಚಲ ಪ್ರದೇಶದಲ್ಲಿ ಬಿ. ಜೆ. ಪಿ. ಯವರು ಆದರ್ಶ ಹಾಕಿ ಕೊಟ್ಟಿದ್ದೇವೆ. ಅದನ್ನು ನೋಡಿ ಮಾಡುವುದಕ್ಕಾಗುವುದಿಲ್ಲವೆ ? ಸಾಲ ಮನ್ನಾ ಮಾಡದೆ ಹೀಗೆ ಮಾಡಿದರೆ ಸರ್ಕಾರ ಬದುಕುವುದಿಲ್ಲ, ರೈತರೂ ಬದುಕುವುದಿಲ್ಲ. ಆದ್ದರಿಂದ ಸಾಲ ವಸೂಲಾತಿ ತಕ್ಷಣ ನಿಲ್ಲಿಸಬೇಕು ಮತ್ತು ಸರ್ವಪಕ್ಷ ನಿಯೋಗವನ್ನು ಕರೆದುಕೊಂಡು ಹೋಗಬೇಕು ಹಾಗೂ ರೈತರ ಸಾಲ ಮನ್ನಾ ಮಾಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಮಾನ್ಯ ಅಧ್ಯಕ್ಷರೆ......

ಶ್ರೀ ಕೆ. ಹೆಚ್. ಪಾಟೀಲ್ :– ಹೊತ್ತಾಗಿದೆ. ನೀವು ಹೇಳುವುದನ್ನು ನಾನೇ ಹೇಳುತ್ತೇನೆ ಬಿಡಿ.

ಛೇರ್ಮನ್ :– ಶಿವರಾಮೇಗೌಡರೆ ಕುಳಿತುಕೊಳ್ಳಿ. ಸಚಿವರು ಉತ್ತರ ಹೇಳಲಿ.

ಶ್ರೀ ಕೆ. ಹೆಚ್. ಪಾಟೀಲ್ :– ನಾನು ಈಗಾಗಲೇ ಪ್ರಾರಂಭ ಮಾಡಿದ್ದೇನೆ.

ಛೇರ್ಮನ್ :– ಸರ್ಕಾರ ಉತ್ತರ ಕೊಟ್ಟನಂತರ ಸ್ಪಷ್ಟೀಕರಣ ಕೇಳಬಹುದು. ತಾವು ಕುಳಿತುಕೊಳ್ಳಿ-ಮಂತ್ರಿಗಳು ಉತ್ತರ ಹೇಳಲಿ ತಾವು ಕುಳಿತುಕೊಳ್ಳಿ ಸ್ವಾಮಿ.

ಶ್ರೀ ಎಲ್. ಆರ್. ಶಿವರಾಮೇಗೌಡ :– ನಾವು ರೈತರ ಬಗ್ಗೆ ಮಾತನಾಡುವುದೇ ಬೇಡವೆ ? ಅವ-ರೊಬ್ಬರೇ ಗುತ್ತಿಗೆ ಹಿಡಿದುಕೊಂಡಿದ್ದಾರಾ ?

ಛೇರ್ಮನ್ :– ನೀವು ಅನೇಕ ಸಾರಿ ಮಾತನಾಡಿದ್ದೀರಿ.

ಶ್ರೀ ಎಲ್. ಆರ್. ಶಿವರಾಮೇಗೌಡ :– ನೀವು ವಿಧಾನಸಭೆಯಲ್ಲಿ ಏನು ಮಾಡುತ್ತಾ ಇದ್ದೀರಿ ಎಂದು ರೈತರು ನನ್ನನ್ನು ಕೇಳುತ್ತಾರೆ. ಈ ದೇಶದಲ್ಲಿ ಕೆಲವರು ರಾಮನನ್ನು ಹಿಡಿದುಕೊಂಡು ದೇಶಕ್ಕೆಲ್ಲಾ ಬೆಂಕಿ ಹಚ್ಚಿಯಾಗಿದೆ. ರೈತರನ್ನಾದರೂ ಅವರಿಂದ ಬಿಡಿಸಿ; ಅದನ್ನಾದರೂ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ರಾಮನನ್ನು ಹಿಡಿದುಕೊಂಡು ಅಧಿಕಾರ ಕಳೆದುಕೊಂಡವರು ಯಾರು ? ದಳ್ಳುರಿ ಮಾಡುತ್ತಿದ್ದೀರಾ ? ಈರೀತಿ ಬೇಜವಾಬ್ದಾರಿಯಿಂದ ಮಾತನಾಡುವುದನ್ನು ಕೈಬಿಡಿ. ರಾಮನ ಹೆಸರಿನಲ್ಲಿ ಈ ಮಾತನಾಡಿದರೆ ಸರ್ವನಾಶವಾದೀತು.

(ಗೊಂದಲ)

ಸಹಕಾರ ಸಚಿವರಿಂದ ಉತ್ತರ

† ಶ್ರೀ ಕೆ. ಹೆಚ್. ಪಾಟೀಲ್ (ಸಹಕಾರ ಸಚಿವರು) :– ಸನ್ಮಾನ್ಯ ಅಧ್ಯಕ್ಷಿಣಿಯವರೇ, ಶ್ರೀಮಾನ್ ಯಡಿಯೂರಪ್ಪನವರಿಂದ ಪ್ರಾರಂಭವಾದ ಈ ಚರ್ಚೆ ಶ್ರೀ ಮಾನ್ ಈಶ್ವರಪ್ಪನವರಿಗೆ ಬಂದು ಮುಗಿಯಿತ. ಚರ್ಚೆಯಲ್ಲಿ ಬಹಳ ಹೊತ್ತು ಮಾತನಾಡಿದರೂ ಕೂಡಾ ಫಲಿತಾಂಶ ಪ್ರಾಮುಖ್ಯವಾಗಿ ರೈತರ ಸಾಲ